

# ಬಯಲು Bayalu

## ಹೆಜ್ಜೆಗುರುತು–1 Footprints–1

ಬಯಲು ೧೦೦ರ ಸಂಭ್ರಮಕ್ಕೆ ಹಿಂದಿನ ಸಂಚಿಕೆಗಳ ಬರಹಗಳು ನಾಲ್ಕು ಸಂಪುಟಗಳಲ್ಲಿ

Bayalu 100th Issue Celebration: Revisiting the Memories of Previous Editions in Four Volumes

Azim Premji Foundation

# ಬಯಲು Bayalu
## 100 ರ ಸಂಭ್ರಮ

## ಹೆಜ್ಜೆಗುರುತು 1

ಬಯಲು ಪತ್ರಿಕೆಯ ಕಳೆದ 99 ಸಂಚಿಕೆಗಳಲ್ಲಿ ಬಂದ ಬರಹಗಳಲ್ಲಿ 100 ಬರಹಗಳನ್ನು 4 ಸಂಪುಟಗಳಲ್ಲಿ ಪ್ರಕಟಿಸುತ್ತಿದ್ದು, ಅದರ ಮೊದಲ ಸಂಪುಟ ಇಲ್ಲಿದೆ. ಉಳಿದ ಮೂರು ಸಂಚಿಕೆಗಳು ಮುಂದಿನ ಮೂರು ವಾರಗಳಲ್ಲಿ ನಿಮ್ಮ ಕೈ ಸೇರಲಿದೆ.

– ಬಯಲು ಬಳಗ

## ಬಯಲಲ್ಲಿ ಹೆಜ್ಜೆಗುರುತುಗಳು!

ಬಯಲಲ್ಲಿನ ಹೆಜ್ಜೆಗುರುತುಗಳನ್ನು ಹಿಂದಿರುಗಿ ಒಮ್ಮೆ ನೋಡಿದಾಗ ಏನೇನೋ ಭಾವನೆಗಳು. ಹೆಜ್ಜೆಗುರುತುಗಳ ವೈವಿಧ್ಯ ಚಿತ್ರಗಳು. ತರಹ ತರಹದ ಹೆಜ್ಜೆಗುರುತುಗಳು. ಹಾಗೆ ನೋಡಿದರೆ ನಮ್ಮ ಹೆಜ್ಜೆಗುರುತುಗಳನ್ನು ಬಯಲಲ್ಲಿ ಹುಡುಕಿದಾಗ ಸಿಕ್ಕದೆ ಸಂಕಟವಾದದ್ದು ಇದೆ. ಪೂರ್ಣ ಮರೆತ ಒಂದು ನಡೆಯ ಗುರುತು ಸಿಕ್ಕಿದಾಗ ಆಶ್ಚರ್ಯ ಪಟ್ಟದ್ದೂ ಇದೆ. ಹುಡುಕಲು ಹೋದದ್ದು ನಮ್ಮ ಹೆಜ್ಜೆಗಳನ್ನು. ಆದರೆ ಸಂಜೆ ಹೊತ್ತಿಗೆ ಇತರರ ಹೆಜ್ಜೆಗುರುತುಗಳನ್ನು ನೋಡಿ ಮೈಮರೆತದ್ದೂ ಇದೆ. ಎಷ್ಟೊಂದು ಹೆಜ್ಜೆಗಳು, ಎಷ್ಟೊಂದು ಭಿನ್ನ.... ಕೆಲವು ಪುಟ್ಟದು, ಕೆಲವು ದೊಡ್ಡದು, ಕೆಲವು ಗಟ್ಟಿ ಊರಲ್ಪಟ್ಟದ್ದು, ಇನ್ನು ಕೆಲವು ಮೃದುವಾಗಿ ಇಟ್ಟದ್ದು. ಕಳೆದು ಹೋದ ಹೆಜ್ಜೆಗುರುತುಗಳು ಕೆಲವಾದರೆ ಅಚ್ಚಳಿಯದೆ ಉಳಿದಿರುವ ಹೆಜ್ಜೆಗುರುತುಗಳು ಕೆಲವು. ನೋಡುತ್ತಾ, ಮೆಲಕು ಹಾಕುತ್ತಾ ಇರುವುದೇ ಒಂದು ಅನುಭವ. ಆ ಅನುಭವವನ್ನು ಅನುಭವಿಸಲು ಅನುವು ಮಾಡಿಕೊಟ್ಟಿದ್ದಾರೆ ರಾಘವೇಂದ್ರ ಹೇರ್ಳೆಯವರು. ಒಟ್ಟು ಹಾಕಿ ನಮಗೆ ನೀಡಿದ ಎಲ್ಲರಿಗೂ ಧನ್ಯವಾದಗಳು.

ಬಯಲಿನ 99 ಸಂಚಿಕೆಗಳಿಂದ ಆಯ್ದ ಬರಹಗಳ ಈ ಸಂಪುಟ ನಿಮಗೆ ಇಷ್ಟ ಆಗಬಹುದು ಎಂಬ ವಿಶ್ವಾಸದೊಂದಿಗೆ 4 ಕಂತಿನ ಈ ಸಂಕಲನದ ಮೊದಲ ಕಂತನ್ನು ನಿಮ್ಮ ಮಡಿಲಿಗೆ ಹಾಕುತ್ತಿದ್ದೇವೆ. ಓದಿ ಆನಂದಿಸಿ.

**– ಉಮಾಶಂಕರ್ ಪೆರಿಯೋಡಿ**

## ‘ಬಯಲುದಾರಿ’

**ಬಯಲದಾರಿಯಲ್ಲೊಂದಿಷ್ಟು ಹೊತ್ತು**

**ನೆನಪಿನ ಬುತ್ತಿಯ ಸವಿತುತ್ತು !!**

ಸಹೃದಯರೇ,

ನಮ್ಮ ನಿಮ್ಮೆಲ್ಲರ ನೆಚ್ಚಿನ ‘ಬಯಲು’ ಮಾಸಪತ್ರಿಕೆಯ 100ನೇ ವಿಶೇಷ ಸಂಚಿಕೆಯನ್ನು ಹೊರತರುತ್ತಿರುವ ಈ ಶುಭ ಸಂದರ್ಭದಲ್ಲಿ ಅದಕ್ಕೆ ಪೂರಕವಾಗಿ ಕಳೆದ ಎಂಟು ವರ್ಷಗಳಲ್ಲಿ ಅಂದರೆ 2012ರಿಂದ 2020ರ ವರೆಗಿನ ಈ ಸುದೀರ್ಘ ಪಯಣದಲ್ಲಿ ಪ್ರಕಟಗೊಂಡ ಎಲ್ಲಾ ಸಂಚಿಕೆಗಳಿಂದ ಆಯ್ದ 100 ಬರೆಹಗಳನ್ನು ಸಂಕಲಿಸಿ ‘ಬಯಲುದಾರಿ’ ಎಂಬ ಹೆಸರಿನ ಸಂಪುಟವನ್ನು ನಿಮ್ಮ ಕೈಗಿಡುತ್ತಿದ್ದೇವೆ. ಹೇಳಿ ಕೇಳಿ ಇದು ನಮ್ಮ ನಿಮ್ಮೆಲ್ಲರದೇ ಬರೆಹ ವೈವಿಧ್ಯಗಳಿಂದ ಕೂಡಿದ ಆವೃತ್ತಿ. ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಅನುವಾದ, ಭಾಷೆ, ಗಣಿತ, ವಿಜ್ಞಾನ, ಚರಿತ್ರೆ, ವಿಮರ್ಶೆ, ಪ್ರವಾಸ, ಸ್ವಾನುಭವ ಹೀಗೆ ಹಲವು ಮಜಲುಗಳಲ್ಲಿ ಈ ಸಂಕಲನವು ತೆರೆದುಕೊಂಡಿದ್ದು ಒಂದು ರೀತಿಯಲ್ಲಿ ನಾವು ನಡೆದು ಬಂದ ದಾರಿಯ ಅವಲೋಕನದಂತಿದೆ.

ಫೌಂಡೇಷನ್ ನ ಸದಸ್ಯರು, ನಾಯಕರು, ಫೆಲೋ, ಕ್ಯಾಂಪಸ್ ಅಸೋಸಿಯೇಟ್ಸ್, ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಶಾಲಾ ಶಿಕ್ಷಕರು ಹೀಗೆ ಅನೇಕ ಮಂದಿ ವಿವಿಧ ಸಂದರ್ಭಗಳಲ್ಲಿ ಬರೆದ ಲೇಖನಗಳು, ಕವಿತೆಗಳು, ಪ್ರಬಂಧಗಳನ್ನು ಇಲ್ಲಿ ಕಾಣಿಸಲಾಗಿದೆ. ಇದೊಂದು ಅಪರೂಪದ ಸಂಕಲನವೆಂದು ನಾವು ಪರಿಭಾವಿಸುತ್ತೇವೆ. ಬಹು ಹಿನ್ನೆಲೆಗಳಿಂದ, ಬಹುಮೂಲಗಳಿಂದ ಬಂದಿರುವ, ವಿಭಿನ್ನ ದೃಷ್ಟಿಕೋನಗಳ, ವಿವಿಧ ಒಲವು-ನಿಲುವುಗಳುಳ್ಳ ವ್ಯಕ್ತಿಗಳು ಇಲ್ಲಿ ತಮ್ಮನ್ನು ತೆರೆದುಕೊಂಡಿದ್ದಾರೆ. ಹಾಗಾಗಿ ಒಬ್ಬೊಬ್ಬರ ಶೈಲಿಯೂ ಇಲ್ಲಿ ಅನನ್ಯ. ಅಂತೆಯೇ ಅವರು ಆಯ್ಕೆ ಮಾಡಿಕೊಂಡ ವಿಷಯವಸ್ತುವೂ ವಿಭಿನ್ನ. ನಿಯತವಾಗಿ ಬಯಲಿಗೆ ಬರೆದವರೂ ಇಲ್ಲಿದ್ದಾರೆ. ಆಗೊಮ್ಮೆ ಈಗೊಮ್ಮೆ ಬರೆಯುವವರೂ ಸಿಗುತ್ತಾರೆ. ಅನುಭವಿಗಳು, ಹೊಸಬರು ಹೀಗೆ ಎಲ್ಲರೂ ತಂಡಸ್ಫೂರ್ತಿಯಿಂದ ಬರೆಯುತ್ತಿದ್ದಾರೆ. ಹಾಗೂ ಅಷ್ಟೇ ಜತನದಿಂದ ಅವುಗಳನ್ನು ಕಾಲಕಾಲಕ್ಕೆ ಸಂಪಾದಿಸಿ, ವಿನ್ಯಾಸಗೊಳಿಸಿ, ಕಲಾ ಮೆರುಗಿನೊಂದಿಗೆ ಸಕಾಲಕ್ಕೆ ಸರಿಯಾಗಿ ಬಿಡುಗಡೆ ಮಾಡುತ್ತಾರೆ. ಓದುತ್ತಾ ಹೋದಂತೆ ಓದುತ್ತಾ ಹೋದಂತೆ ಇವರೆಲ್ಲರ ಪ್ರಾಮಾಣಿಕ ಪರಿಶ್ರಮ ನಮ್ಮ ಮನಸ್ಸನ್ನು ತುಂಬಿಕೊಂಡಂತೆಯೇ ಹೊಚ್ಚ ಹೊಸದಾದ, ಅಷ್ಟೇ ತಾಜಾತನದಿಂದ ಕೂಡಿದ ಬರೆಹ ಲೋಕವೊಂದು ನಮ್ಮ ಅರಿವಿಗೆ ಬರುವುದರಲ್ಲಿ ಎರಡು ಮಾತಿಲ್ಲ.

ಶಿಕ್ಷಕರು ಹಾಗೂ ಶಿಕ್ಷಣ ಅಧಿಕಾರಿವರ್ಗದವರೊಂದಿಗಿನ ನಿಕಟ ಒಡನಾಟದ ಅನುಭವಗಳು, ನಿಯತವಾದ ಓದಿನ ಮೂಲಕ ದಕ್ಕಿಸಿಕೊಂಡ ಒಳನೋಟಗಳು, ಸೃಜನಾತ್ಮಕ ಪ್ರತಿಭೆಯ ಮೂಸೆಯಿಂದ ಅರಳಿದ ಹೊಳಹುಗಳು, ಕ್ಷೇತ್ರಾನುಭವದ ಫಲಶ್ರುತಿಯಿಂದ ಮೂಡಿದ ಸ್ವಾನುಭವ ಮಾದರಿಯ ಕಥನಗಳು, ತರಗತಿ ಕೋಣೆಯಲ್ಲಿ ನಡೆಸಿದ ಪ್ರಯೋಗಗಳ ಫಲಿತಾಂಶಗಳು, ಶಿಕ್ಷಣ ಕ್ಷೇತ್ರದಲ್ಲಿ ನಿಸ್ಪೃಹ ಸೇವೆಗೈದ ಹಿರಿಯರ ಜೀವನಾದರ್ಶಗಳನ್ನು ಕುರಿತ ಬರೆಹಗಳು, ಭಾಷೆ, ಸಾಹಿತ್ಯ, ವಿಜ್ಞಾನ, ಗಣಿತ, ಚರಿತ್ರೆ ಮೊದಲಾದ ವಿವಿಧ ಶೈಕ್ಷಣಿಕ ಶಿಸ್ತುಗಳ ಪರಿಕಲ್ಪನಾತ್ಮಕ ಗ್ರಹಿಕೆ ಮತ್ತು ಪ್ರತಿಫಲನಗಳನ್ನು ಬಿಂಬಿಸುವ ವಿಚಾರಗಳೆಲ್ಲವೂ ಇಲ್ಲಿ ಅಡಕವಾಗಿರುವುದು ನಿಜಕ್ಕೂ ಸೋಜಗದ ಸಂಗತಿ.

ಇಲ್ಲಿ ಪ್ರಕಟಗೊಂಡ ಬರೆಹಗಳು ಕೇವಲ ಪ್ರಾತಿನಿಧಿಕವಷ್ಟೆ. ಇಲ್ಲಿಲ್ಲದ ಇತರ ಬರೆಹಗಳೂ ಅಷ್ಟೇ ಪ್ರಾಮುಖ್ಯವನ್ನು ಪಡೆದಿವೆ. ಅಂದರೆ ಇಷ್ಟೂ ವರ್ಷಗಳಲ್ಲಿ ಬಯಲು ಹಾದಿಯ ಹೆಜ್ಜೆಗುರುತುಗಳನ್ನು ಇಡಿಕಿರಿದಂತೆ ಸಂಗ್ರಹಾತ್ಮಕವಾಗಿ ಕಟ್ಟಿಕೊಡಲು ಇಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇವೆ. ಈ ಎಂಟು ವರ್ಷಗಳಲ್ಲಿ ಕಡಿಮೆಯೆಂದರೂ ಸಾವಿರಾರು ಬರೆಹಗಳು ಬೆಳಕು ಕಂಡಿವೆ. ನೂರಾರು ಬರೆಹಗಾರರು ಅನಾವರಣಗೊಂಡಿದ್ದಾರೆ. ಈ ಮೂಲಕ ಅವರೆಲ್ಲರ ಸೃಜನಾತ್ಮಕ ಅಭಿವ್ಯಕ್ತಿಗೊಂದು ವೇದಿಕೆಯಾಗಿ, ಧ್ವನಿಯಾಗಿ ‘ಬಯಲು’ ಮುನ್ನೆಲೆಗೆ ಬಂದದ್ದು ನಮಗೆಲ್ಲರಿಗೂ ತುಂಬಾ ಸಂತೋಷದ ಸಂಗತಿಯಾಗಿದೆ. ಮತ್ತೊಮ್ಮೆ ಒಳಸರಿದು ನಮ್ಮದೇ ಬರೆಹಗಳನ್ನು ಮೆಲುಕು ಹಾಕೋಣ. ನಡೆದು ಬಂದ ಹಾದಿಯ ಈ ಅವಲೋಕನ ನಮ್ಮ ಅರಿವಿನ ದಿಗಂತವನ್ನು ಇನ್ನಷ್ಟು ವಿಸ್ತರಿಸುವಂತಾಗಲಿ. ಇನ್ನಷ್ಟು ಹೊಸತನಗಳಿಗೆ ನಮ್ಮನ್ನು ತೆರೆದುಕೊಳ್ಳಲು ಚಿಮ್ಮುಹಲಗೆಯಾಗಲಿ. ಮತ್ತಷ್ಟು ನಾವೀನ್ಯ, ಆವಿಷ್ಕಾರಶೀಲತೆ, ಪ್ರಯೋಗಶೀಲತೆ, ಸ್ವೋಪಜ್ಞತೆ, ಪ್ರಗತಿಪರವಾದ ಕಾಣ್ಕೆಯನ್ನು ರೂಢಿಸಿಕೊಳ್ಳಲು ಈ ಸಂಕಲನವು ಮುನ್ನುಡಿಯಾಗಲಿ ಎಂಬ ಹಾರೈಕೆ ನಮ್ಮೆಲ್ಲರದು. ಎಂದಿನಂತೆ ಮುಂದೆಯೂ ನಿಮ್ಮೆಲ್ಲರ ಸಹಕಾರವಿರಲಿ. ನಮ್ಮದೇ ಹಿಂದಣ ಹೆಜ್ಜೆಗಳನ್ನು ತಡವುತ್ತಾ ಓದುವ ಸುಖ ನಿಮ್ಮದಾಗಲಿ.. ಹಾಗೆಯೇ ನಿಲ್ದಾಣಗಳಿಲ್ಲದ ನಿಡಿದಾದ ಪಯಣದ ಹಾದಿ ಬಯಲಿನದಾಗಲಿ

– ರಾಘವೇಂದ್ರ ಹೇರ್ಳೆ

(ರಾಘವೇಂದ್ರ ಹೇರ್ಳೆ ಅವರು ‘ಬಯಲು’ ಪತ್ರಿಕೆಯ ಹಿಂದಿನ 99 ಸಂಚಿಕೆಗಳನ್ನು ನೋಡಿ, ಅದರಿಂದ 100 ಬರೆಹಗಳನ್ನು ಆಯ್ಕೆ ಮಾಡಿದ್ದಾರೆ. ಅವರ ಅನುಭವದ ಮಾತು ಮೇಲಿನವು. )

## ಪರಿವಿಡಿ


| ಕ್ರ. ಸಂ. | ವಿಷಯ | ಲೇಖಕರು | ಪುಟ ಸಂಖ್ಯೆ |
|---|---|---|---|
| 1 | ಕೊರೋನಾ – 3 ಟಿಪ್ಪಣಿಗಳು | ಉಮಾಶಂಕರ ಪೆರಿಯೋಡಿ | 6 |
| 2 | ಅಮ್ಮಾ ಶಾಲೆ ಯಾವಾಗ ಆರಂಭ ಆಗುತ್ತೆ.........? | ಸುಜಾತ ಕೊಪ್ಪಲ್‌ಕಾಡ್, ಬಾಗಲಕೋಟೆ | 8 |
| 3 | ಮೌನ ಹೋರಾಟಕ್ಕೆ ಸಹನೆಯ ಬೆಳಕು | ರವಿ ಬಿ.ಟಿ. ಮಂಡ್ಯ | 10 |
| 4 | ವಿನತಿ | ಶಿವಾಜಿ, ಬೀದರ್ | 12 |
| 5 | ಶ್ರೀಮಂತರು ಸಂಪತ್ತಿನ ಟ್ರಸ್ಟಿಗಳು | ಅಜ್ಹೀಮ್ ಪ್ರೇಮ್‌ಜಿ (ಅನು:ರಾಮಕೃಷ್ಣ) | 13 |
| 6 | ಆಲದ ಮರದ ಕೆಳಗೆ | ಅನುರಾಗ್ ಬೆಹರ್ | 15 |
| 7 | Paradoxes in terming the State as Secular | Ravindra Jain, Mandya | 17 |
| 8 | ಹಳ್ಳಿ ಜೀವನದ ನನ್ನ ಅನುಭವಗಳು | ಗುರುರಾಜ್ ಬುಧ್ಯ, ಬೆಂಗಳೂರು | 18 |
| 9 | Blackboard - A Window to the World | Akshata Belludi, Koppala | 20 |
| 10 | Kotreshi Kanasu - review of a Kannada movie on school education | Sreekanth Shreedharan, Bengaluru | 21 |
| 11 | ದಿನಚರಿ ಬರೆವಣಿಗೆ ಮತ್ತು ಶಿಕ್ಷಣ | ಹರಿಪ್ರಿಯಾ ಜೆ. ಮಂಡ್ಯ | 24 |
| 12 | ಸೃಜನಾತ್ಮಕತೆಯನ್ನು ಹೊರಗೆಡುಹುವ ವೇದಿಕೆ ಬಯಲು: ಪೆರಿಯೋಡಿ | ರಾಘವೇಂದ್ರ ಹೇರ್ಳೆ, ಬೆಂಗಳೂರು | 27 |
| 13 | Place Value of a Number | Bibi Raza Khanam, Koppala | 30 |
| 14 | Need for Sustainability in Innovations | Rajesh, Vijayapura | 32 |
| 15 | Revisiting the Gandhian Understanding of Leadership, his Ideas, and Values for a better World | Sanjay Daniel, Ballary | 33 |
| 16 | ಕಮಲ ಕಾಳನ ತಂಗಿ | ಪುನೀತ್ ಎಸ್. ಮಂಡ್ಯ | 35 |
| 17 | ಇದೊಂದು ಆಕಸ್ಮಿಕವೇ? ಅಪರಾಧವೇ? | ನಾಗಾನಂದ ಜಿ.ವಿ. ಮಂಡ್ಯ | 37 |
| 18 | ಚಿಮ್ಮಾ ಇದಲಾಯಿ | ಶಿವಲಿಂಗಪ್ಪ, ಬೀದರ್ | 39 |
| 19 | ನಾನು 'ಬಯಲು' | ಶಿವಕುಮಾರ ಸಿ.ಎಸ್. ಬಾಗಲಕೋಟೆ | 42 |
| 20 | ನಾವೂ ನಗುತ್ತೇವೆ | ಲೋಹಿತ್ ಚಾಮನೂರು, ಯಾದಗಿರಿ | 43 |
| 21 | ಡ್ರ್ಯಾಗನ್ ಫ್ರೈ | ಚಿಕ್ಕವೀರೇಶ ಎಸ್.ವಿ. ಬಾಗಲಕೋಟೆ | 44 |
| 22 | ಪದೇ ಪದೇ ಕಾಡುವ ಪ್ರಸಂಗಗಳು | ಹಮೀದ್ ಮಂಜೇಶ್ವರ್, ಕೊಪ್ಪಳ | 45 |
| 23 | ಬಿಂದು | ರಾಘವೇಂದ್ರ ಹೇರ್ಳೆ, ಬೆಂಗಳೂರು | 46 |
| 24 | ಶಾಲೆಗಳಲ್ಲಿ ಪ್ರಾರ್ಥನೆಗಳು ಇರಬೇಕೇ? | ರಾಘವೇಂದ್ರ ಬಿ.ಟಿ. ಬಳ್ಳಾರಿ | 48 |
| 25 | ರಾಷ್ಟ್ರೀಯ ಶಿಕ್ಷಣ ನೀತಿ–2019 | ಶೌರೀಶ್ ಕುದ್ಕುಳಿ, ಬೆಂಗಳೂರು | 51 |

# ಕೊರೋನಾ – 3 ಟಿಪ್ಪಣಿಗಳು

**– ಉಮಾಶಂಕರ ಪೆರಿಯೋಡಿ**

**ಟಿಪ್ಪಣಿ 1: ಕೋವಿಡ್–19 ಮತ್ತು ಸಾರ್ವಜನಿಕ ಕೆಲಸ**

ಕೋವಿಡ್–19 ಬಂದಿದೆ, ಹರಡುತ್ತಿದೆ! ಆದರೂ ಲಾಕ್‌ಡೌನ್‌ನಿಂದಾಗಿ, ಎಷ್ಟು ವೇಗವಾಗಿ ಅದು ಹರಡಬೇಕಿತ್ತೋ ಅಷ್ಟು ವೇಗವಾಗಿ ಹರಡುವುದಿಲ್ಲ! ಲಾಕ್‌ಡೌನ್‌ನಿಂದ ಸರಕಾರಕ್ಕೆ, ಈ ಖಾಯಿಲೆಗೆ ತುತ್ತಾಗುವ ಜನರ ಸಂಖ್ಯೆಯನ್ನು, ಸ್ವಲ್ಪ ಮಟ್ಟಿಗೆ ನಿಯಂತ್ರಿಸುವುದಕ್ಕೆ ಆಗಿದೆ. ಹಾಗೂ ಅದರ ಹರಡುವಿಕೆ ಕನಿಷ್ಠವಿರುವಂತೆ ಇರುವಂತೆ ನೋಡಿಕೊಳ್ಳುವುದಕ್ಕೆ ಆಗಿದೆ. ಈ ನಿಧಾನಗತಿಯ ಹರಡುವಿಕೆ, ನಮ್ಮ ಸರಕಾರಕ್ಕೆ ಅದನ್ನು ನಿಭಾಯಿಸಲು ಹಾಗೂ ನಿಯಂತ್ರಿಸಲು ಸಹಾಯವಾಗಬಹುದು. ಹಾಗೆ ನೋಡಿದಾಗ, ಇದು, ಈವತ್ತು ನಾಳೆ ಶಮನವಾಗುವ ಖಾಯಿಲೆಯಲ್ಲ. ತಜ್ಞರು ಹೇಳುವ ಪ್ರಕಾರ ನಮ್ಮ ಹತೋಟಿಗೆ ಬರಲು 7–8 ತಿಂಗಳು ಬೇಕು.

ಈ ವೈರಸ್ಸಿನಿಂದ ಭಾರತದ ಅಸಮಾನ ಸಮಾಜದ ಅಮಾನವೀಯ ಮುಖಗಳು ಗೋಚರವಾಯಿತು. ಅಂತಿಮವಾಗಿ, ಸರಕಾರಕ್ಕೆ ಮಾತ್ರ ಈ ಪರಿಸ್ಥಿತಿಯನ್ನು ನಿಭಾಯಿಸುವುದು ಸಾಧ್ಯವೆ ಹೊರತು ಯಾವುದೆ ಖಾಸಗಿ ಸಂಸ್ಥೆಯಿಂದ ಸಾಧ್ಯವಿಲ್ಲ ಎಂಬುದು ಖಚಿತವಾಯಿತು. ಸರಕಾರದ ಜೊತೆಗೆ ಸರಕಾರದ ಕೈಯನ್ನು ಗಟ್ಟಿಗೊಳಿಸಲು ಸಮಾಜ ಸೇವಾ ಸಂಸ್ಥೆಗಳು ಈ ಸಂದರ್ಭದಲ್ಲಿ ತುಂಬಾ ಚೆನ್ನಾಗಿ ಕೆಲಸಮಾಡುವುದನ್ನು ನಾವು ನೋಡಿದ್ದೇನೆ. ಫೌಂಡೇಷನ್ ಕೂಡಾ ಸರಕಾರದ ಈ ಪ್ರಯತ್ನಕ್ಕೆ ಸಹಾಯಮಾಡುವುದಾಗಿ ನಿರ್ಧರಿಸಿದೆ. ಸಹಾಯ ಎರಡು ಕ್ಷೇತ್ರದಲ್ಲಿ ಮಾಡುವುದು ಎಂದು ನಿಶ್ಚಯಿಸಿದೆ. ಒಂದು, ಮಾನವೀಯ ನೆಲೆಯಲ್ಲಿ ನಿರ್ಗತಿಕರಿಗೆ, ಕಷ್ಟದಲ್ಲಿ ಇರುವ ಜನಾಂಗಕ್ಕೆ, ಆಹಾರ ಹಾಗೂ ಅಗತ್ಯ ವಸ್ತುಗಳನ್ನು ಒದಗಿಸುವುದು. ಇದು ಸಿದ್ಧಪಡಿಸಿದ ಊಟದ ರೀತಿಯಲ್ಲಿ ಇರಬಹುದು, ಅಥವ ರೇಷನ್ ನೀಡುವುದುರ ಮೂಲಕ ಇರಬಹುದು. ಎರಡು, ಆರೋಗ್ಯ ಹಾಗೂ ವೈದ್ಯಕೀಯ ಸಹಾಯ. ಇಲ್ಲಿ ನಾವು ಕ್ಷೇತ್ರದಲ್ಲಿ ಕೆಲಸಮಾಡುವ ವೈದ್ಯಕೀಯ ಕಾರ್ಯಕರ್ತೆಯರಿಗೆ – ಅಂಗನವಾಡಿ, ಆಶಾ ಹಾಗೂ ಇತರೆ ಕಾರ್ಯಕರ್ತೆಯರು – ಮೂಲಭೂತ ಸ್ವರಕ್ಷಣಾ ಸಲಕರಣೆಗಳು (ಪಿಪಿಇ) ಅಂದರೆ, ಅವರ ಕರ್ಥವ್ಯಕ್ಕೆ ಬೇಕಾದ ಮಾಸ್ಕ್, ಇತ್ಯಾದಿಗಳನ್ನು ಒದಗಿಸುವುದು. ಮುಂದುವರಿದು, ವೈದ್ಯಕೀಯ ಪರೀಕ್ಷೆ ಮತ್ತು ಶುಶ್ರೂಷೆಗೆ ಬೇಕಾದ ಆಸ್ಪತ್ರೆ, ಇತ್ಯಾದಿ ವ್ಯವಸ್ಥೆ. ಹೀಗೆ ಅಗತ್ಯವಿರುವ ಯಾವುದೆ ಸಹಾಯ ಮಾಡಲು ತಯಾರಾಗಿದ್ದೇವೆ. ಈ ಸಹಾಯ, ನಾವು ಕೆಲಸಮಾಡುವ ರಾಜ್ಯ ಹಾಗೂ ಜಿಲ್ಲೆಗಳಲ್ಲಿ ಮಾತ್ರ ಹೆಚ್ಚು ಮಾಡುತ್ತೇವೆ. ನಾವು ಎಂದರೆ ಇಲ್ಲಿ ಫೌಂಡೇಷನ್, ಯುನಿವರ್ಸಿಟಿ, ಫೈಲಾಂತ್ರಫಿ ಹಾಗೂ ವಿಪ್ರೋ. ಎಲ್ಲವು ಒಟ್ಟು ಸೇರಿ ಒಂದು ಘಟಕವಾಗಿ, ಪರಿಣಾಮಕಾರಿಯಾಗಿ, ಕೆಲಸಮಾಡುತ್ತಿದ್ದೇವೆ.

ನಮ್ಮ ಎಲ್ಲಾ ಸದಸ್ಯರೂ ಈಗ, ಈ ಮಹಾಮಾರಿಯ ವಿರುದ್ಧ ಕೆಲಸಮಾಡುತ್ತಿದ್ದೇವೆ. ಈಗಾಗಲೆ, ರಾಜ್ಯಮಟ್ಟದಲ್ಲಿ ಉತ್ತಮವಾದ ಒಂದು ತಂಡ, ಸರಕಾರದ ಜೊತೆಗೆ ನೇರ ಸಂಪರ್ಕದಲ್ಲಿದೆ. ಜಿಲ್ಲಾ ಮಟ್ಟದಲ್ಲಿ, ಎಲ್ಲಾ ಜಿಲ್ಲೆಯಲ್ಲು, ಜಿಲ್ಲಾ ಆಡಳಿತದ ಜೊತೆಗೆ ಸಂಪರ್ಕ ಬೆಳೆಸಿ, ಅವರಿಗೆ ಬೇಕಾದ ಕೆಲಸ, ಅಗತ್ಯ ವಸ್ತುಗಳನ್ನು ಒದಗಿಸಿದ್ದೇವೆ. ಕೆಲಸವು ಜಿಲ್ಲೆಗಳಲ್ಲಿ, ಆರೋಗ್ಯ ಸಂಬಂಧಿ ವಸ್ತುಗಳನ್ನು ಒದಗಿಸಿದ್ದೇವೆ. ಮುಂದಿನ ದಿನಗಳಲ್ಲಿ ನಾವು, ಮಾನವೀಯ ಸಹಾಯ ಮುಂದುವರೆಸಲಿದ್ದೇವೆ. ಕಲಬುರ್ಗಿ, ಬೀದರ್ ಮತ್ತು ಬಳ್ಳಾರಿಯಲ್ಲಿ ಜಿಲ್ಲಾಡಳಿತದ ಜೊತೆಗೆ ಆರೋಗ್ಯ ಹಾಗೂ ವೈದ್ಯಕೀಯ ಕ್ಷೇತ್ರಕ್ಕು ಸಹಾಯಮಾಡಲಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಎಲ್ಲಾ ಜನರೂ ಜಿಲ್ಲೆಗಳಲ್ಲಿ ಇರಲಿಲ್ಲ. ಜಿಲ್ಲೆಯಲ್ಲಿ ಯಾರು ಇದ್ದರೊ ಅವರು ಅದ್ಭುತವಾಗಿ ಕೆಲಸ ಮಾಡಿದ್ದಾರೆ. ಇದು ಹೊಸ ಕೆಲಸ, ಅಭಿವೃದ್ಧಿ ಕ್ಷೇತ್ರದಲ್ಲಿ ಅನುಭವ ಪಡೆದು ಬಂದವರು ಇದನ್ನು ತುಂಬಾ ಚೆನ್ನಾಗಿ ನಿಭಾಯಿಸಿದ್ದಾರೆ. ಕೆಲವು ಕಡೆಯಲ್ಲಿ ಬರೆ ಸ್ವಲ್ಪ ಸದಸ್ಯರು ಇದ್ದರೂ, ಅದ್ಭುತವಾದ ಕೆಲಸವನ್ನು ಎಲ್ಲಾ ಎಡರುತೊಡರುಗಳ ಮಧ್ಯಮಾಡಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲು, ಅಲ್ಲಿಯ ವ್ಯವಸ್ಥೆ ನಮ್ಮನ್ನು ಇನ್ನೊಂದು ರೀತಿಯಲ್ಲಿ ನೋಡಲು ಪ್ರಾರಂಭಿಸಿದೆ. ಕಷ್ಟಗಾಲದಲ್ಲಿ ತನ್ನ ಜೊತೆಗಿದ್ದಾರೆ ಎದು ಆಡಳಿತಕ್ಕೆ ಮನದಟ್ಟಾಗಿದೆ. ನಮ್ಮ ಸದಸ್ಯರಿಗೆ, ಕಷ್ಟದಲ್ಲಿರುವವರಿಗೆ ನಾವು ಸಹಾಯಮಾಡಬೇಕು ಮಾಡಬೇಕು ಎಂದು ಸ್ಪಷ್ಟವಾಗಿದೆ. ಈ ಆರೋಗ್ಯ ಕ್ಷೇತ್ರ ನಮ್ಮೆಲ್ಲರಿಗೆ ಹೊಸತು, ಕಲಿತು ಮಾಡಲು ಸಮಯವಿಲ್ಲ. ಆದರೆ ಕೆಲಸಮಾಡುತ್ತ ಕಲಿಯುತ್ತಾ ಪರಿಣಾಮಕಾರಿಯಾಗಿ ನ್ಮನ್ನು ನಾವು ತೊಡಗಿಸಿಕೊಂಡಿದ್ದೇವೆ. ಹೀಗೆ, ರಿಸ್ಕ್ ತಗೊಂಡು ಕೆಲಸಮಾಡಿದ ನಮ್ಮೆಲ್ಲ ಸದಸ್ಯರಿಗೆ ನಾವು ಆಭಾರಿಗಳಾಗಿದ್ದೇವೆ.

**ಟಿಪ್ಪಣಿ 2: ಕೋವಿಡ್–19 ಮತ್ತು ಮನೆಯಿಂದ ಕೆಲಸ**

ಇದು ನಮ್ಮೆಲ್ಲರಿಗು ಹೊಸತು. ಭಾರತದಲ್ಲಿ ಹೆಚ್ಚಾಗಿ ಕಂಡುಬರುವುದು, ಒಂದು ಕಡೆ ಮನೆಯಲ್ಲಿ ಏನೂ ಕೆಲಸಮಾಡದೆ ಇರುವ ಮತ್ತು ಮನೆ ಬೇಸರವಾಗುವ ಗಂಡಸರು. ಇನ್ನೊಂದು ಕಡೆ ಮನೆ ಕೆಲಸಮಾಡಿ ಮಾಡಿ ಬೇಸತ್ತು ಹೋದ ಹೆಂಗಸರು. ಈಗ ಸ್ಥಿತಿ ತುಂಬಾ ಬದಲಾಗಿದೆ. ಮನೆಯಲ್ಲಿ ಇರಬೇಕಾದ ಕಠಿಣ ಪರಿಸ್ಥಿತಿ. ಜೊತೆಗೆ ಮನೆಯಲ್ಲಿ ಫೌಂಡೇಷನ್ನಿನ ಕೆಲಸಮಾಡುವ ಸವಾಲು – ಆಶ್ಚರ್ಯಕರ! ಯಾಕೆಂದರೆ, ಇದು ನಮಗೆ ಹೊಸತು, ಅಭ್ಯಾಸ ಇಲ್ಲ. ಹಾಗಾಗಿ ಕೆಲಸಮಾಡಲು ಸಾಕಷ್ಟು ತಯಾರಿ ಬೇಕಾಗುತ್ತದೆ. ಮುಖ್ಯವಾಗಿ ನಮಗೆ ಒಂದು ಕಮಿಟ್‌ಮೆಂಟ್ ಬೇಕಾಗುತ್ತದೆ. ಇಲ್ಲಿ, ನಮ್ಮನ್ನು ನೋಡಲು ಯಾರೂ ಇಲ್ಲದಿರುವುದರಿಂದ ನಮ್ಮ ಬದ್ಧತೆ ತುಂಬಾ ಮುಖ್ಯ. ಅದುವೆ ನಮ್ಮನ್ನು ಕೆಲಸಮಾಡುವ ಹಾಗೆ ಮಾಡುವುದು. ಬದ್ಧತೆಯಿಲ್ಲದ ಮನೆಯಲ್ಲಿ, ಒಂದು ಕಡ್ಡಿ ಆಚೆಯಿಂದ

ಈಚೆಗೆ ಇಡಲು ಸಾಧ್ಯವಿಲ್ಲ. ಬದ್ಧತೆ ಜೊತೆಗೆ, ತುಂಬ ಮುಖ್ಯವಾದ್ದು ಸೆಲ್ಫ್ ಡಿಸಿಪ್ಲಿನ್. ಈ ಸ್ವಶಿಸ್ತು ಇಲ್ಲದಿದ್ದರೆ, ದಿನ ಹೇಗೆ ಹೋಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ.

ಬದ್ಧತೆ ಮತ್ತು ಸ್ವಶಿಸ್ತು ಮನೆಯಲ್ಲಿ ಮಾಡುವ ಕೆಲಸಕ್ಕೆ ಅಡಿಪಾಯ. ಈ ಅಡಿಪಾಯದ ಮೇಲೆ ನಿಲ್ಲುವ ಕಟ್ಟಡವೆ ಯೋಜನೆ ಹಾಗೂ ಪರಿವೀಕ್ಷಣೆ. ನಮಗೆ ಗಟ್ಟಿಯಾಗಿರುವ ಒಂದು ಯೋಜನೆ ಬೇಕಾಗುತ್ತದೆ. ದೀರ್ಘಕಾಲದ ಹಾಗೂ ತಕ್ಷಣದ ಒಂದು ಯೋಜನೆ. ಯೋಜನೆ ಮಾತ್ರ ಸಮಗ್ರವಾಗಿರಬೇಕಾಗುತ್ತದೆ. ಪ್ರತಿದಿನ, ಪ್ರತಿಗಂಟೆ ಏನುಮಾಡುತ್ತೇವೆ, ಹಾಗೂ ಯಾವ ಉದ್ದೇಶ ಸಾಧನೆಗೆ ಮಾಡುತ್ತೇವೆ ಎಂಬ ಬಗ್ಗೆ ಸ್ಪಷ್ಟತೆ ಬೇಕಾಗುತ್ತದೆ. ಹೀಗೆ ಉದ್ದೇಶ ಬದ್ಧ ಯೋಜನೆ ಇದ್ದಾಗ ಪರಿವೀಕ್ಷಣೆ ಮಾಡಿಕೊಳ್ಳುವುದು ಸಲೀಸಾಗುತ್ತದೆ. ನಿಯಮಿತವಾಗಿ ಈ ಪರಿವೀಕ್ಷಣೆ ಮಾಡಬೇಕು ಮತ್ತು ನಮ್ಮ ಮೌಲ್ಯಮಾಪನ ನಾವು ಮಾಡಿಕೊಳ್ಳಬೇಕು. ಇದು ನಮ್ಮ ಕೆಲಸವನ್ನು ಪರಿಣಾಮಕಾರಿ ಮಾಡುವುದಕ್ಕೆ ಅನುಕೂಲಮಾಡುತ್ತದೆ. ಕೆಲವರು ಇದನ್ನು ಪ್ರತಿದಿವಸ ಪ್ರತಿಕ್ಷಣ ಎಂಬಂತೆ ತಮ್ಮ ಮುಂದೆ 'ಥಿಂಗ್ಸ್ ಟು ಡು – ಟೆಸ್ಟ್' ಇಟ್ಟುಕೊಂಡೆ ಮುಂದುವರೆಯುತ್ತಾರೆ. ಈ ದಿನ ಹೇಗಾಯ್ತು ಎಂದು ಸಂಜೆ ಈ ಪಟ್ಟಿಯನ್ನು ನೋಡುತ್ತಾರೆ. ಈ ರಿವ್ಯೂ ನೀವು ವೈಯುಕ್ತಿಕವಾಗಿ ಮಾಡಬೇಕು. ಮತ್ತೆ ನಿಮ್ಮ ಸೂಪರ್‌ವೈಸರ್/ಲೀಡರ್ ಜೊತೆಗೆ ಮಾಡಬೇಕು. ವಾರದ ಕೊನೆಗೆ ನಿಮ್ಮ ಈ ಚಾರ್ಟ್ ಸ್ವಮಾರ್ಗದರ್ಶಕವಾಗುತ್ತದೆ.

ಮನೆಯಲ್ಲಿ ಒಂದು ಜಾಗಮಾಡಿಕೊಳ್ಳಿ, ಕೆಲಸಮಾಡಲು. ನಿಗದಿತ ಸಮಯವಿರಲಿ. ಅದು ಬೆಳಗ್ಗೆ 9ರಿಂದ ಸಂಜೆ 6. ಅಂದರೆ 9ಕ್ಕೆ ಮುಂಚೆ ಮತ್ತು 6ರ ಮೇಲೆ ಮನೆಯವರ ಒಟ್ಟಿಗೆ ಚೆನ್ನಾಗಿರಿ. ಅವರ ಕೆಲಸದಲ್ಲಿ ಸಹಾಯಮಾಡಿ, ನೀವು ಮನೆ ಕೆಲಸದಲ್ಲಿ ಸಮವಾಗಿ ಭಾಗವಹಿಸಿ. ಕೆಲಸಮಾಡುವಾಗ, ಮಧ್ಯೆಮಧ್ಯೆ, ಬ್ರೇಕ್ ತೆಗೆದುಕೊಳ್ಳಿ. ನಿಮ್ಮ ದೇಹಕ್ಕೆ ಆಗಾಗ ಎಕ್ಸರ್‌ಸೈಜ್ ಕೊಡಿ, ರೆಸ್ಟ್ ಕೊಡಿ, ಬದಲಾವಣೆ ಕೊಡಿ. ಇದು ತುಂಬಾ ಮುಖ್ಯ. ಎಲ್ಲದಕ್ಕಿಂತಲೂ ಮನೆ ಮನೆಯಾಗಿಯೆ ಇರಲಿ. ಅದನ್ನು ಆಫೀಸ್ ಮಾಡಬೇಡಿ. ಅವರವರಿಗೆ ಅವರ ಸ್ವತಂತ್ರತೆ ಇರಲಿ. ತಮಾಷೆ, ಹಾಸ್ಯ, ಗಲಾಟೆ ಎಲ್ಲ ಇರಲಿ. ನೀವು ಮನೆಯಲ್ಲಿ ಇರುವುದು ಅವರಿಗೆ ಖುಷಿಯಾಗಬೇಕು, ಬೇಸರವಲ್ಲ.

**ಟಿಪ್ಪಣಿ 3: ಕೋವಿಡ್ ಬಿಚ್ಚಿಟ್ಟ ಭಾರತದ ಕರಾಳ ಮುಖ**

ಭಾರತ 28 ದಿವಸದ ಕಾಲ ಲಾಕ್ ಡೌನ್ ಘೋಷಿಸಿದಾಗ, ಮುಂದೆ ಎಲ್ಲವೂ ಶಾಂತವಾಗುತ್ತದೆ ಎಂದು ಅನ್ನಿಸುವಾಗ, ಮಹಾಪಟ್ಟಣಗಳಿಗೆ ವಲಸೆ ಬಂದ ಮಂದಿ ಬೇರೆ ಗತಿ ಇಲ್ಲದೆ, ತನ್ನ ಊರಿಗೆ ಹೋಗುವ ದೃಶ್ಯ ನಮ್ಮನ್ನೆಲ್ಲ ತಲ್ಲಣಗೊಳಿಸಿದೆ. ಹಸಿವಿನಿಂದ, ಬಾಯಾರಿಕೆಯಿಂದ, ಕೈಯಲ್ಲಿ ಒಂದು ಕಾಸೂ ಇಲ್ಲದೆ, ಖಾಲಿ ಹೊಟ್ಟೆ ಖಾಲಿ ಕೈಯಲ್ಲಿ, ಹೆಂಡತಿ ಮಕ್ಕಳ ಜೊತೆ, ತಮ್ಮತಮ್ಮ ಊರಿಗೆ ಭಯಭೀತರಾಗಿ, ನಿರ್ಗತಿಕರಾಗಿ, ಮರಳಿದ ದೃಶ್ಯ ಅತ್ಯಂತ ಭೀಕರವಾದ ದೃಶ್ಯ. ಮಾಡಿದ ಕೆಲಸಕ್ಕು ಕೂಲಿ ಸಿಗದೆ, ಬರಿ ಕೈಯಲ್ಲಿ, ಮುಂದೇನು ಎಂದು ಯೋಚನೆಯೆ ಇಲ್ಲದೆ, ಹಿಂದೆ ಹೋಗುವ ದೃಶ್ಯ. ಎಂತ ಕರಾಳವಾದ ದಿನಗಳು ಅವು. ಹೇಗೆಹೇಗೋ ಆ ಮಂದಿ ತಮ್ಮತಮ್ಮ ಊರಿಗೆ ತಲಪಿದರು. ಈ ಸಂದರ್ಭ ಸ್ವಯಂಸೇವಾ ಸಂಸ್ಥೆಗಳ ಪಾತ್ರವು ದೊಡ್ಡದಿತ್ತು. ಮೊತ್ತಮೊದಲಿಗೆ ಭಾರತ ಸರಕಾರ ತತ್ತರಿಸಿ ಹೋದ್ದು ಆಗ. ಈ ದೃಶ್ಯವನ್ನು ನೋಡಿದ ಸರಕಾರಕ್ಕೆ ಹೀಗಾಗಬಹುದು ಎಂಬ ಆಲೋಚನೆಯೆ ಬಂದಿರಲಿಲ್ಲ ಕಾಣುತ್ತದೆ. ಲಾಕ್‌ಡೌನಿನ ತಯಾರಿ ಎಲ್ಲವೂ ಮೇಲ್ವರ್ಗ ಹಾಗೂ ಮಧ್ಯಮ ವರ್ಗವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮಾಡಿದ ಹಾಗಿತ್ತು. ಆ ಸಂದರ್ಭ, ವಲಸೆಬಂದ ಜನರನ್ನು ಗಮನಿಸಿದ ಹಾಗೆ ಇಲ್ಲ. ಇಂದಿಗೂ ಈ ನಿರ್ಗತಿಕರ ಜೀವನದ ಬಗ್ಗೆ ತನ್ನ ಯೋಜನೆ ಏನೆಂದು ಎಲ್ಲೂ ಸಮಗ್ರವಾಗಿ ಸರಕಾರ ಪ್ರಕಟಿಸಿದ ಹಾಗಿಲ್ಲ. ಮುಂದೆ ಪ್ರಕಟಿಸಬಹುದು. ಎಲ್ಲರಿಗು ಗೊತ್ತಿದ್ದ ಹಾಗೆ ಇಕಾನಮಿಯಲ್ಲಿ ತುಂಬಾ ದೊಡ್ಡ ಪಾತ್ರ ಈ ನಿರ್ಗತಿಕರದ್ದೆ ಇದೆಯಲ್ಲ! ಪಟ್ಟಣಗಳನ್ನು ಕಟ್ಟುವುದು, ಬೆಳೆಸುವುದು, ಹಾಗೂ ಅವನ್ನು ಜೀವಂತವಾಗಿ ನಡೆಸಿಕೊಂಡು ಹೋಗುವವರು, ಈ ವಲಸೆ ಬಂದ ನಿರ್ಗತಿಕರು! ಆದರೆ, ಲಾಕ್‌ಡೌನ್ ಆದಾಗ, ಈ ಜನರಿಗೆ ಯಾವುದೆ ರೀತಿಯ ಸಹಾಯವಿರಲಿಲ್ಲ. ಅಷ್ಟುದಿನ ಕೆಲಸಮಾಡಿದ ಕೂಲಿ ಸಹ ಸಿಗಲಿಲ್ಲ. ಇರಲು ಸೂರಿಲ್ಲ. ಹಾಗೆಯೆ ಹಸಿವಿನಿಂದ ಬೀದಿಯಲ್ಲೆ ಸಾಯುವುದನ್ನು ಯೋಚಿಸಿಯೆ ಆ ಮಂದಿ ತಮ್ಮ ಊರಿಗೆ ಹೊರಟದ್ದು. ಅಷ್ಟು ಬೇಕಾದ ಆ ಮಂದಿ ಒಂದೆ ದಿವಸದಲ್ಲಿ ಬೇಡದವರೂ, ಯಾರಿಗೂ ಬೇಡವಾದವರು ಆದರು. ಅವರ ಮಾತು ತುಂಬ ಮಾರ್ಮಿಕವಾಗಿತ್ತು. "ಹೊರಗೆ ಹೋದರೆ ಕೊರೋನಾದಿಂದ ಸಾಯುತ್ತೇವೆ. ಹಾಗಂತ ಮನೆಯೊಳಗೆ ಇದ್ದರೆ ಹಸಿವಿನಿಂದ ಸಾಯುತ್ತೇವೆ. ಇದು ಭಾರದಲ್ಲಿ, ಆಹಾರ ಧಾನ್ಯ ನಮಗೆ ಬೇಕಾಗುವುದಕ್ಕಿಂತ ಮೂರು ಪಾಲು ಹೆಚ್ಚು ನಮ್ಮ ಸರಕಾರದ ದಾಸ್ತಾನಿನಲ್ಲಿ ಇದ್ದಾಗಲೂ! ಭಾರತದ ಕರಾಳ ಮುಖ ಇದು. ಇದು ಒಂದು ಶ್ರೀಮಂತ ಮನೆಯಲ್ಲಿ, ಅಣ್ಣ ತಮ್ಮಂದಿರು ಇರುವ ಮನೆಯಲ್ಲಿ, ಒಬ್ಬ ತಮ್ಮ ಹೊಟ್ಟೆಗೆ ಇಲ್ಲದೆ ಸತ್ತ ಹಾಗೆ.

ಕೊರೋನಾಗೆ ಮದ್ದು ಕಂಡು ಹಿಡಿಯುತ್ತಾರೆ. ಯಾಕೆಂದರೆ, ಅದು ನಮಗೆ ನಿಮಗೆ ಎಲ್ಲರಿಗೂ ಯಾವುದೆ ಬೇಧಭಾವ ಇಲ್ಲದೆ ಬರುತ್ತದೆ, ಕೊಲ್ಲುತ್ತದೆ. ಅದಕ್ಕಾಗಿ ಅದಕ್ಕೆ ಮದ್ದು, ಲಸಿಕೆ ತಕ್ಷಣ ಕಂಡುಹಿಡಿಯುತ್ತಾರೆ. ಆದರೆ ಬಡವರ ಸಮಸ್ಯೆ ಬರೀ ಬಡವರ ಸಮಸ್ಯೆ. ಆದುದರಿಂದ, ಅದನ್ನು ಬಗೆಹರಿಸುವುದಿಲ್ಲ. ಈ ಅಸಮಾನತೆಯನ್ನು, ಸರಿಪಡಿಸದಿದ್ದರೆ, ನಮಗೆಉಳಿಗಾಲವೆ ಇಲ್ಲ. ನೆಮ್ಮದಿಯ ಬದುಕೆ ಇಲ್ಲ.

ಈ ಬಗ್ಗೆ ನಿಖಿಲ್ ಡೇ ಅವರು ಮೊನ್ನೆ ನಮ್ಮೊಂದಿಗೆ ಹೇಳಿದ ಮಾತು ತುಂಬಾ ಮಾರ್ಮಿಕವಾಗಿದೆ. ಬಡವರಿಗೆ ಸ್ಟೇಟ್ ಅಟ್ ಹೋಂ ಹೆಚ್ಚು ಸಹಾಯವಾಗುವುದಿಲ್ಲ. ಯಾಕೆಂದರೆ, ಅವರ ಮನೆಯ ಪರಿಸ್ಥಿತಿಯು ಕರೋನಾ ಹೆಚ್ಚು ಬೇಗ ಹರಡುವ ಹಾಗಿದೆ! ಎರಡು ಜನ ಉಳಿದುಕೊಳ್ಳುವ ಜಾಗದಲ್ಲಿ 10–12 ಜನರಿದ್ದಾರೆ. ಡಿಸ್ಟೆನ್ಸ್ ಎಲ್ಲಿಂದ ಬಂದೀತು? ಪ್ರತಿ ಒಂದಕ್ಕೂ ಹೊರಗೆ ಸಾರ್ವಜನಿಕ ಸ್ಥಳಕ್ಕೆ ಹೋಗಲೇ ಬೇಕಾಗುತ್ತದೆ. ಹೌದಲ್ಲ ಎನ್ನಿಸಿತು ನಮಗೆಲ್ಲ. ಅವರು ಇನ್ನೊಂದು ತುಂಬಾ ಮುಖ್ಯವಾದ ವಿಚಾರ ಹೇಳಿದರು. Universalization of food, livelihood and health. ಇದನ್ನು ತುಂಬಾ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಯಾಕೆಂದರೆ ಬೇರೆ ದೇಶಗಳಲ್ಲಿ, ಮತ್ತೆ ನಮ್ಮ ದೇಶದಲ್ಲು, ಕೇರಳದಂತ ರಾಜ್ಯದಲ್ಲು, ಕರೋನಾವನ್ನು ಹದ್ದುಬಸ್ತಿನಲ್ಲಿಡಲು ಸಾಧ್ಯವಾದ್ದು ಪಬ್ಲಿಕ್ ಸಿಸ್ಟಂನಿಂದಲೆ. ಅಂದರೆ, ಸಾರ್ವಜನಿಕ ವ್ಯವಸ್ಥೆಗಳು ಪರಿಣಾಮಕಾರಿಯಾಗಿ ಕೆಲಸಮಾಡುವುದರಿಂದ. ಅಲ್ಲಿಯ ಮತ್ತು ನಮ್ಮ ಸಾರ್ವಜನಿಕ (ಪಡಿತರ) ವಿತರಣಾ ವ್ಯವಸ್ಥೆ, ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಶಿಕ್ಷಣ ವ್ಯವಸ್ಥೆ– ಇವು ಎಲ್ಲವೂ ಚೆನ್ನಾಗಿ, ಸಮರ್ಪಕವಾಗಿ ಕೆಲಸಮಾಡುವುದರಿಂದ. ಹಾಗೇನೆ, ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು, ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆಗಳಂತವುಗಳಿಂದ. ಕೆಲಸಮಾಡಲಿ ಚ್ಛಿಸುವವರಿಗೆ ಕೆಲಸ ಒದಗಿಸುವುದು ತುಂಬಾ ತುಂಬಾ ಮುಖ್ಯವಾಗುತ್ತದೆ. ಅದನ್ನು ತುಂಬಾ ವಿಸ್ತರಿಸಿದರೆ, ಜನ ತಮ್ಮ ಹಳ್ಳಿಗಳಿಂದ ವಲಸೆ ಹೋಗುವುದು ತಪ್ಪಿಸಿದಂತಾಗುತ್ತದೆ. ಅದರಲ್ಲಿ ಸಿಗುವ ಹಣವು ಒಂದು ಗೌರವಯುತವಾಗಿ ಕುಟುಂಬ ಜೀವನ ನಡೆಸಲು ಸಹಾಯಮಾಡುವ ಹಾಗಾಗಬೇಕಿದೆ. ಸರಕಾರ ಸಾಕಷ್ಟು ಸಾರ್ವಜನಿಕ ವ್ಯವಸ್ಥೆ ಹಾಗೂ ಸಾರ್ವಜನಿಕರ ಅಗತ್ಯ ಸೇವೆಗಳಿಗೆ ತುಂಬಾ ಹೆಚ್ಚು ಹಣ ಒದಗಿಸಬೇಕಾಗುತ್ತದೆ. ಹೆಚ್ಚು ಹಣ ಖರ್ಚುಮಾಡುವವರು ಹೆಚ್ಚು ಟ್ಯಾಕ್ಸ್ ಕೊಡಬೇಕಾಗುತ್ತದೆ. ಸರಕಾರ ಈ ಹಣವನ್ನು ಜನಸಾಮಾನ್ಯರ ಹಿತಕ್ಕಾಗಿ ಖರ್ಚುಮಾಡಬೇಕಾಗುತ್ತದೆ. ಈ ರೀತಿ ಭಾರತ ಹೆಚ್ಚು ಸಮಾನತೆ ಕಡೆಗೆ ಹೋಗದಿದ್ದರೆ ಇಂತಹ ಅನಾಹುತಗಳು ಪುನಹ ಬರುವುದು ಖಂಡಿತ. ಶಾಂತಿ ನೆಮ್ಮದಿಯ ಸಮಾಜಕ್ಕೆ ಸಮಾನತೆ ಅಡಿಪಾಯವಾಗಿದೆ. ಆದುದರಿಂದಲೆ, ಸಮಾನತೆಯುಳ್ಳ ಸಮಾಜದತ್ತ ಕೆಲಸಮಾಡುವುದು ಎಲ್ಲಕ್ಕಿಂತಲೂ ಮುಖ್ಯವಾಗುತ್ತದೆ. ಕರೋನಾ ಭಾರತದ ಈ ಅಸಮಾನತೆಯ ಕರಾಳ ಮುಖವನ್ನು ತುಂಬಾ ಭಯಂಕರವಾಗಿ ನಮ್ಮ ಮುಂದೆ ತೆರೆದಿಟ್ಟಿದೆ. ಇದು ನಮ್ಮೆಲ್ಲರಿಗು ಸಮ–ಸಮಾಜದತ್ತ ಕೆಲಸಮಾಡಲು ಪ್ರೇರೇಪಿಸುತ್ತದೆ ಎಂಬ ನಂಬಿಕೆ ನನಗಿದೆ. ಈ ನಿಟ್ಟಿನಲ್ಲಿ ವೈಯುಕ್ತಿಕವಾದ ನಿರ್ಧಾರ ತೆಗೆದುಕೊಳ್ಳುವ ಸಮಯ, ಹಾಗೇನೇ, ಸಾಮೂಹಿಕವಾಗಿ, ಸಮಾನತೆಯತ್ತ ಕೆಲಸಮಾಡಲು ಬೇರೆಯವರೊಂದಿಗೆ ಸೇರಿಕೊಂಡು ಕೆಲಸಮಾಡಲು ನಿರ್ಧಾರ ತೆಗೆದುಕೊಳ್ಳುವ ಸಮಯ. ನಿಮಗೆ ಒಳ್ಳೆಯದಾಗಲಿ.

**(ಸಂಚಿಕೆ 92, ಏಪ್ರಿಲ್ 2020)**

## ಅಮ್ಮಾ ಶಾಲೆ ಯಾವಾಗ ಆರಂಭ ಆಗುತ್ತೆ.........?

**–ಸುಜಾತ ಕೊಪ್ಪಲ್‌ಕಾಡ್, ಜಿಲ್ಲಾ ಸಂಸ್ಥೆ ಬಾಗಲಕೋಟೆ**

ಅಮ್ಮಾ ಇವತ್ತೇ ಶಾಲೆ ಶುರು ಅಲ್ವಾ......! ಎಂದು ಕೇಳುತ್ತಲೇ ಹಾಸಿಗೆಯಿಂದ ಮೇಲೇಳುತ್ತಿದ್ದೆ. ರಜೆ ಮುಗಿಯುವುದಕ್ಕೆ ಮೊದೇ ಶಾಲೆ ಯಾವಾಗಲೊಮ್ಮೆ ಆರಂಭವಾಗುತ್ತದೋ ಎಂಬ ಕಾತರ ತಡೆದುಕೊಳ್ಳಲಿಕ್ಕೆ ಸಾಧ್ಯವಿರಲಿಲ್ಲ.

ಬೇಸಗೆಯ ಎರಡು ತಿಂಗಳ ರಜೆಯನ್ನು ಮಜಾವಾಗಿ ಕಳೆದ ನಂತರ ಶಾಲೆ ಶುರುವಾಯಿತೆಂದರೆ ಎಲ್ಲಾ ಮಕ್ಕಳಿಗೆ ಅದು ನೋವಿನ ವಿಷಯವಾಗುತ್ತಿತ್ತು. ಆದರೆ ನಮಗೆ ಮಾತ್ರ ಅದೊಂದು ಖುಷಿಯ ವಿಚಾರವಾಗಿತ್ತು. ಅದಕ್ಕೆಲ್ಲಾ ಕಾರಣ ನಮ್ಮ ಮೆಚ್ಚಿನ ಶಿಕ್ಷಕರು. ನಮ್ಮ ಶಿಕ್ಷಕರು ನಮ್ಮ ಪೋಷಕರಿಗೆ ಒಂದು ಕಿವಿ ಮಾತು ಹೇಳಿದ್ದರು. ಅದರಂತೆ ನಮ್ಮ ಪೋಷಕರು ನಡೆದುಕೊಳ್ಳುತ್ತಿದ್ದರು. ಅದಕ್ಕೆ ನಮಗೆಲ್ಲಾ ಮೇ ತಿಂಗಳ ಕೊನೆಯ ವಾರ ಮುಗಿಯುತ್ತಿದ್ದಂತೆ ಶಾಲೆ ಯಾವಾಗೊಮ್ಮೆ ಆರಂಭವಾಗುತ್ತದೋ ಎಂಬ ಕಾತರ ಇರುತ್ತಿತ್ತು.

ಎರಡು ತಿಂಗಳ ರಜೆಯಲ್ಲಿ ಅಜ್ಜಿ ಮನೆ, ಅತ್ತೆ ಮನೆ ಅಂತ ಎಲ್ಲಾ ಕಡೆಗೂ ಹೋಗಿ ಆಟವಾಡಿ, ಗೆಳೆಯರ ಜೊತೆಗೆ ಸೇರಿ ಕಿಲಾಡಿತನ ಮಾಡಿ ಮನೆಯವರಿಂದ ಬೈಗಳು ತಿಂದು, ನೆರೆಮನೆಯವರಿಂದ ಉಗಿಸಿಕೊಂಡು, ಅಂತೂ ನಮ್ಮ ಕಿತಾಪತಿಗಳಿಗೆ ಮಾತ್ರ ಸ್ವಲ್ಪವೂ ಲೋಪ ಆಗದಂತೆ ಕಿಲಾಡಿತನ ಮಾಡುತ್ತಿದ್ದೆವು. ಮೇ ತಿಂಗಳು ಮುಗಿಯುತ್ತಿದ್ದಂತೆ ಮತ್ತೆ ಶಾಲೆಗೆ ಹೋಗಬೇಕಲ್ಲಾ ಎಂಬ ಚಿಂತೆ ನಮಗೂ ಇರುತ್ತಿತ್ತು. ಶಾಲೆಗೆ ಹೋದ ನಂತರ ಮೊದಲ ಒಂದು ವಾರ ಸಪ್ಪಗೆ ಕುಳಿತುಕೊಂಡು ಗತಕಾಲದ (ಎರಡು ತಿಂಗಳ ರಜೆಯಲ್ಲಿ ಕಳೆದ ಕ್ಷಣಗಳನ್ನು) ಅಮೂಲ್ಯ ಕ್ಷಣಗಳನ್ನು ನೆನೆದುಕೊಂಡು ನಿಟ್ಟುಸಿರು ಬಿಡುತ್ತಿದ್ದೆವು.

ಇದನ್ನು ಕಂಡ ನಮ್ಮ ನೆಚ್ಚಿನ ಶಿಕ್ಷಕರು ಇದಕ್ಕೊಂದು ಉಪಾಯ ಕಂಡುಹಿಡಿದು ನಮ್ಮ ಪೋಷಕರಿಗೆ ತಿಳಿಸಿದ್ದರು. ಅದರಂತೆ ನಮ್ಮ ಪೋಷಕರು ಇನ್ನೇನು ಶಾಲೆ ಆರಂಭವಾಗಲು ಒಂದು ವಾರ ಇದೆ ಅನ್ನುವಾಗಲೆಲ್ಲಾ ನಮಗೆ ಹೊಸ

ತರಗತಿಗೆ ಬೇಕಾದಂತಹ ಪುಸ್ತಕಗಳು, ಹೊಸ ಪಾಠಚೀಲ, ಪಾದರಕ್ಷೆ, ಸಮವಸ್ತ್ರ ಎಲ್ಲವನ್ನು ಕೊಡಿಸುತ್ತಿದ್ದರು. ಹೊಸ ಪುಸ್ತಕಗಳನ್ನು ನೊಡುತ್ತಲೇ ನಮ್ಮ ಕಣ್ಣ ಮುಂದೆ ಆ ಪುಸ್ತಕವನ್ನು ನನ್ನ ಗೆಳೆಯ ಗೆಳತಿಯರಿಗೆ ಯಾವಾಗ ತೋರಿಸುತ್ತೇನೋ? ಆ ಪುಸ್ತಕದಲ್ಲಿ ನಾನು ಯಾವಾಗ ಬರೆಯಲು ಆರಂಭಿಸುತ್ತೇನೋ? ಎಂಬ ಕಾತರ ಶುರುವಾಗುತ್ತದೆ. ಅದಲ್ಲದೆ, ಹೊಸ ಪುಸ್ತಕಗಳಿಗೆ ಬೈಂಡ್ ಮಾಡುವಂತಹ ಸಂಭ್ರಮ, ಬೈಂಡ್ ಹಾಕಿ ಅದರ ಮೇಲೆ ಲೇಬಲ್ ಅಂಟಿಸಿ ಅದರಲ್ಲಿ ನಮ್ಮ ಹೆಸರು, ತರಗತಿ ಹೆಸರು ಮತ್ತು ವಿಷಯದ ಹೆಸರು ಬರೆದು ಆ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡರೆ ಮೈಯಲ್ಲೆಲ್ಲಾ ವಿದ್ಯುತ್ ಸಂಚಾರವಾದಂತೆ ಇರುತ್ತಿತ್ತು. ಇನ್ನು ಆ ಪುಸ್ತಕದಲ್ಲಿ ಬರೆಯಲು ಆರಂಭ ಮಾಡದೆ ಇದ್ದರೆ ನಮ್ಮ ಜೀವಕ್ಕೆ ಸುಖವಿರುತ್ತಿರಲಿಲ್ಲ. ಅದಕ್ಕಾಗಿ ಶಾಲೆ ಯಾವಾಗ ಶುರುವಾಗುತ್ತದೆ ಎಂಬುದನ್ನು ಕಾಯುತ್ತಾ ಕುಳಿತಿರುತ್ತಿದ್ದೆವು. ಆ ಕೊನೆ ವಾರ ಮಾತ್ರ ನಮ್ಮ ಮನಸ್ಸು ಯಾವುದೇ ಆಟಪಾಠದಲ್ಲಿ ತೊಡಗುತ್ತಿರಲಿಲ್ಲ. ಕಣ್ಣ ಮುಂದೆ ನಮ್ಮ ಅದೇ ಪ್ರೀತಿಯ ಶಿಕ್ಷಕಿ ಪಾಠ ಮಾಡುವ, ಕಥೆ ಹೇಳುವ ದೃಶ್ಯವೇ ಬರುತ್ತಿತ್ತು. ಹಾಗಾಗಿ ಶಾಲೆ ಆರಂಭವಾಗುವುದನ್ನೇ ಕಾಯುತ್ತಿದ್ದೆವು.

ಶಾಲೆ ಆರಂಭವಾಗುವ ದಿನ ಬೆಳಗ್ಗೆ ಬೇಗ ಎದ್ದು, ಹಲ್ಲುಜ್ಜಿ, ಸ್ನಾನ ಮಾಡಿ, ದೇವರಿಗೆ ಕೈಮುಗಿದು, ದೋಸೆ ತಿಂದು, ಚಹ ಕುಡಿದು ಪಾಠಚೀಲವನ್ನು ಹೆಗಲಿಗೇರಿಸಿ, ಹೊಸ ಚಪ್ಪಲ್ ಧರಿಸಿ ಶಾಲೆಗೆ ಹೋಗುವ ನಮ್ಮ ಠೀವಿಯನ್ನು ನೋಡಲು ನಮ್ಮ ಅಮ್ಮಂದಿರಿಗೆ ಎರಡು ಕಣ್ಣು ಸಾಲುತ್ತಿರಲಿಲ್ಲ. ಎಷ್ಟೋ ಸಲ ಅವರ ಕಣ್ಣಂಚು ನವೆಯಾದದ್ದು ಕಂಡಿದ್ದೆವು. ಹೀಗೆ ಠೀವಿಯಿಂದ ಶಾಲೆಗೆ ಬಂದ ನಮ್ಮನ್ನು ನಮ್ಮ ಶಿಕ್ಷಕರು ಅಷ್ಟೇ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ನಾವು ತಂದಂತಹ ಹೊಸ ಪಾಠಚೀಲ, ಪುಸ್ತಕ, ಸಮವಸ್ತ್ರ, ಪಾದರಕ್ಷೆಗಳನ್ನು ನೋಡುವುದು, ಮೆಚ್ಚುಗೆ ವ್ಯಕ್ತಪಡಿಸುವುದು ಮಾಡುತ್ತಿದ್ದರು. ರಜೆಯನ್ನು ಹೇಗೆ ಕಳೆದಿರಿ ಮಕ್ಕಳೇ ಎಂದು ಕೇಳುತ್ತಾ, ನಾವು ಹುಬ್ಬೇರಿಸಿಕೊಂಡು, ಕಣ್ಣಗಲಿಸಿಕೊಂಡು ಹೇಳುತ್ತಿದ್ದ ಕಥೆಗಳನ್ನಂತೂ ಅವರೂ ಅಷ್ಟೇ ರೋಮಾಂಚನದಿಂದ ಕೇಳಿಸಿಕೊಳ್ಳುತ್ತಿದ್ದರು. ಅವರ ಜೊತೆಗೆ ನಾವು ರಜೆಯಲ್ಲಿ ಮಾಡಿದ್ದ ಎಲ್ಲಾ ಕಿತಾಪತಿಗಳನ್ನು ಹಂಚಿಕೊಳ್ಳುತ್ತಿದ್ದೆವು. ಹಂಚಿಕೊಳ್ಳುವಾಗ ಮಾತ್ರ ನಮಗೆ ಯಾವುದೇ ಭಯ ಇರುತ್ತಿರಲಿಲ್ಲ. ನಂತರದ ಒಂದೆರಡು ದಿನಗಳಲ್ಲಿ ತರಗತಿಕೋಣೆಯನ್ನು ಸ್ವಚ್ಛಗೊಳಿಸುವುದು, ಗಿಡಗಳಿಗೆ ನೀರು ಹಾಕುವುದು, ಶಾಲಾ ಆವರಣವನ್ನು ಸ್ವಚ್ಛಗೊಳಿಸುವುದು ಇವೇ ಮುಂತಾದ ಕೆಲಸಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಮಧ್ಯಾಹ್ನದ ಅವಧಿಯಲ್ಲಿ ಕಥೆ ಹೇಳುವುದು, ಹಾಡು ಹಾಡಿಸುವುದು ಮಾಡುತ್ತಿದ್ದರು.

ಈ ಪ್ರಕ್ರಿಯೆಗಳು ತರಗತಿಕೋಣೆಯಲ್ಲಿ ನಡೆಯುತ್ತಿರಲಿಲ್ಲ. ನಮ್ಮ ಶಾಲೆಯ ಆವರಣ ಬಹಳ ವಿಶಾಲವಾಗಿದ್ದು ಅದರಲ್ಲಿ ನಾಲ್ಕು ಮಾವಿನ ಮರಗಳು ಮತ್ತು ಎರಡು ಆಲದ ಮರಗಳಿದ್ದವು. ಪ್ರತಿಯೊಂದು ಮರಕ್ಕೂ ವಿಶಾಲವಾದ ಕಟ್ಟೆಯನ್ನು ಕಟ್ಟಲಾಗಿತ್ತು. ಒಂದೊಂದು ಮರದ ಬುಡದಲ್ಲಿ ಮೂರು ತರಗತಿಗಳನ್ನು ಒಂದೊಂದು ಭಾಗದಲ್ಲಿ ನಡೆಸಬಹುದಿತ್ತು. ಮರದ ಕೆಳಗೆ ನೆರಳಿತ್ತು. ಹಾಗಾಗಿ ನಮ್ಮ ಹೆಚ್ಚಿನ ಪಾಠಗಳು ಅಲ್ಲಿಯೇ ನಡೆಯುತ್ತಿದ್ದವು. ಶಾಲೆಯ ಆರಂಭದ ಒಂದೆರಡು ದಿನಗಳು ನಾವು ಅಲ್ಲಿಯೇ ಇರುತ್ತಿದ್ದೆವು. ಮೂರು ದಿನ ಕಳೆದ ನಂತರ ಶಾಲೆ ಹಳೆಯದಾಗಿ ಕಾಣುತ್ತಿತ್ತು. ಅಷ್ಟು ಹೊತ್ತಿಗೆ ನಾವು ಸಂಪೂರ್ಣವಾಗಿ ಶಾಲೆಯ ಪ್ರಕ್ರಿಯೆಗಳಿಗೆ ಒಗ್ಗಿ ಹೋಗುತ್ತಿದ್ದೆವು. ಹಾಗಾಗಿ ನಮಗೆ ಶಾಲೆಗೆ ಬರುವುದು ಹೊರೆ ಅಂತ ಅನಿಸುತ್ತಿರಲಿಲ್ಲ.

ರಜೆಯ ಮಜಾವನ್ನು ಅನುಭವಿಸುತ್ತಿದ್ದ ನಮ್ಮ ಮನಸ್ಸುಗಳಿಗೆ ಶಾಲಾರಂಭ ಶಾಪವಾಗಬಾರದು ಎಂಬ ಕಾರಣದಿಂದ ನಮ್ಮ ಶಿಕ್ಷಕರು ಇಂತಹ ಅನೇಕ ಪ್ರಯೋಗಗಳನ್ನು ಮಾಡುತ್ತಿದ್ದರು. ಶಾಲಾ ಚಟುವಟಿಕೆಗಳಲ್ಲಿ ನಮ್ಮನ್ನು ಆತ್ಮೀಯವಾಗಿ ತೊಡಗಿಸಿಕೊಳ್ಳುತ್ತಿದ್ದ ನಮ್ಮ ಶಿಕ್ಷಕರು ಯಾವತ್ತೂ ನಮಗೆ ಶಾಲೆ ಎಂದರೆ ಶಿಕ್ಷೆ ಎಂಬ ಭಾವನೆ ಬರುವಂತೆ ಮಾಡಿರಲಿಲ್ಲ. ಅಂತಹ ಶಾಲೆ ಮತ್ತು ಶಿಕ್ಷಕರಿಂದ ವಿದ್ಯೆ ಪಡೆದ ನಾನೇ ಧನ್ಯೆ. ಅಂತಹ ನನ್ನ ಆದರ್ಶ ಶಿಕ್ಷಕರಿಗೆ ಕೋಟಿಕೋಟಿ ನಮನ.

**(ಸಂಚಿಕೆ 46, ಜೂನ್ 2016)**

# ಮೌನ ಹೋರಾಟಕ್ಕೆ ಸಹನೆಯ ಬೆಳಕು

–ರವಿ.ಬಿ.ಟಿ, ಜಿಲ್ಲಾ ಸಂಸ್ಥೆ ಮಂಡ್ಯ

**ಜೇನ್ ಮರುಗೆಯವರಿಗೆ ಶಾಲೆಗೆ ಬರಲು ಅನುವು ಮಾಡಿಕೊಡುತ್ತಾರೆ. ಮತ್ತು ನಿರಂತರವಾಗಿ ಮರುಗೆಯ ಕಲಿಕೆಗೆ ಸಹಕರಿಸತೊಡಗುತ್ತಾರೆ. ಜೇನ್‌ರವರಿಗೆ ಮರುಗೆಯ ಭಾಗವಹಿಸುವಿಕೆಯಿಂದ ಆ ಶಾಲೆಯ ಮಕ್ಕಳಿಗೆ ಜೀವನದ ಅನುಭವ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ. ಆದರೆ ಮರುಗೆಗೆ ಶಾಲೆಯಲ್ಲಿ ಅವಕಾಶ ನೀಡಿದ ತೀರ್ಮಾನವು ಊರಿನವರಿಗೆ ಸರಿಕಾಣಿಸುವುದಿಲ್ಲ. ಅವರು ಇಲಾಖೆಗೆ ದೂರು ನೀಡುತ್ತಾರೆ. ಹೀಗಿರುವಾಗಲೇ ವಿಷಯವು ದೇಶದ ತುಂಬೆಲ್ಲಾ ಹರಡಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಟಿ. ವಿ. ಚಾನಲ್‌ಗಳಲ್ಲಿ ಪ್ರಸಾರವಾಗುತ್ತದೆ. ಇಳಿವಯಸ್ಸಿನಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಹೊಂದಿರುವ ಮರುಗೆ ದಿನಬೆಳಗಾಗುತ್ತಿದ್ದಂತಯೇ ಸರ್ಕಾರದ ಸರ್ವರಿಗೂ ಶಿಕ್ಷಣ ಕಾರ್ಯಕ್ರಮದ ಹಿನ್ನೆಲೆಯಲ್ಲಿ ದೇಶದಲ್ಲಿಯೇ ಮಾದರಿ ವ್ಯಕ್ತಿ ಎನಿಸಿಕೊಳ್ಳುತ್ತಾನೆ.**



ನಾನು ಓದಿದ ಕಥೆಯ ಹೆಸರು 'ಮೌನ ಹೋರಾಟ'. ಕಥೆ ಹೀಗೆ ಪ್ರಾರಂಭವಾಗುತ್ತದೆ. ನಮ್ಮ ಊರಿನಂತೆ ಅದೂ ಒಂದು ಊರು ಆ ದೇಶವೂ ನಮ್ಮ ದೇಶದಂತೆಯೆ ಒಂದು ದೇಶ. ಅದು ಕೀನ್ಯಾ ದೇಶ. ಎರಡೂ ದೇಶಗಳೂ ಬ್ರಿಟಿಷರ ಆಡಳಿತದಲ್ಲಿಯೇ ಇದ್ದದು ಮತ್ತು ಹೋರಾಡಿಯೇ ಸ್ವಾತಂತ್ರ್ಯ ಪಡೆದದ್ದು. ಆದರೆ ಸ್ವಾತಂತ್ರ್ಯ ಪಡೆಯುವಲ್ಲಿ ಭಾರತಕ್ಕಿಂತ ಹೆಚ್ಚು ಕೀನ್ಯ ರಕ್ತ ಹರಿಸಬೇಕಾಯಿತು. ಇದಕ್ಕೆ ಕಾರಣ ಹುಡುಕುತ್ತಾ ಹೋದರೆ ಕಾಣುವುದು ಭಾರತೀಯರಾದ ನಾವು ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಶಿಕ್ಷಣವೆಂಬ ಆಯುಧವನ್ನು ಬಳಸಿ ಕ್ರಾಂತಿಯ ಕಿಡಿಯನ್ನು ಮನೆ ಮನೆಗೂ ಹಚ್ಚಿ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರತಿಯೊಬ್ಬರೂ ಭಾಗವಹಿಸುವಂತೆ ಮಾಡಲಾಗಿರುವುದು. ಅಂದರೆ ಹೋರಾಟದ ದಾರಿಗಳನ್ನು ಆಲೋಚಿಸಿ ವಿವೇಚಿಸಿ ಅಗತ್ಯಕ್ಕೆ ತಕ್ಕಂತೆ ಬದಲಾಯಿಸುತ್ತಾ ತಂತ್ರಗಳನ್ನು ಹೆಣೆಯುತ್ತಾ ಹೋರಾಟ ನಡೆಸಿದ್ದರ ಪರಿಣಾಮವಾಗಿ ಕೀನ್ಯಕ್ಕಿಂತ ಬೇಗನೆ ನಮಗೆ ಸ್ವಾತಂತ್ರ್ಯ ಲಭಿಸಿತು, ಆದರೆ ಅನಕ್ಷರತೆಯ ಗೂಡಾಗಿದ್ದ ಕೀನ್ಯಾದಲ್ಲಿ ಬ್ರಿಟೀಷರು ನೀಡುತ್ತಿದ್ದ ಕ್ರೂರ ಚಿತ್ರಹಿಂಸೆಗಳ ಪರಿಣಾಮವಾಗಿ ನಮಗಿಂತಲೂ ಹತ್ತಾರು ವರ್ಷ ಹೆಚ್ಚಿನ ಹೋರಾಟ ನಡೆಸಬೇಕಾಯಿತು.

ಈ ಹೋರಾಟದಲ್ಲಿ ಕೀನ್ಯಾದ ನೀಗ್ರೋ ಜನಾಂಗಗಳ ಹೋರಾಟವೂ ಮಹತ್ತರವಾದುದು. ಇದರಲ್ಲಿ ನಾನು ಇಲ್ಲಿ ಹೇಳಹೊರಟಿರುವುದು ಮೌ–ಮೌ ಬುಡಕಟ್ಟು ಜನಾಂಗದ ಹೋರಾಟ ಮತ್ತು ಹೋರಾಟದ ನಂತರ ನಡೆದ ಶೈಕ್ಷಣಿಕ ಹೋರಾಟದ ವ್ಯಥೆಯ ಕತೆ. ಬ್ರಿಟಿಷರ ವಿರುದ್ಧದ ಮೌ–ಮೌ ಜನಾಂಗದ ಹೋರಾಟದಲ್ಲಿ ನೂರಾರು ಕುಟುಂಬಗಳು ಬೆಂಕಿಗಾಹುತಿಯಾದವು. ದುರದೃಷ್ಟವೆಂದರೆ ಇದನ್ನು ಒಂದು ಸಣ್ಣ ಬುಡಕಟ್ಟಿನ ಹೋರಾಟವೆಂಬಂತೆ ಬಿಂಬಿಸಲಾಯಿತು. ಈ ಹೋರಾಟದ ಫಲವಾಗಿ ನಮಗಿಂತ ಹತ್ತಾರು ವರ್ಷಗಳ ನಂತರ ಸ್ವಾತಂತ್ರ್ಯ ಪಡೆಯಲಾಯಿತು. ಸ್ವಾತಂತ್ರ್ಯದ ನಂತರ ದೇಶ ಸಾಮಾಜಿಕವಾಗಿ, ಆಡಳಿತಾತ್ಮಕವಾಗಿ, ಶೈಕ್ಷಣಿಕವಾಗಿ, ತನ್ನದೇ ರೂಪುರೇಖೆಗಳನ್ನು ಹೆಣೆಯಬೇಕಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ತನ್ನ ಹೆಂಡತಿ ಮಕ್ಕಳನ್ನು ಕಳೆದುಕೊಂಡು, ಬ್ರಿಟೀಷರಿಂದ ಮೌ–ಮೌ ಬಂಡುಕೋರನೆಂದು ಕರೆಸಿಕೊಂಡು, ದೇಶಕ್ಕೆ ಸ್ವಾತಂತ್ರ್ಯ ಕೊಡಿಸುವಲ್ಲಿ ತನ್ನನ್ನು ಮುಡಿಪಾಗಿರಿಸಿದ್ದ 'ಮರುಗೆ' ಸ್ವಾತಂತ್ರ್ಯ ನಂತರ ಶಿಕ್ಷಣಕ್ಕಾಗಿ ತನ್ನವರ ವಿರುದ್ಧವೇ ಹೊರಾಡಬೇಕಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಅದೂ ತನ್ನ 83ನೇ ಇಳಿವಯಸ್ಸಿನಲ್ಲಿ!!. ಮರುಗೆ ಹೋರಾಟಕ್ಕೆ ಬೆನ್ನೆಲುಬಾಗಿ ನಿಂತ ಅವನೂರಿಗೆ ಶಿಕ್ಷಕಿಯಾಗಿ ಬಂದ 'ಜೇನ್' ಅವನಿಗೆ ಶಿಕ್ಷಣ ನೀಡುವಲ್ಲಿ, ಸಮಾಜ ಮತ್ತು ಆಡಳಿತ ವ್ಯವಸ್ಥೆಯಿಂದ ಅನುಭವಿಸಿದ ಅವಮಾನ, ನೋವು, ಅವುಗಳನ್ನು ಮೆಟ್ಟಿ ನಿಂತು ಶಿಕ್ಷಣದ ದಾರಿಯಲ್ಲಿ ನಡೆಸಿ ಆ ಮೂಲಕ ಶಿಕ್ಷಣದ ಅರಿವಿಗೆ ಮಾದರಿ ವ್ಯಕ್ತಿಯನ್ನಾಗಿ ಮಾಡಿದ, ಅತ್ಯಂತ ಹಿರಿಯ ವಯಸ್ಸಿನ ವಿದ್ಯಾರ್ಥಿ ಎಂದು ಗಿನ್ನಿಸ್ನಲ್ಲಿ ದಾಖಲಾಗುವಂತೆ ಮಾಡಲಾದ ಆದರ್ಶ ಶಿಕ್ಷಕಿ 'ಜೇನ್' ನನಗೆ ಸಮಾಜದಲ್ಲಿ ಅನನ್ಯವಾಗಿ ನಿಲ್ಲುತ್ತಾರೆ.

2003ರ ಒಂದು ಸಂಜೆ ಕೀನ್ಯಾದ ರೇಡಿಯೊದಲ್ಲಿ ಒಂದು ಸುದ್ದಿ ಪ್ರಸಾರವಾಗುತ್ತದೆ. ಅದು "ಸರ್ಕಾರ ಕೀನ್ಯಾದ ಎಲ್ಲಾ ಜನರನ್ನು ಶಿಕ್ಷಣವಂತರನ್ನಾಗಿಸಬೇಕಾಗಿದೆ. ಅದಕ್ಕಾಗಿ ಉಚಿತ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಅದರಂತೆ ನಾಳೆ ನಿಮ್ಮ ನಿಮ್ಮ ಹಳ್ಳಿಗಳಲ್ಲಿ ಶಾಲೆಗೆ ಸೇರಿಸಲು ದಾಖಲಾತಿ ಪ್ರಾರಂಭವಾಗುತ್ತದೆ. ಎಲ್ಲರೂ ಈ ಶಿಕ್ಷಣದ ಸಾಧನೆಗೆ ಕೈಜೋಡಿಸಿ". ಮರುದಿನ ಪ್ರತಿ ಹಳ್ಳಿಯ ಶಾಲಾ ಪ್ರಾರಂಭಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ ಬಹುತೇಕ ಗ್ರಾಮದ ಮಕ್ಕಳು ಅರ್ಜಿಗಳನ್ನು ಹಿಡಿದು ದಾಖಲಾತಿ ಪಡೆಯಲು ನಿಂತಿರುತ್ತಾರೆ. ಶಿಕ್ಷಕರು ಒಬ್ಬೊಬ್ಬರ ಅರ್ಜಿಯನ್ನು ಸ್ವೀಕರಿಸುತ್ತಿರುವಾಗ ಶಾಲೆಯ ಗೇಟಿನ ಬಳಿ ವಯೋವೃದ್ದರೊಬ್ಬರು ಅರ್ಜಿಯೊಂದನ್ನು ಹಿಡಿದು ನಿಂತಿರುವುದು ಕಾಣುತ್ತದೆ. ಶಿಕ್ಷಕಿ ಜೇನ್ ಅವರ ಬಳಿ ಹೋಗಿ ನಿಮ್ಮ ಮಗು ಯಾರು ಎನ್ನುತ್ತಾರೆ. ಆದರೆ ಆ ವಯೋವೃದ್ದರು ನಾನೇ ಶಾಲೆಗೆ ಸೇರಬೇಕು ಎನ್ನುತ್ತಾರೆ. ಆ ಶಿಕ್ಷಕರಿಗೆ ಗಾಬರಿಯಾಗುತ್ತದೆ ಹಾಗೂ ಇದು ಮಕ್ಕಳನ್ನು ಸೇರಿಸಿಕೊಳ್ಳಲು ಇರುವ ಶಾಲೆ ಎಂದು

ಹೇಳಿ ಶಾಲೆಯ ಒಳಗೆ ಬಂದುಬಿಡುತ್ತಾರೆ. ಆದರೆ ಆ ವಯೋವೃದ್ಧರು ಪ್ರತಿ ದಿನ ಶಾಲೆಯ ಹತ್ತಿರ ಬಂದು ನಿಲ್ಲುತ್ತಿರುವುದನ್ನು ಗಮನಿಸಿ ಅವರನ್ನು ಒಳಗೆ ಕರೆದು ಇದು ಮಕ್ಕಳ ಶಾಲೆ ಎಂದು ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಾರೆ. ಆದರೆ ವಯಸ್ಸಾದವರು ಶಿಕ್ಷಣ ಪಡೆಯಬಾರದೆಂದು ಎಲ್ಲೂ ಹೇಳಿಲ್ಲ ಎಂದು ವಾದ ಮಾಡುತ್ತಾರೆ. ಜೊತೆಗೆ ವಯಸ್ಕರ ಶಿಕ್ಷಣ ಶಾಲೆಗಳಲ್ಲಿ ಸರಿಯಾಗಿ ಕಲಿಸುವುದಿಲ್ಲ. ಅಲ್ಲಿಗೆ ಬರುವವರೂ ಕೂಡ ಕಲಿಕೆಗಿಂತ ಬೇರೆ ಬೇರೆ ಚಟುವಟಿಕೆಗಳಲ್ಲಿ ಕಾಲಕಳೆಯುತ್ತಾರೆ. ಆದ್ದರಿಂದ ನಾನು ಇದೇ ಶಾಲೆಯಲ್ಲಿ ಕಲಿಯಬೇಕು. ಕಲಿತು ಸರ್ಕಾರದಿಂದ ನನಗೆ ಬಂದಿರುವ ಪತ್ರವನ್ನು ನಾನೇ ಓದಬೇಕು. ಅದಕ್ಕಾಗಿ ನನಗೆ ಈ ಶಾಲೆಯಲ್ಲಿ ಅವಕಾಶ ಬೇಕು ಎಂದು ವಾದ ಮಾಡುತ್ತಾರೆ.

ಒಂದು ಹಂತದಲ್ಲಿ ಜೇನ್ ಮರುಗೆಯವರಿಗೆ ಶಾಲೆಗೆ ಬರಲು ಅನುವು ಮಾಡಿಕೊಡುತ್ತಾರೆ. ಮತ್ತು ನಿರಂತರವಾಗಿ ಮರುಗೆಯ ಕಲಿಕೆಗೆ ಸಹಕರಿಸತೊಡಗುತ್ತಾರೆ. ಜೇನ್‌ರವರಿಗೆ ಮರುಗೆಯ ಭಾಗವಹಿಸುವಿಕೆಯಿಂದ ಆ ಶಾಲೆಯ ಮಕ್ಕಳಿಗೆ ಜೀವನದ ಅನುಭವ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ. ಜೇನ್‌ರವರ ಸರಳತೆ, ಪ್ರೀತಿ ವಿಶ್ವಾಸ, ಪ್ರಾಯೋಗಿಕ ಶಿಕ್ಷಣಗಳು ಮಕ್ಕಳಿಗೆ ಬಹಳ ಇಷ್ಟವಾಗುತ್ತಿದ್ದುದರಿಂದ ಅವರು ಖುಷಿಯಿಂದ ಕಲಿಯುತ್ತಿದ್ದರು. ಆದರೆ ಮರುಗೆಗೆ ಶಾಲೆಯಲ್ಲಿ ಅವಕಾಶ ನೀಡಿದ ತೀರ್ಮಾನವು ಊರಿನವರಿಗೆ ಸರಿಕಾಣಿಸುವುದಿಲ್ಲ. ಅವರು ಇಲಾಖೆಗೆ ದೂರು ನೀಡುತ್ತಾರೆ. ಹೀಗಿರುವಾಗಲೇ ವಿಷಯವು ದೇಶದ ತುಂಬೆಲ್ಲಾ ಹರಡಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಟಿ. ವಿ. ಚಾನಲ್‌ಗಳಲ್ಲಿ ಪ್ರಸಾರವಾಗುತ್ತದೆ. ಇಳಿವಯಸ್ಸಿನಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಹೊಂದಿರುವ ಮರುಗೆ ದಿನಬೆಳಗಾಗುತ್ತಿದ್ದಂತಯೇ




ಸರ್ಕಾರದ ಸರ್ವರಿಗೂ ಶಿಕ್ಷಣ ಕಾರ್ಯಕ್ರಮದ ಹಿನ್ನೆಲೆಯಲ್ಲಿ ದೇಶದಲ್ಲಿಯೇ ಮಾದರಿ ವ್ಯಕ್ತಿ ಎನಿಸಿಕೊಳ್ಳುತ್ತಾನೆ. ಆದರೆ ತನ್ನದೇ ಊರಿನವರಿಗೆ ಇದನ್ನು ಸಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಒಂದು ದಿನ ಊರಿನವರು ಗುಂಪುಗುಂಪಾಗಿ ಶಾಲೆಗೆ ಬಂದು ಗಲಾಟೆ ಮಾಡುತ್ತಾರೆ. ಇದಕ್ಕೆ ಪುಷ್ಟಿ ಎಂಬಂತೆ ಅದೇ ಶಾಲೆಯ ಸಹಶಿಕ್ಷಕರು ಹಾಗೂ ಶಿಕ್ಷಣ ಅಧಿಕಾರಿಗಳಲ್ಲಿ ಅಸಮಧಾನವನ್ನುಂಟು ಮಾಡುತ್ತದೆ. ಜೇನ್ ಯಾರ ಮಾತಿಗೂ ತಲೆಕೆಡಿಸಿಕೊಳ್ಳದೆ ಮರುಗೆಗೆ ಶಿಕ್ಷಣ ನೀಡುವುದನ್ನು ಮುಂದುವರಿಸುತ್ತಾಳೆ. ಇದರ ಪರಿಣಾಮವಾಗಿ ಶಿಕ್ಷಕಿ ಜೇನ್ ರವರ ನಡತೆಯ ಮೇಲೆ ಕಳಂಕವನ್ನು ಕಟ್ಟಲಾಗುತ್ತದೆ ಮತ್ತು ಅವರನ್ನು ಬೇರೆ ಊರಿಗೆ ವರ್ಗಾವಣೆ ಮಾಡಲಾಗುತ್ತದೆ.

ಈ ಸಂದರ್ಭದಲ್ಲಿ ಮರುಗೆ ತನ್ನಿಂದಲೇ ಶಿಕ್ಷಕಿಗೆ ಈ ಸ್ಥಿತಿ ಬಂತೆಂದು ಕೊರಗುತ್ತಾನೆ. ಆದರೆ ಜೇನ್ ಅವನನ್ನು ಸಮಾಧಾನಪಡಿಸಿ ವರ್ಗವಾಗಿದ್ದ ಊರಿಗೆ ಹೊರಡುತ್ತಾಳೆ, ಈ ಹಂತದಲ್ಲಿ ಪ್ರತಿ ಮಗುವನ್ನೂ ಪ್ರೀತಿಯಿಂದ ಮಾತನಾಡಿಸುತ್ತಾ ಕಲಿಸುತ್ತಿದ್ದ ಜೇನ್ ಅವರ ವರ್ಗಾವಣೆಯ ಬಗ್ಗೆ ದುಃಖಿಸುತ್ತಾ ಮಕ್ಕಳು ಬೀಳ್ಕೊಡುಗೆ ನೀಡುತ್ತಾರೆ.

ಕೆಲದಿನಗಳ ನಂತರ ಶಾಲೆಗೆ ಹೊಸ ಶಿಕ್ಷಕರು ಬರುವುದನ್ನು ಅಧಿಕಾರಿಯವರು ಮಕ್ಕಳಿಗೆ ತಿಳಿಸುತ್ತಾರೆ. ಕಾರಿನಲ್ಲಿ ಬಂದಿಳಿದ ಗ್ರೇಸ್ ಮಕುಂಬಾ ಎಂಬ ಶಿಕ್ಷಕಿಯನ್ನು ನೋಡಿ ಮಕ್ಕಳಿಗೆ ಯಾಕೊ ಇಷ್ಟವಾಗುವುದಿಲ್ಲ. ಅಮ್ಮನ ರೀತಿಯಲ್ಲಿ ನೋಡುತ್ತಿದ್ದ ಜೇನ್ ಮೇಡಂಗಿದ್ದ ಸೌಮ್ಯತೆ ಈ ಮೇಡಂಗೆ ಇಲ್ಲದಿರುವುದನ್ನು ಗಮನಿಸಿದ ಮಕ್ಕಳು ಶಾಲೆಯ ದೊಡ್ಡಗೇಟನ್ನು ಮುಚ್ಚಿ ಒಳಗೆ ಬರದಂತೆ ತಡೆಯುತ್ತಾರೆ. ಮತ್ತು ಸಿಕ್ಕ ಸಿಕ್ಕ ವಸ್ತುಗಳನ್ನು ಎಸೆಯುತ್ತಾ ಶಾಲೆಗೆ ಬರಬಾರದಂತೆ ಕೂಗುತ್ತಾರೆ. ಇದರಿಂದ ಗ್ರೇಸ್ ಇದು ನನಗೆ ಕಾರ್ಯನಿರ್ವಹಿಸಲು ಸೂಕ್ತ ಜಾಗವಲ್ಲ ಎಂದು ವಾಪಾಸು ಹೊರಟುಹೋಗುತ್ತಾರೆ.

ಇತ್ತ ಮರುಗೆ ತನ್ನ ಬಳಿಯಿದ್ದ ಕುರಿಯನ್ನು ಮಾರಿ ಶಿಕ್ಷಣ ಮಂತ್ರಿಗಳನ್ನು ಕಾಣಲು ರಾಜಧಾನಿ ನೈರೋಬಿಗೆ ಹೋಗುತ್ತಾನೆ. ಅಲ್ಲಿ ಎಲ್ಲಿ ನೋಡಿದರೂ ಅವನದೇ ಚಿತ್ರಗಳೊಡನೆ "ಅಕ್ಷರಕ್ಕೆ ಅಪರಿಮಿತ ಶಕ್ತಿ ಇದೆ" ಎಂಬ ಬೋರ್ಡುಗಳು ರಾರಾಜಿಸುತ್ತಿರುತ್ತವೆ. ಅವನು ಶಿಕ್ಷಣಮಂತ್ರಿಗಳನ್ನು ಭೇಟಿಮಾಡುತ್ತಾನೆ ಮತ್ತು ತನ್ನ ಸ್ವಾತಂತ್ರ್ಯ ಹೋರಾಟದ ನಂತರ ತಾನು ಸರ್ಕಾರದಿಂದ ಏನನ್ನೂ ಬಯಸಲಿಲ್ಲ. ಈಗ ಜೇನ್ ಶಿಕ್ಷಕಿಯನ್ನು ವಾಪಾಸು ತನ್ನೂರಿನ ಶಾಲೆಗೆ ಕಳುಹಿಸುವ ಒಂದೇ ಬೇಡಿಕೆಯನ್ನು ತಂದಿದ್ದೇನೆ ನಡೆಸಿಕೊಡಿ ಎಂದು ವಿನಂತಿಸಿ ತನ್ನೂರಿಗೆ ಹಿಂದಿರುಗುತ್ತಾನೆ.

ಮರುಗೆಯ ವಿನಂತಿಯಂತೆ ತನ್ನೂರಿಗೆ ಮತ್ತೆ ಬಂದ ಜೇನ್ ಶಿಕ್ಷಕಿಯನ್ನು ಮಕ್ಕಳು ಖುಷಿಯಿಂದ ಸ್ವಾಗತಿಸುತ್ತಾರೆ. ಮಾರನೆಯ ದಿನ ಮರುಗೆ ಎಂದಿನಂತೆ ಶಾಲೆಯ ಬಳಿ ಬರುತ್ತಾನೆ ಮತ್ತು ಅವನ ಕೈಯಲ್ಲಿ ಒಂದು ಪತ್ರವಿರುತ್ತದೆ. ಅದನ್ನು ಜೇನ್ ಕೈಗೆ ನೀಡುತ್ತಾ "ನನಗೆ ಗೊತ್ತು. ನನ್ನದು ಶಾಲೆಯಲ್ಲಿ ಕಲಿಯುವ ವಯಸ್ಸಲ್ಲ. ಆದರೆ ಸ್ವಾತಂತ್ರ್ಯದ ನಂತರ ಸರ್ಕಾರದಿಂದ ನನಗೊಂದು ಪತ್ರ ಬಂದಿದೆ, ಅದನ್ನು ನಾನೇ ಓದಬೇಕೆಂಬ ಆಸೆಯಿಂದ ಶಾಲೆಗೆ ಬರುತ್ತಿದ್ದೆ. ಇನ್ನು ಮುಂದೆ ನಾನು ಬರುವುದಿಲ್ಲ. ದಯವಿಟ್ಟು ಈ ಪತ್ರದಲ್ಲಿ ಏನಿದೆ ಎಂದು ನೀವೇ ಓದಿ ಹೇಳಿ" ಎನ್ನುತ್ತಾನೆ. ಮರುಗೆಯ ಕೈಯಿಂದ ಪತ್ರ ಪಡೆದ ಜೇನ್ ಪತ್ರ ನೋಡುತ್ತಾ ತನ್ನ ಸಹ ಶಿಕ್ಷಕ ಆಲ್‌ಫ್ರೆಡ್‌ಗೆ ನೀನೇ ಓದು ಎಂದು ನೀಡುತ್ತಾಳೆ. ಅದರಲ್ಲಿ "ಪ್ರೀತಿಯ ಖೈದಿ ನಂ 4399, ಕೀನ್ಯಾ ಗಣರಾಜ್ಯದ ಪರವಾಗಿ ನಿಮಗೆ ತಿಳಿಸುವುದೇನೆಂದರೆ

ನಿಮ್ಮನ್ನು ಎಲ್ಲಾ ರೀತಿಯ ವಿಚಾರಣೆ ಮಾಡಲಾಗಿ ನೀವು ನಿರ್ದೋಷಿಯೆಂದು ಸಾಬೀತಾಗಿದೆ. ಬ್ರಿಟೀಷ್ ಆಡಳಿತದಲ್ಲಿ ನೀವು ಅನುಭವಿಸಿದ ಸೆರೆವಾಸವು ಅನ್ಯಾಯದ್ದೆಂದು ಗೊತ್ತಾಗಿದೆ. ಇದಕ್ಕಾಗಿ ನೀವು ಪರಿಹಾರ ಪಡೆಯಲು ಅರ್ಹರಾಗಿರುತ್ತೀರಿ. 1951 ರಿಂದ 1963ರ ವರೆಗೆ ಜೈಲಿನಲ್ಲಿ ಕಳೆದ ದಿನಗಳನ್ನು ಲೆಕ್ಕ ಹಾಕಿ ನಿಮಗೆ ಪರಿಹಾರದ ಮೊತ್ತವಾಗಿ ಹಣವನ್ನು ನೀಡಲಾಗುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ನಿಮ್ಮ ಪಾತ್ರ ಗಣನೀಯವೆಂದು ಗುರುತಿಸಲಾಗಿದೆ. ರಾಷ್ಟ್ರಾಧ್ಯಕ್ಷರು ನಿಮ್ಮನ್ನು ಅಭಿನಂದಿಸಲಿದ್ದಾರೆ". ಪತ್ರ ಮುಗಿಯುವ ಹೊತ್ತಿಗೆ ಜೇನ್ ಕಣ್ಣಲ್ಲಿ ನೀರ ಹನಿಗಳಾಡುತ್ತವೆ. "ನಾಳೆಯಿಂದ ಮತ್ತೆ ಬರುವೆಯಲ್ಲವೇ" ಎನ್ನುತ್ತಾರೆ. ಮರುಗೆ ಕಣ್ಣೀರಿಡುತ್ತಾ "ನಾನಿನ್ನೂ ಓದಲು ಕಲಿತಿಲ್ಲ ಖಂಡಿತಾ ಬರುತ್ತೇನೆ" ಎಂದು ಹೇಳಿ ಹೊರಡುತ್ತಾನೆ

ಇತಿಹಾಸದಲ್ಲಿ ಪ್ರಾಥಮಿಕ ಶಾಲೆ ಸೇರಿದ ಅತ್ಯಂತ ಹಿರಿಯ ವ್ಯಕ್ತಿ ಎಂಬ ಗಿನ್ನಿಸ್ ದಾಖಲೆ ಮರುಗೆ ಹೆಸರಿನಲ್ಲಿದೆ. ವಿಶ್ವಸಂಸ್ಥೆಯಲ್ಲಿ ಎಲ್ಲಾ ದೇಶಗಳ ನಾಯಕರಿಗೆ ಶಿಕ್ಷಣದ ಮಹತ್ವದ ಕುರಿತು ಉಪನ್ಯಾಸ ನೀಡಿದ ಹೆಗ್ಗಳಿಕೆ ಮರುಗೆಯದು. ಈ ಮಟ್ಟಿಗಿನ ಸಾಧನೆಗಾಗಿ ಈ ಇಳಿವಯಸ್ಸಿನಲ್ಲಿಯೂ ಮರುಗೆಗೆ ಶಿಕ್ಷಣ ನೀಡಲು ಮನಸ್ಸು ಮಾಡಿದ ಜೇನ್ ಮಾದರಿಯಾಗಿ ನಿಲ್ಲುತ್ತಾರೆ.

**(ಸಂಚಿಕೆ 61, ಸೆಪ್ಟಂಬರ್ 2017)**

## विनती

मेरी भाषा जिसमें मैं बात करता हूँ
मेरी भाषा जिसमें मैं झगड़ता हूँ
मेरी भाषा जिसमें मैं रोता हूँ
मेरी भाषा जिसमें मैं हसता हूँ
समझावों मुझे मेरी भाषा में|

मेरी भाषा जिसमें मैं खेलता-कूदता हूँ
मेरी भाषा जिसमें मैं चित्र पहचानता हूँ
चित्रों को बनाता हूँ
मेरी भाषा जिसमें मैं समझता हूँ
जिसमें मैं कल्पना करता हूँ
कुछ क्रिया करवाता हूँ
समझावों मुझे मेरी भाषा में

मेरी भाषा जिसमें मैं मेरी यादों को सजोता हूँ
मेरी भाषा जिसमें मैं खाता-पिता हूँ
वही है जो मेरी भाषा है
जिसमें मैं आपको देखता हूँ
समझावों मुझे मेरी भाषा में...

-डॉ. शिवाजी

**ಸಂಚಿಕೆ 52, ಡಿಸೆಂಬರ್ 2016**

# ಶ್ರೀಮಂತರು ಸಂಪತ್ತಿನ ಟ್ರಸ್ಟಿಗಳು

**–ಅಜೀಮ್ ಪ್ರೇಮ್‌ಜಿ**

**(ಶ್ರೀಮಂತರನ್ನು ಸಂಪತ್ತಿನ ಟ್ರಸ್ಟಿಗಳನ್ನಾಗಿ ನೋಡುವ ಗಾಂಧೀಜಿಯ ಕಲ್ಪನೆ ಸುಸ್ಥಿರ ಸಮಾಜ ನಿರ್ಮಾಣದ ದಿಕ್ಕಿನಲ್ಲಿ ಮುಖ್ಯವಾದ ಚಿಂತನೆಯಾಗಿದೆ.)**

ನನ್ನ ಆಲೋಚನೆ ಮತ್ತು ಕ್ರಿಯೆಯನ್ನು ಬಲವಾಗಿ ಪ್ರಭಾವಿಸಿದವರಲ್ಲಿ ನನ್ನ ತಾಯಿಯ ನಂತರ ಬರುವವರು ಮಹಾತ್ಮ ಗಾಂಧಿ. ನನ್ನ ತಾಯಿ ಅಶಕ್ತ ಮಕ್ಕಳ ಧರ್ಮಾರ್ಥ ಆಸ್ಪತ್ರೆಯೊಂದರ ಸ್ಥಾಪಕ ಸದಸ್ಯೆಯಾಗಿದ್ದರು. ಸ್ವತಂತ್ರ ಭಾರತದಲ್ಲಿ ಸ್ಥಾಪನೆಗೊಂಡ ಅದು ಆಗಿನ ಕಾಲದ ಅಂತ ಮೊತ್ತಮೊದಲ ಆಸ್ಪತ್ರೆಗಳಲ್ಲಿ ಒಂದೂ ಆಗಿತ್ತು. ಅದರ ಕಾರ್ಯನಿರ್ವಾಹಕ ಅಧ್ಯಕ್ಷೆಯಾಗಿ ನನ್ನ ತಾಯಿ ಅದನ್ನು ಸುಮಾರು 50 ವರ್ಷಗಳ ಕಾಲ ನಡೆಸಿದರು. ನನ್ನ ಬಾಲ್ಯದಲ್ಲಿ ಅಂತ ಆಸ್ಪತ್ರೆಯನ್ನು ನಡೆಸುವುದೆಂದರೆ ಏನು ಎಂಬ ಅನುಭವ ನನಗೆ ಸಿಕ್ಕಿತು. ಜೊತೆಗೆ ಅದು ಜನರ ಜೀವನ ಉತ್ತಮಗೊಳ್ಳುವುದಕ್ಕೆ ಎಷ್ಟು ಮುಖ್ಯ ಎಂಬುದೂ ತಿಳಿಯಿತು.

ಶ್ರೀಮಂತರು ಜನಸಮುದಾಯಗಳ ಒಳಿತಿಗಾಗಿ ತಮ್ಮ ಸಂಪತ್ತಿನ ಧರ್ಮದರ್ಶಿಗಳಾಗಬೇಕು ಎಂಬ ಮಹಾತ್ಮರ ಆಲೋಚನೆ ನಾನು ಒಬ್ಬ ಶ್ರೀಮಂತ ವ್ಯಕ್ತಿಯಾಗುವುದಕ್ಕು ಮೊದಲೆ ನನ್ನೊಳಗೆ ಮರುದನಿಗೊಳ್ಳುತ್ತ ಬಂದಿತ್ತು. ಅವರ ಮಾತಿದು, "ಯಾವುದಾದರು ಉಯಿಲು ಅಥವ ಪಿತ್ರಾರ್ಜಿತ ಅಥವ ವ್ಯಾಪಾರ ವ್ಯವಾಟನ ಮೂಲದಿಂದ ನನ್ನ ಕೈಗೆ ಏನಾದರು ದೊಡ್ಡ ಪ್ರಮಾಣದ ಸಂಪತ್ತು ಬಂದರೆ, ಅದೆಲ್ಲವು ನನ್ನದೆ ಎಂದು ನಾನು ಭಾವಿಸಬಾರದು. ನನ್ನದು ಎಂಬುದು ಒಂದು ಗೌರವಾನ್ವಿತ ಜೀವನೋಪಾಯಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ. ಅದು ಮಿಲಿಯಗಟ್ಟಲೆ ಜನರು ಬದುಕಿಕೊಳ್ಳುವ ರೀತಿಯಲ್ಲಿ ಬದುಕುವುದಕ್ಕೆ ಮಾತ್ರ. ಉಳಿದೆಲ್ಲ ನನ್ನ ಸಂಪತ್ತೂ ಸಮುದಾಯದ್ದು. ಅದು ಆ ಸಮುದಾಯದ ಒಳಿತಿಗೆ ಬಳಕೆಯಾಗಬೇಕು."

ಧರ್ಮದರ್ಶಿತ್ವದ ಕಲ್ಪನೆಯೊಳಗೆ ಇದು ಗಾಂಧಿಯದ್ದು ಎನ್ನುವ ಹಲವು ವಿಶಿಷ್ಟ ದೃಷ್ಟಿಕೋನಗಳೂ, ಆಲೋಚನೆಗಳೂ ಹುದುಗಿವೆ. ಮೊದಲಿಗೆ ಹೇಳಬೇಕಾದ್ದು, ಸಂಪತ್ತಿನ ಅಗಾಧ ಮಟ್ಟದ ಅಸಮಾನತೆ ಒಪ್ಪಿಕೊಳ್ಳಲಾಗದ್ದು ನಿಜ, ಹಾಗಿದ್ದೂ ಅದು ಅನೈತಿಕವಲ್ಲ. ವಾಸ್ತವದ ಬಗೆಗಿನ ಗಾಂಧಿಯ ಇಂತ ಒಂದು ಸ್ಪಷ್ಟತೆ ಒಂದು ಸಕಾರಾತ್ಮಕ ನಿಲುವೇ ಹೌದು. ಇದು ಸಂಪತ್ತು ಪಡೆದವರನ್ನು ಅದೆ ಒಂದು ಕಾರಣಕ್ಕಾಗಿ, ಅಸ್ಪೃಶ್ಯರಂತೆ ನೋಡುವುದಿಲ್ಲ. ಕೆಲವು ಆರ್ಥಿಕ ತತ್ವಗಳು ಖಾಸಗಿ ಸಂಪತ್ತನ್ನು ನಕಾರಾತ್ಮಕವಾಗಿ ನೋಡುತ್ತದೆ. ನಂತರದ ಸ್ಪಷ್ಟ ಮತ್ತು ಖಚಿತವಾದ ವಿಚಾರ, ಸಂಪತ್ತನ್ನು ಹೊಂದಿದವರು ಯಾರೆ ಇರಬಹುದು, ಅಂತವರು ತಮ್ಮ ಸಂಪತ್ತು ಮತ್ತು ಸಂಪನ್ಮೂಲಗಳನ್ನು ಸಮಾಜದ ಮತ್ತು ಅಲ್ಲಿಯ ಎಲ್ಲ ಜನರ ಒಳಿತಿಗೆ ಉಪಯೋಗಕ್ಕೆ ಬರುವಂತೆ ಮಾಡಬೇಕು. ಮೂರನೆಯ ವಿಷಯ, ಇದು ಈ ದಿಕ್ಕಿನಲ್ಲಿ ಕಾರ್ಯಶೀಲರಾಗುವ ಹೊಣೆಯನ್ನು ಸಂಪತ್ತಿನ ಮಾಲೀಕರಿಗೆ ನೀಡುತ್ತದೆ. ಇದು ಗಾಂಧಿಯ ಅಹಿಂಸಾ ತತ್ವದ ಮುಖ್ಯಪಟ್ಟ ಅಂಶವೂ ಹೌದು. ಇದು ಸಿರಿವಂತರು ಹೊರಗಿನ ಒತ್ತಡಗಳಿಲ್ಲದೆ ತಾವೆ ಸ್ವಪ್ರೇರಣೆಯಿಂದ ಕಾಯ–ರ್ೋನ್ಮುಖರಾಗಬೇಕು ಎಂಬ ಸಂಗತಿಯಾಗಿದೆ. ನಾಲ್ಕನೆಯ ವಿಷಯ, ಅದು ಮನುಷ್ಯರ ಒಳ್ಳೆಯ ಸ್ವಭಾವದ ಮೇಲೆ ನಂಬಿಕೆಯನ್ನೂ, ಶ್ರದ್ಧೆಯನ್ನೂ ಹೊಂದಿದೆ. ಮನುಷ್ಯರನ್ನು ನಾವು ನಂಬಿದರೆ ಅವರು ಸರಯಾದ್ದನ್ನೆ ಮಾಡುತ್ತಾರೆ.

ಬಹಳ ಜನರು ಈ ಬಗೆಯ ಧೋರಣೆಯನ್ನು ಅನುಮಾನಿಸಿ ನೋಡಬಹುದು ಎಂಬುದು ಆಶ್ಚರ್ಯದ ವಿಷಯವಲ್ಲ. ಇಂತ ನಂಬಿಕೆ ಸರ್ವಸಮತೆಯ ಸಮಾಜ ನಿರ್ಮಾಣಕ್ಕೆ ಪರಿಣಾಮಕಾರಿಯೆ ಎಂದುಕೊಳ್ಳಬಹುದು. ಅದಕ್ಕೆ ಅವರಿಗೆ ಕಾರಣಗಳೂ ಇರಬಹುದು. ನಾವು ಬದುಕುವ ಪ್ರಪಂಚದ ವಾಸ್ತವತೆಯನ್ನು ಗಮನಿಸಿದ್ದಾದರೆ, ದೀರ್ಘಾವಧಿಯಲ್ಲಿ, ಈ ವಿಧಾನವೆ ಸುಸ್ಥಿರವಾಗಿ ಪರಿಣಾಮಕಾರಿಯಾಗಿರುತ್ತದೆ ಎಂದು ನಾನು ನಂಬುತ್ತೇನೆ.

ವ್ಯಾಪಾರ ಮತ್ತು ಕೈಗಾರಿಕಾ ಕ್ಷೇತ್ರದ ನಾಯಕರು, ಧರ್ಮದರ್ಶಿತ್ವದ ಕಲ್ಪನೆಯ ಜೊತೆಗೆ, ಮಹಾತ್ಮರ ಬದುಕಿನಿಂದ ಕಲಿಯುವುದಕ್ಕೆ ಇನ್ನಷ್ಟು ವಿಷಯಗಳಿವೆ. ಅದರಲ್ಲಿ ಒಂದನ್ನು ನಾನು ತೆಗೆದುಕೊಳ್ಳುತ್ತೇನೆ. ನಾನದನ್ನು 'ನೈತಿಕ ನಾಯಕತ್ವ' ಎನ್ನುತ್ತೇನೆ. ಈ ಮನುಷ್ಯ ಅದು ಹೇಗೆ ಮಿಲಿಯಗಟ್ಟಲೆ ಜನರು ಕಾರ್ಯಶೀಲತೆಯಿಂದ ಕೆಲಸಕ್ಕೆ ಇಳಿಯುವಂತೆ ಪ್ರಭಾವಿಸುವವರಾದರು? ಅದು ಆ ಜನಸಮುದಾಯಗಳ ಮೇಲೆ ಯಾವುದೆ ಔಪಚಾರಿಕ ಅಧಿಕಾರವೂ ಇಲ್ಲದೆ? ಇದಕ್ಕೆ ಭಾಗಶ: ಉತ್ತರ, ಅವರ ನೈತಿಕ ನಾಯಕತ್ವ ಎಂಬುದೆ ಆಗಿದೆ. ಅವರನ್ನು ನಿರ್ದೇಶಿಸುವ ಯಾವುದೆ ಅಧಿಕಾರ ಸ್ಥಾನವೂ ಇಲ್ಲದೆ ಮಿಲಿಯಗಟ್ಟಲೆ ಜನರು ಅವರನ್ನು ಹಿಂಬಾಲಿಸಿದರು. ಈ ನೈತಿಕ ನಾಯಕತ್ವದ ಹಿಂದೆ ಪರಸ್ಪರ ಸಂಬಂಧಪಡುವ ಅವರ ನಡತೆಯ ಮೂರು ಅಂಶಗಳಿವೆ.

ಮೊದಲನೆಯದು, ಸತ್ಯದ ಅವಿರತ ಮತ್ತು ರಾಜಿಯಿಲ್ಲದ ಹಿಂಬಾಲಿಸುವಿಕೆಯಾಗಿದೆ. ಅವರಿಗೆ ಅದು ಸಂಕಷ್ಟಗಳನ್ನು ತಂದೊಡ್ಡಿದರೂ ಅವರು ಹಿಂಜರಿಯಲಿಲ್ಲ, ಹೆದರಲೂ ಇಲ್ಲ. ತಮ್ಮ ಹಿಂದಿನ ನಂಬಿಕೆಗಳನ್ನು ಕೈಬಿಡುವ ಸತ್ಯದ ಅಂಶಗಳು ಕಂಡಾಗೆಲ್ಲ, ಅವರು ಸದಾ ತಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳುವುದಕ್ಕೆ ಸಿದ್ಧವಿದ್ದರು ಮತ್ತು ಅದಕ್ಕೆ ಬೇಕಾದ ಧೈರ್ಯಹೊಂದಿದ್ದರು. ತಮ್ಮ ಪ್ರಯಾಣದ

ದಾರಿಯಲ್ಲಿ ತಾವು ಕಂಡುದನ್ನು ಸಾರ್ವಜನಿಕವಾಗಿ ಹೇಳಿಕೊಳ್ಳುವ ಛಾತಿಯನ್ನು ಹೊಂದಿದ್ದರು. ತಾನು ತಪ್ಪುಮಾಡಿದ್ದೇನೆ ಎಂದು ಹೇಳಿಕೊಳ್ಳುವುದಕ್ಕೆ ಮತ್ತು ತನ್ನನ್ನು ತಿದ್ದಿಕೊಳ್ಳುವುದಕ್ಕೆ ನಿಜಕ್ಕು ದೊಡ್ಡ ವ್ಯಕ್ತಿತ್ವವೆ ಬೇಕು.

ಎರಡನೆಯದು, ಫಲಿತಾಂಶಕ್ಕಿಂತ ಅದನ್ನು ಪಡೆಯುವ ದಾರಿಯ ಬಗ್ಗೆ ಅವರು ನೀಡಿದ ಮಹತ್ವವಾಗಿದೆ. ನಾವು ಇದನ್ನು ಅವರ ಜೀವನದ ಉದ್ದಕ್ಕು ಮತ್ತೆಮತ್ತೆ ಕಾಣುತ್ತೇವೆ. 'ಪೂರ್ಣ ಸ್ವರಾಜ್ಯ'ದ ಕಡೆಗಿನ ನಡೆಯೂ ಅಹಿಂಸೆಯ ಬಗೆಗಿನ ಅಚಲ ನಂಬಿಕೆಯಲ್ಲಿ ಮಹಾತ್ಮರು ರಾಜಿಮಾಡಿಕೊಳ್ಳುವಂತೆ ಮಾಡಲಿಲ್ಲ. ಈ ಪೈಕಿ ಬಹಳ ಜನಜನಿತವಾಗಿರುವ ಉದಾಹರಣೆಯೆಂದರೆ, ಚೌರಿಚೌರಾದಲ್ಲಿ ನಡೆದ ಹಿಂಸಾಚಾರದ ಕಾರಣಕ್ಕೆ ಅಸಹಕಾರ ಚಳವಳಿಯನ್ನು ತಾಯ್ಕಾಲಿಕವಾಗಿ ನಿಲ್ಲಿಸುವ ಅವರ ತೀರ್ಮಾನ. ಅದು ಬಹಳ ವಿವಾದಕ್ಕೆ ಕಾರಣವಾಯಿತು ಎಂಬುದೂ ನಿಜವೆ. ಆದರೆ ಆ ಪ್ರಸಂಗ ಅವರ ವಿಧಾನ, ನೈತಿಕ ಮೌಲ್ಯದ ಮಹತ್ವ, ಕೊನೆಮುಟ್ಟುವುದಕ್ಕಿಂತಲೂ ನಡೆಯುವ ದಾರಿ ಮುಖ್ಯ ಎಂಬ ಅವರ ನಿಲುವು, ಮತ್ತು ಸರಿಯಾದ್ದನ್ನು ಸರಿಯಾದ ಕ್ರಮದಲ್ಲೆ ಮಾಡುವುದು ಎಂಬ ಅವರ ಸ್ಪಷ್ಟತೆಯನ್ನು ಸಾರ್ವಜನಿಕವಾಗಿ ತೋರಿಸಿಕೊಟ್ಟಿತು.

ಮೂರನೆಯದು, ಸರಳವಾಗಿ ಹೇಳಬಹುದಾದಂತೆ, ಅವರ ಅನುಭೂತಿ ಮತ್ತು ಮಾನವೀಯತೆ. ಸಮಾಜದ ದುರ್ಬಲರು ಮತ್ತು ಬಡವರ ಕಡೆಗಿನ ಅವರ ಕಾಳಜಿ ಮತ್ತು ಪಕ್ಷಪಾತದ ಬಗೆಗೆ ಯಾವ ವಿವರಣೆಯೂ ಬೇಕಾಗಲಾರದು. ಭಾರತವನ್ನು ಸಂಘಟಿಸುವ ಅವರ ಪ್ರಯತ್ನ, ಎಲ್ಲಾ ಬಗೆಯ ಜನಜಾತಿಗಳನ್ನೂ ಒಳಗೊಳಿಸಿಯೆ ಮುಂದುವರೆಯಿತು. ಅದು ಅವರ ಮೂರು ಮಹಾಶ್ರದ್ಧೆಗಳಲ್ಲಿ ಒಂದಾಗಿತ್ತು. ಆದರೆ ಹೇಳಲೇಬೇಕಾದ ಅವರ ಸಾಮರ್ಥ್ಯ ಎಂದರೆ ತಮ್ಮ ವಿರೋಧಿಗಳಲ್ಲು ಇರುವ ಒಳ್ಳೆಯ ಗುಣಗಳನ್ನು ಗುರುತಿಸಿ ತಮ್ಮದಾಗಿಸಿಕೊಳ್ಳುವ ಬದ್ಧತೆಯಾಗಿದೆ. ಇದರ ಮೂಲ ಎಲ್ಲರ ಬಗೆಗೂ ಅನುಭೂತಿಹೊಂದಬಲ್ಲ ಅವರ ಸಾಮರ್ಥ್ಯ. ಅದು ತಮ್ಮ ಸಹಜೀವಿ ಮಾನವರ ಬಗೆಗಷ್ಟೆ ಇದ್ದುದಲ್ಲ, ಎಲ್ಲ ಪ್ರಾಣಿ ಜೀವಿ ಮತ್ತು ಪ್ರಕೃತಿ ಬಗೆಗೂ – ಜೀವಶಕ್ತಿಯ ಒಂದನ್ನೂ ಬಿಡದೆ ಒಳಗೊಳ್ಳುವಷ್ಟೂ – ಅದು ಗಾಢವಾಗಿತ್ತು.

ಸತ್ಯವನ್ನು ಹಿಡಿಯುವ ಮೂರು ತ್ರಯಗಳು – ಫಲಕ್ಕಿಂತ ಅದನ್ನು ಪಡೆಯುವುದಕ್ಕೆ ಹಿಡಿಯುವ ದಾರಿ ಮುಖ್ಯ, ಎಲ್ಲ ಜೀವರಾಶಿಗಳನ್ನೂ ಒಳಗೊಳ್ಳುವ ಅನುಭೂತಿ ಮತ್ತು ಪ್ರತಿದಿನ ಪ್ರತಿಕ್ಷಣ ಸಾರ್ವಜನಿಕ ಕಣ್ಣಿಗೆ ಬಯಲಾಗಿಯೆ ಬದುಕುವುದು – ಅವರಿಗೆ ನೈತಿಕ ನಾಯಕತ್ವವನ್ನು ನೀಡಿದ ಸಾಮರ್ಥ್ಯಗಳು. ಇವುಗಳನ್ನು ಮೀರಿ ಜನರ ಮೇಲೆ ಅಧಿಕಾರವನ್ನು ಸ್ಥಾಪಿಸುವ ಇನ್ನಾವ ಶಕ್ತಿಯ ಅಗತ್ಯವೂ ಅವರಿಗೆ ಇರಲಿಲ್ಲ. ಜನರಿಗೆ ಅವರಲ್ಲಿ ಒಂದು ಬೆಳಕು, ಆದರ್ಶ ಮತ್ತು ನಾಯಕತ್ವ ಕಂಡಿತು. ಅವರನ್ನು ಹಿಂಬಾಲಿಸುವುದಕ್ಕೆ ಬೇಕಾದ ಸ್ಫೂರ್ತಿ ಅವುಗಳಲ್ಲಿತ್ತು. ನಾಯಕರಾಗುವ ಸದವಕಾಶವನ್ನು ಪಡೆದ ನಮ್ಮಂತವರು ಕಾಲಕ್ರಮೇಣ ನಮ್ಮ ಅಧಿಕಾರದ ಸ್ಥಾನ ಕುಸಿದುಹೋಗುವುದನ್ನು ಕಾಣುತ್ತೇವೆ. ಆದರೆ ನೈತಿಕ ನಾಯಕತ್ವ ಮಾತ್ರ ಅಳಿವಿಲ್ಲದೆ ಮುಂದುವರೆಯುತ್ತದೆ.

ಕಾಲಾತೀತ ಸತ್ಯವನ್ನು ಹೇಳುವ ಕೆಲವು ಪದಗಳಿವೆ. ಅವುಗಳ ಶಕ್ತಿ ಅವುಗಳನ್ನು ಹೇಳಿಕೊಂಡಷ್ಟು ಸಲವೂ ಹೆಚ್ಚುತ್ತಲೆ ಹೋಗುತ್ತದೆ. ಯಾಕೆಂದರೆ ಅವು ಎಚ್ಚರಗೊಳಿಸುವುದು ನೈತಿಕ ನಾಯಕತ್ವವನ್ನು ಆಗಿದೆ. ನಾನು ಈ ನನ್ನ ವೈಯುಕ್ತಿಕ ನುಡಿಗೌರವವನ್ನು ಆಗಾಗ ಪುನರುಚ್ಚರಿತವಾಗುವ ಅವರದೆ ಮಾತುಗಳಿಂದ ಕೊನೆಗೊಳಿಸುತ್ತೇನೆ, "ನಾನು ನಿಮಗೊಂದು ತಾಲಿಸ್ಮಾನ್ ಕೊಡುತ್ತೇನೆ. ನೀವು ಅನುಮಾನದಲ್ಲಿ ಯಾವಾಗ ಇದ್ದರೂ, ಅಥವ ನನ್ನದು ಎಂಬುದು ಅತಿಯಾದ ಯಾವುದೆ ಘಳಿಗೆಯಲ್ಲಾದರು, ಈ ಕೆಳಗಿನ ಪರೀಕ್ಷೆಗೆ ನಿಮ್ಮನ್ನು ಒಡ್ಡಿಕೊಳ್ಳಿ. ನೀವು ಕಂಡ ಅತ್ಯಂತ ದುರ್ಬಲ ಮತ್ತು ಬಡ ಮನುಷ್ಯರ ಮುಖವನ್ನು ನೆನಪಿಗೆ ತಂದುಕೊಳ್ಳಿ ಮತ್ತು ನೀವು ಮನಸ್ಸುಮಾಡಿರುವ ಕಾರ್ಯ ಅಂತವರಿಗೆ ಪ್ರಯೋಜನಮಾಡಿಕೊಡುವುದೆ ಎಂದು ನಿಮ್ಮನ್ನು ನೀವೆ ಪ್ರಶ್ನಿಸಿಕೊಳ್ಳಿ. ಆಕೆ ಅಥವ ಆತ ಅದರಿಂದ ಉಪಯೋಗ ಪಡೆದಾನೆ ನೋಡಿಕೊಳ್ಳಿ. ಅದು ಆತನಿಗೆ ತನ್ನ ಬದುಕು ಮತ್ತು ಭವಿಷ್ಯದ ಮೇಲೆ ನಿಯಂತ್ರಣವನ್ನು ಕೊಟ್ಟೀತೆ ಎಂದು ಧ್ಯಾನಿಸಿಕೊಳ್ಳಿ. ಬೇರೆ ಪದಗಳಲ್ಲಿ ಹೇಳುವುದಾದರೆ, ಹಸಿದವರಿಗೆ ಮತ್ತು ಆತ್ಮದ ಅರಿವಿನ ಕೊರತೆಯಿಂದ ಬಳಲುತ್ತಿರುವವರಿಗೆ ಅದು ಸ್ವರಾಜ್ಯವನ್ನು ತಂದುಕೊಡುವುದೆ ಯೋಚಿಸಿ. ಆಗ ನಿಮ್ಮ ಅನುಮಾನ ಮತ್ತು ನಾನು ಎಂಬುದು ಕರಗಿ ಮರೆಯಾಗಿ ಹೋಗುತ್ತದೆ."

***ಅನುವಾದ: ರಾಮಕೃಷ್ಣ.***

**(ಸಂಚಿಕೆ 82, ಜೂನ್ 2019)**

***(ಈ ಲೇಖನ ಮೊದಲಿಗೆ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಅಕ್ಟೋಬರ್ 11ರ ಸಂಚಿಕೆಯಲ್ಲಿ ಪ್ರಕಟವಾಯಿತು. ಲೇಖಕರು: ಅಜೀಂ ಪ್ರೇಮ್‌ಜೀ, ವಿಪ್ರೊ ಸಂಸ್ಥೆಯ ಸ್ಥಾಪಕ ಅಧ್ಯಕ್ಷರು.)***

# ಆಲದ ಮರದ ಕೆಳಗೆ

**– ಅನುರಾಗ್ ಬೆಹರ್**

ಆ ದೊಡ್ಡ ಆಲದ ಮರ ಸೂರ್ಯನ ಬಿಸಿಲಿನಿಂದ ಅವರನ್ನು ಕಾಪಾಡುತ್ತಿತ್ತು. ಮಾರ್ಚ್ ಕೊನೆಯಲ್ಲಿ ಸೂರ್ಯ ಇನ್ನೂ ಸುಡುವುದಕ್ಕೆ ಸುರುಮಾಡಿರಲಿಲ್ಲ. ಆದರೆ ಬಯಲಿನಲ್ಲಿ ಅವನು ಖಾರವಾಗಿಯೆ ಇದ್ದ. ಆ ಇಬ್ಬರು ಪುಟ್ಟ ಹುಡುಗಿಯರು ಆಲದ ಮರದ ಬಿಳಲುಗಳನ್ನು ಹಿಡಿದು ತೂಗಿಕೊಳ್ಳುತ್ತಿದ್ದರು. ಹೆತ್ತವರು ದಿನದ ಸಂಪಾದನೆಗೆ ಹೊರಹೋದಾಗ ಮನೆಯಲ್ಲೆ ಉಳಿಯುವುದಕ್ಕೆ ಅವರು ಚಿಕ್ಕವರು. ಅವರ ಒಡಹುಟ್ಟಿದವರ ಜೊತೆ ಅವರು ಶಾಲೆಗೆ ಬಂದಿದ್ದರು. ಒಂದನೆ ತರಗತಿಯಲ್ಲಿ ಕೂರುವುದಕ್ಕು ಅವರು ಪುಟ್ಟವಿದ್ದರು. ಹಾಗಾಗಿ ಶಾಲೆಯ ಆವರಣದಲ್ಲಿ ಸ್ವಚ್ಛಂದವಾಗಿದ್ದರು. ನಾನು ಅವರನ್ನು ಎದುರಾದಾಗ ಅವರು ಆಲದ ಮರ ಬೆಳೆದ ಕಟ್ಟೆಯ ಮೇಲಿದ್ದರು. ಕಟ್ಟೆಯ ಒಂದು ಮೂಲೆಯಲ್ಲಿ ಗೋರಿಯಿತ್ತು. ಶಾಲೆಯ ಆವರಣದ ಪಶ್ಚಿಮ ಪ್ರವೇಶದ್ವಾರದ ಪಕ್ಕವೆ ಆ ಕಟ್ಟೆಯಿತ್ತು.

ಲಕ್ಷ್ಮಿ ಮತ್ತು ಮೇರಿ ಜೀಕುತ್ತಲೆ ನನ್ನ ಜೊತೆ ಸಂಭಾಷಿಸಿದರು. ಒಬ್ಬರ ಹಿಂದೆ ಒಬ್ಬರಂತೆ ನನ್ನ ಕಡೆ ಪ್ರಶ್ನೆಗಳನ್ನು ಎಸೆದರು. ತಮ್ಮ ಬಿಳಲುಗಳಿಗೆ ಆತುಕೊಂಡಿದ್ದ ಪುಟಾಣಿಗಳು ನನ್ನ ಕಣ್ಣಿನ ಮಟ್ಟಕ್ಕೆ ಇದ್ದರು. ನಾನು ಶಿಕ್ಷಕನಲ್ಲ ಎಂಬುದು ಖಚಿತವಾದಂತೆ ಅವರಂತೆ ಜೀಕುವಂತೆ ಮತ್ತು ಅವರನ್ನು ಸೋಲಿಸುವಂತೆ ನನಗೆ ಸವಾಲೆಸೆದರು.

ನಾನು ಆಲದ ಕಟ್ಟೆಯನ್ನು ಹತ್ತತೊಡಗಿದಂತೆ ಅವರು ಕೂಗಿ ಹೇಳಿದರು, 'ಬಾಬಾನ ಮನೆಯಿದೆ, ಬೂಟು ಕಳಚಿಟ್ಟು ಬನ್ನಿ'. ನಾನು ಶೂ ಪೀಕಿಸಿದೆ, ಮೇಲಕ್ಕೆ ಹತ್ತಿದೆ, ಅವರೊಂದಿಗೆ ಕೆಲವು ನಿಮಿಷ ಆಟವಾಡಿದೆ. ಆಮೇಲೆ ಹೊರಡುವುದಕ್ಕೆ ತಯಾರಾದೆ. ಅವರು ಕೇಳಿದರು ನಾನು ಬಾಯಾರಿ ಹೊರಟೆನೆ ಎಂದು. ಹೆಡ್‌ಮಾಸ್ತ್ರು ನನಗಾಗಿ ಕಾಯುತ್ತಿದ್ದಾರೆ ಎಂದೆ. ಅವರು ಒಂದೆ ಗಂಟಲಲ್ಲಿ, ಅವರು 'ಒಳ್ಳೆ ಸರ್' ಎಂದು ಕೂಗಿ ಹೇಳಿದರು.

ನಾನು ಭೇಟಿಕೊಟ್ಟ ಇನ್ನೊಂದು ಶಾಲೆಯಲ್ಲಿ, 6ನೇ ತರಗತಿಯ ವಿದ್ಯಾರ್ಥಿಗಳು ನನ್ನನ್ನು ಬಹಳ ಸುಲಭವಾಗಿ ಭೂಮಿಗಿಳಿಸಿದರು. ನನ್ನನ್ನು ಕೆಣಕುವುದರಲ್ಲಿ ಒಂದು ಮಗುವೂ ಬಾಕಿ ಉಳಿಯಲಿಲ್ಲ. ಅವರು ನನ್ನ ಹೆಸರು ಕೇಳಿದಾಗ, 'ಮೋಹನದಾಸ ಕರಮಚಂದ ಗಾಂಧಿ' ಎಂದೆ. ಬಹಳ ಮಕ್ಕಳು ಮಹಾತ್ಮ ಗಾಂಧಿ ತೀರಿಕೊಂಡಾಗಿದೆ ಎಂದು ಕೂಗಿಕೊಂಡರು. ಆಗ ನಾನು, 'ನರೇಂದ್ರ ಮೋದಿ' ಎಂದೆ. ಅವರು ಉರುಳಾಡುವಂತೆ ಹೊಟ್ಟೆ ತುಂಬ ನಕ್ಕರು. ನಾನು ಅವರಿಗೆ ಸವಾಲು ಹಾಕುವಂತೆ ಕೇಳಿದೆ, 'ನಾನು ಪ್ರಧಾನ ಮಂತ್ರಿ ಅಲ್ಲ ಎಂದು ಯಾಕೆ ಭಾವಿಸುತ್ತೀರಿ?' ಹೀಗೆ ಮಾತುಕತೆ ಮುಂದೆ ಹೋಯಿತು.

ಒಂದು ಮಗು ಕೇಳಿತು, 'ನೀವು ಮುಸಲ್ಮಾನರೆ?' ಇತರರು ನಾನು ಮುಸಲ್ಮಾನ ಹೌದಾ ಎಂದು ಅದೆ ಪ್ರಶ್ನೆಯನ್ನು ಮತ್ತೆ ಕೇಳಿದರು. ಅದು ಹೇಗೆ ನಿಮಗೆ ಗೊತ್ತಾಗುತ್ತದೆ ಕೇಳಿದೆ. ಅವರು ನನ್ನ ಗಲ್ಲದ ಕಡೆ ಕೈಮಾಡಿ, ನಿಮ್ಮ ದಾಡಿ ಅದನ್ನು ಹೇಳುತ್ತದೆ ಅಂದರು. ನಾನು ಮುಸಲ್ಮಾನ ಹೌದು ಅನ್ನುತ್ತಲೆ ನಮ್ಮ ತಮಾಷೆಯ ಹರಟೆ ಸ್ತಬ್ದವಾಯಿತು. ಅವರ ಕಣ್ಣುಗಳಲ್ಲಿ ಕೌತುಕ ಮನೆಮಾಡಿತು. ಅವರಲ್ಲೊಬ್ಬರು ಕೂಗಿದರು, 'ಇಲ್ಲ ನೀವು ಮುಸಲ್ಮಾನ ಅಲ್ಲ'. ಅವನ ಕೂಗು ತರಗತಿಮ ಕೋಣೆಯೊಳಗೆ ಅನುರಣಿಸಿತು. ಅವರು ಅಂತ ತೀರ್ಮಾನಕ್ಕೆ ಹೇಗೆ ಬಂದರು? ತಡವಿಲ್ಲದಂತೆ ಅವರು ಉತ್ತರಿಸಿದರು, 'ಯಾಕೆ ಅಂದರೆ ನೀವು ಒಳ್ಳೆಯವರಿದ್ದೀರಿ'.

ದೊಡ್ಡ ಆಲದ ಮರವಿದ್ದ ಶಾಲೆಯಲ್ಲಿ, 8ನೇ ತರಗತಿಯ ಹಿಂದಿನ ಸಾಲಿನಲ್ಲಿ ನಾನು ಕೂತೆ. ಕೆಲವು ತಿಂಗಳ ಹಿಂದೆ ನಡೆದ ಚುನಾವಣೆ ಕುರಿತು ಅವರ ಚರ್ಚೆಯಿತ್ತು. ಚರ್ಚೆ ರಾಜಕೀಯದ ಬಗೆಗಲ್ಲ, ಚುನಾವಣಾ ಪ್ರಕ್ರಿಯೆ ಕುರಿತು. ಕೆಲವು ಮತಕ್ಷೇತ್ರಗಳು ಮೀಸಲಿದ್ದುದರ ಕುರಿತು ಭಿನ್ನಾಭಿಪ್ರಾಯವಿತ್ತು. ಆ ತರಗತಿಯಲ್ಲಿದ್ದ ಶಿಕ್ಷಕರು ಒಂದು ಸಲ ಮಧ್ಯೆ ಬಂದು, ನಂತರ ಹಿಂದೆ ಸರಿದರು. ವಿದ್ಯಾರ್ಥಿಗಳ ನಡುವಿನ ಮಾತು ಮುಕ್ತವಾಗಿ ನಡೆಯುವುದಕ್ಕೆ ಅನುವು ಮಾಡಿದರು. ಸ್ವಲ್ಪ ಸಮಯದ ನಂತರ ವಿದ್ಯಾರ್ಥಿಗಳೊಂದಿಗೆ ಸಂಭಾಷಿಸುವುದಕ್ಕೆ ಅವರು ನನ್ನನ್ನು ಆಹ್ವಾನಿಸಿದರು.

ಪ್ರಜಾಪ್ರಭುತ್ವದ ಮುಖ್ಯ ಬಿಂದು ಏನು ಕೇಳಿದಾಗ, ಜೀವಿಸುವುದಕ್ಕೆ ಮತ್ತು ಆಡಳಿತಮಾಡುವುದಕ್ಕೆ ಅದು ಅತ್ಯುತ್ತಮ ವಿಧಾನ ಎಂದರು. ಯಾಕೆ ಕೇಳಿದೆ. ಯಾಕೆಂದರೆ ನಾವೆಲ್ಲ ಸಮಾನರು ಎಂದರು. ನಾವು ನಿಜಕ್ಕು ಸಮಾನರೆ ಕೇಳೀದೆ. ಹೌದು, ನಾವು ಸಮಾನರಿದ್ದೇವೆ, ನಾವೆಲ್ಲರು ಮನುಷ್ಯ ಜೀವಿಗಳು, ಮನುಷ್ಯರಾಗಿ ನಾವೆಲ್ಲ ಸಮಾನವಾಗಿದ್ದೇವೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಇಂದು ನಾವು ಸಮಾನರಿಲ್ಲ. ಆದರೆ ಪ್ರಜಾತಂತ್ರ ನಮ್ಮನ್ನು ಅಲ್ಲಿಗೆ ಕರೆದೊಯ್ಯುತ್ತದೆ. ಉದಾಹರಣೆಗೆ, 'ಮೀಸಲು ಚುನಾವಣಾ ಕ್ಷೇತ್ರಗಳು ಅಂತ ಸಮಾನತೆಯನ್ನು ಗಳಿಸುವುದಕ್ಕೆ ಇರುವ ಒಂದು ದಾರಿ. ವಾಸ್ತವ ಎಂದರೆ, ಪ್ರಜಾಪ್ರಭುತ್ವ ಆ ಕಡೆಗಿನ ಅತ್ಯುತ್ತಮ ದಾರಿ ಅಂತಲ್ಲ, ಆದರೆ ಅದೊಂದೆ ದಾರಿ ಅನ್ನುವುದು ವಾಸ್ತವ.'

ನಾನು ಮತ್ತೆ ಅವರ ಪ್ರತಿಕ್ರಿಯೆಗೆ ಒತ್ತಾಯಿಸಿದೆ, ನಾವು ಯಾಕೆ ಸಮಾನರು? ಆ ಪ್ರಶ್ನೆ ವಿದ್ಯಾರ್ಥಿಗಳ ಮಧ್ಯೆ ಐದು ನಿಮಿಷ ಕಾಲ ಸಮಾಲೋಚನೆಗೆ ಕಾರಣವಾಯಿತು. ಅವರ ಚರ್ಚೆ ಮುಕ್ತಾಯಕ್ಕೆ ಬಂದು ನನ್ನೆಡೆ ತಿರುಗಿ ಗಟ್ಟಿಯಾಗಿ ಹೇಳಿದರು, 'ಪ್ರತಿಯೊಬ್ಬರು ಅಂತಸ್ತವಾಗಿ ಒಳ್ಳೆಯವರಿದ್ದಾರೆ'.

'ಮುಸಲ್ಮಾನರೂ ಒಳ್ಳೆಯವರಿದ್ದಾರಲ್ಲ?' ಕೇಳಿದೆ. ಅವರು ಗಟ್ಟಿಯಾಗಿ ನಗಾಡಿದರು. ಯಾಕೆ ನಗಾಡುತ್ತೀರಿ ಕೇಳಿದೆ. ಯಾಕೆಂದರೆ ನನ್ನ ಪ್ರಶ್ನೆ ಹಾಸ್ಯಾಸ್ಪದವಾಗಿತ್ತು. ಇಂಚಿಂಚೂ. 'ಕಟ್ಟೆ ಮೇಲಿನ ಬಾಬಾ ಎಲ್ಲರಿಗಿಂತ ಉತ್ತಮರಿದ್ದರು. ಎಲ್ಲ ಮನುಷ್ಯರು ಒಳ್ಳೆಯವರಾಗುತ್ತಾರೆ.' ಅದಾಗಿ ಶಾಲೆಯ ಸಂಸತ್ತಿನ ಬಗ್ಗೆ ಅವರು ಹೆಮ್ಮೆಯಿಂದ ಮಾತಾಡಿದರು. ಉತ್ಸುಕತೆಯಿಂದ ಜಾತಿ ಮತ್ತು ಲಿಂಗ ಸಮಾನತೆ ಬಗ್ಗೆ, ಆಲೋಚಿಸುತ್ತ ಮೂಢನಂಬಿಕೆಗಳ ಬಗ್ಗೆ. ನಾನು ಮತ್ತೊಂದು ಶಾಲೆಯೆಡೆ ಮುಂದುವರಿದೆ.

ಹೋದ ಪಾಕ್ಷಿಕದಲ್ಲಿ ನಾನು ಶಾಲೆಗಳು ಪ್ರಜಾಪ್ರಭುತ್ವದ ದೇಗುಲಗಳು ಎಂದು ಬರೆದಿದ್ದಾಗ ಎರಡು ಬಗೆಯ ಟೀಕೆ ಎದುರಿಸಿದೆ. ಮೊದಲಿಂದು, ಸಂವಿಧಾನ ವಿರೋಧಿ ಮೌಲ್ಯಗಳನ್ನು ತೋರುವ ಬಹಳ ಮಂದಿ ಉನ್ನತ ಶಿಕ್ಷಣಹೊಂದಿದವರು. ಎರಡನೇದು, ದೇಗುಲ ಎಂಬ ಸಾಂಕೇತಿಕತೆ ಅಪಾಯದ್ದು. ಯಾಕೆಂದರೆ ಶಾಲೆಯ ಮಾತು ದೈವವಾಣಿ ಎಂಬಂತಾದೀತು. ಆಗ ಯಾವುದೆ ಬೌದ್ಧಿಕ ಚಿಂತನಾತ್ಮಕತೆಗಳೂ ಕ್ಷುಲ್ಲಕವೆನಿಸೀತು. ದೇಗುಲಗಳು ನಮ್ಮ ಸುಪ್ತ ಸಾಮರ್ಥ್ಯದ ಸಂಸ್ಥೆಗಳು. ಅವನ್ನು ಒತ್ತೆಯಿಡುವುದು ಅಸಾಧ್ಯ. ವಾಸ್ತವದಲ್ಲಿಯೂ ಅಸಾಧ್ಯ ಮತ್ತು ಸಾಂಕೇತಿಕವಾಗಿಯೂ ಅಸಾಧ್ಯ. ಇದಕ್ಕೆ ಇಲ್ಲಿಯ ಸ್ಥಳಾವಕಾಶವನ್ನು ಮೀರಿದ ಪ್ರತ್ಯೇಕವಾದ ವಿವರವಾದ ಪ್ರತಿಕ್ರಿಯೆಯ ಅಗತ್ಯವಿದೆ.

ಮೊದಲ ಟೀಕೆಗೆ ಕಾರಣ ನನ್ನ ಬರವಣಿಕೆಯ ಸಂಬಂಧಿಸಿದ ಭಾಗದ ತಪ್ಪು ಓದಿನಿಂದ, ಅಥವ ನಾನು ಸಾಕಷ್ಟು ಸ್ಪಷ್ಟವಾಗಿ ಬರೆಯದಿರುವುದರಿಂದ ಆಗಿದೆ. ಶಾಲೆಗಳು ಪ್ರಜಾಪ್ರಭುತ್ವದ ದೇಗುಲಗಳೆ ಆಗಬೇಕಿವೆ. ಆದರೆ ಬಹಳ ಕಮ್ಮಿ ಪ್ರಮಾಣದ ಶಾಲೆಗಳು ಆ ದಿಕ್ಕಿನಲ್ಲಿ ಪರಿಣಾಮಕಾರಿಯಾಗಿವೆ. ಬಹಳ ಶಾಲೆಗಳು ಅದರ ವಿರುದ್ಧದ ಚಿತ್ರಗಳಾಗಿವೆ. ಕೆಲವು ಉನ್ನತ ಶಿಕ್ಷಣವೇತ್ತರು ಅತಿಯಾಗಿಯೆ ಅಸಹನೆಯ ಮತಾಂಧರಾಗಿದ್ದಾರೆ. ಕೆಲವರು ತಮ್ಮ ಸ್ಥಿತಿಯ ಅರಿವಿಲ್ಲದೆ ಹಾಸ್ಯಾಸ್ಪದ ವ್ಯಕ್ತಿಗಳೂ ಆಗಿದ್ದಾರೆ. ತಮ್ಮ ಭೌತಿಕ ಯಶಸ್ಸಿನಲ್ಲಿ ಹೊರಳಾಡುತ್ತ ತಾವು ಶ್ರೇಷ್ಠ ನಾಗರೀಕರು ಎಂಬ ಹುಸಿ ನಂಬಿಕೆಯಲ್ಲಿ ಇದ್ದಾರೆ.

ಈ ಎರಡು ಪಂಗಡಗಳ ನಡುವಿನ ವೈರುದ್ಯವೆ ನಮ್ಮ ಶೈಕ್ಷಣಿಕ ವ್ಯವಸ್ಥೆಯ ಪ್ರಾತಿನಿಧಿಕ ಚಿತ್ರಣವೂ ಆಗಿದೆ. ನಮ್ಮ ಪ್ರತಿಯೊಂದು ಶಾಲೆಯೂ ಬಾಬಾನ ಗೋರಿಯಿರುವ ಶಾಲೆಯಂತೆ ಆಗಬೇಕು. ಶಿಕ್ಷಣ ಮತ್ತು ಶೈಕ್ಷಣಿಕ ಸಂಸ್ಥೆಗಳು ಮಾತ್ರವೆ ಒಂದು ಚೇತೋಹಾರಿ ಪ್ರಜಾತಾಂತ್ರಿಕತೆಯನ್ನು ಬೆಳೆಸುವ ಹೊಣೆ ಹೊರಲಾಗದು. ಆದರೆ ಅವುಗಳ ಪಾತ್ರ ಮಹತ್ವದ್ದಾಗಿದೆ.

ಆ ಎರಡು ಪುಟ್ಟು ಮಕ್ಕಳು ನಾನು ಹೊರಡುವಾಗ ಆಲದ ಮರದ ಕಟ್ಟೆಯ ಮೇಲೆ ಅಂಗಾತ ಮಲಗಿದ್ದರು. 'ಬಾಬಾನಿಗೆ ನಮಸ್ಕರಿಸಿ ಹೋಗಿ' ಎಂದು ನನಗೆ ಆಜ್ಞಾಪಿಸಿದರು. ನಾನು ಶಿರಸಾವಹಿಸಿದೆ. ಅದಾಗಿ ನಾನು ಹೊರಟೆ. ಲಕ್ಷ್ಮಿ, ಮೇರಿ ಮತ್ತು ದೊಡ್ಡ ಆಲದ ಮರದ ಕೆಳಗಿನ ಕಟ್ಟೆ – ಭಾರತದ ಪ್ರಜಾತಾಂತ್ರಿಕತೆಯ ರಾಷ್ಟ್ರೀಯ ವೃಕ್ಷ – ಪ್ರಜಾಪ್ರಭುತ್ವದ ನಿಜವಾದ ಆಲಯವೆ ಆಗಿದೆ.

ಅನುವಾದ: **ರಾಮಕೃಷ್ಣ**

**(ಸಂಚಿಕೆ 82, ಜೂನ್ 2019)**

## Paradoxes in terming the State as Secular

**– Ravindra Jain, Dist. Institute Mandya**

Recent assembly election result has witnessed a greatest haywire in terms of forming the government in the state of Karnataka. The talk of the town was that the 'caste' has played a major role in electioneering of the state. Prime facie, it appeared to be true to some extent. In midst of these discussions, a fundamental question that popup in the mind is that-is Secularism is working in India. Is State or Government has succeed in separating itself from religious affairs and acting as Dharma Neerapekshitha (religious neutrality) in the real sense? To understand gamut of Secularism, we should dive to the concept of secularism.

Secularism is broadly keeps governance unpretentious of religious affairs. Meaning, the individuals in the state can practice, profess and propagate one's religious thoughts. It also mean that the subjects of state can be a non-believers in faith. So, the bottom-line is that the State do not discriminate its subjects on the grounds of faith.

But this principle of secularism is seems to be vicious in itself. Because, the state's neutrality in religious affairs in de facto- is not possible. The Reason is that, the government-a key entity of the State is formed out of the population of State (another key entity of State). If people of the State remains unsecular, one cannot expecting the formation of secular government anyway.

For above argument, one of the classical examples is functioning of Indian democracy. Indian democracy after all having democratically elected government, one cannot term the government as Secular one. Because, the very electioneering process involves the calculation of sub-caste, caste and religious identity. Therefore, saying that State said to be secular only if it is 'religiously neutral'- is something which may not have a validity in itself.

So, now a question comes that how to make a State into secular state in real its terms and practices. The simple answer would be inculcating the values of secularism among-st the subjects of state (people of the state). To broaden it, creating space where in people develop scientific temper and rationality over the addiction to the supernatural explanations; creating the culture of plurality, inclusivity and religious diversity; audacity within for humanism.

So, in-principle, instead of State's neutrality, the State's proactivity is needed in developing Secular Society. One of the best ways of inculcating the secular features in its subjects is developing an Education System in which Secular features are discussed at all levels(mainly curriculum which aiming on developing rationale, pluralistic, inclusive, humanistic individuals). Therefore, the bottom-line is, to have a democratic, socialistic government in place, the prerequisite would be having the Secular subjects rather than having Secular State.

**(Issue 70, June 2018)**

## ಹಳ್ಳಿ ಜೀವನದ ನನ್ನ ಅನುಭವಗಳು

**– ಗುರುರಾಜ ಬುಧ್ಯ, ಜಿಲ್ಲಾ ಸಂಸ್ಥೆ–ಬೆಂಗಳೂರು**

ನಾನು ಮೂಲತಹ ಎರಡು ಹಂತಗಳಲ್ಲಿ ಗ್ರಾಮೀಣ ಜೀವನದ ಅನುಭವವನ್ನು ಗಳಿಸಿದ್ದೇನೆ. ಮೊದಲನೆಯದಾಗಿ ನನ್ನ ಬಾಲ್ಯ ಮತ್ತು ಇನ್ನೊಂದು ನನ್ನ ವಿದ್ಯಾಭ್ಯಾಸದನಂತರ ಹಳ್ಳಿಯಲ್ಲಿ ಕೆಲಸ ಪ್ರಾರಂಭಿಸಿದ್ದು.

ಬಾಲ್ಯದ ಹಲವಾರು ನೆನಪುಗಳು ಒಂದಿಷ್ಟು ಸ್ಪಷ್ಟವಾಗಿವೆ, ಒಂದಿಷ್ಟಿಲ್ಲ. ಬಾಲ್ಯವನ್ನು ನೆನಸಿಕೊಂಡಾಗ ನಾವಿದ್ದ ವಿಶಾಲವಾದ ಮನೆ, ನಮ್ಮ ತಂದೆ ಕೆಲಸಮಾಡುತ್ತಿದ್ದ ಕಛೇರಿಯ ಹಿಂಭಾಗದ್ದಾಗಿರುತ್ತಿತು. ಅದರ ಜೊತೆಗೆ ಬಹಳ ದೊಡ್ಡದಾದ ಹಿತ್ತಲು. ಶಾಲೆ ಮುಗಿದ ನಂತರ ನಮ್ಮ ತಂದೆಯ ಕಛೇರಿ, ಮನೆ, ಹಿತ್ತಲು ನಮ್ಮೆಲ್ಲರ ಆಟದ ಮೈದಾನವಾಗುತ್ತಿದ್ದವು. ಚೇಪೇ, ಮಾವು ಮರಗಳನ್ನು ಹತ್ತಿ ಹಣ್ಣುಗಳನ್ನು ಕೀಳುತ್ತಾ, ಕೆಂಪು ಇರುವೆಗಳಿಂದ ಕಚ್ಚಿಸಿಕೊಳ್ಳುತ್ತಾ, ಮೈಎಲ್ಲಾ ಕೆಂಪಾಗಿಸಿಕೊಂಡದ್ದು ಹಾಗೂ ಬೆಳಗ್ಗೆ ಬಿಸಿನೀರಿನ ಸ್ನಾನ ಮಾಡುವಾಗ ಮೈ ಉರಿತ ಈಗಲೂ ಕಣ್ಣಮುಂದಿದೆ.

ಒಮ್ಮೆ ಯಾವುದೋ ಹಬ್ಬದ ಪ್ರಯುಕ್ತ ಅಮ್ಮಮ್ಮ (ಅಮ್ಮನ ಅಮ್ಮ) ಚಕ್ಕುಲಿ ಮತ್ತು ಲಾಡು ಮಾಡುತ್ತಿದ್ದರು. ನಾವು ಹೆಚ್ಚಾಗಿ ಆಡುತ್ತಿದ್ದದ್ದು 'ಕಳ್ಳ–ಪೋಲೀಸ್'. ಆಟ ಆಡುತ್ತಾ ನಡುವೆ ನಡುವೆ ಅಡುಗೆ ಮನೆಗೆ ಹೋಗಿ ತಯಾರಾಗುತ್ತಿದ್ದ ಚಕ್ಕುಲಿ ಮತ್ತು ಲಾಡುಗಳನ್ನು ಕೈಗೆತ್ತಿಕೊಂಡು ಕದ್ದು ಓಡುವುದು ಒಂದು ಅಭ್ಯಾಸ.

ಸುಧ (ನನ್ನ ತಂಗಿ) ಅಳುತ್ತಾ ಬಂದಳು. ಅವಳು ಸಣ್ಣ ಮೂರು ಚಕ್ರದ ಪುಟಾಣಿ ಸೈಕಿಲನ್ನು ತುಳಿಯುತ್ತಾ ಇಡೀ ಮನೆಯ ಹಿತ್ತಲಲ್ಲಿ ಓಡಾಡುತ್ತಿದ್ದಳು. ಐದು ನಿಮಿಷದ ಹಿಂದೆಯೇ ನಾನು ಒಂದಿಷ್ಟು ಚಕ್ಕುಲಿ ಮತ್ತು ಲಾಡು ಅಡುಗೆ ಮನೆಯಿಂದ ತಂದು ಅವಳಿಗೆ ಕೊಟ್ಟಿದ್ದೆ.

> 'ಏನಾಯಿತು' ನಾ ಕೇಳಿದೆ.
>
> 'ನಾನು ಸೈಕಿಲು ತುಳಿತಾಯಿದ್ದಾಗ, ನೀನು ಬಂದು ಚಕ್ಕುಲಿ ಮತ್ತು ಲಾಡು ಕೊಟ್ಟಿದ್ದೆಯೆಲ್ಲಾ, ಅದನ್ನು ನಾನು ತಿಂ–ತಾಯಿದ್ದೆ. ಒಂದು ಕಾಗೆ ಬಂದು ನನ್ನ ಸೈಕಿಲಿನ ಮುಂದೆಯಿದ್ದ ಮರದ ರೆಂಬೆ ಮೇಳೆ ಕುಳಿತಿತ್ತು. ಆ ಕಾಗೆ ನನ್ನ ತಲೆಯ ಮೇಲೆ ಕುಕ್ಕಿ ಚಕ್ಕುಲಿ ಕಿತ್ತಿಕೊಂಡುಹೋಯ್ತು. ನಾನು ಅಳುತ್ತಾಯಿದ್ದಾಗ ಇನ್ನೊಮ್ಮೆ ಬಂದು ಲಾಡು ಕಿತ್ತಿಕೊಂಡುಹೋಯ್ತು. ನನಗೆ ಚಕ್ಕುಲಿ ಮತ್ತು ಲಾಡು ಬೇಕು.'
>
> ನನಗೆ ಮತ್ತೊಮ್ಮೆ ಅಡುಗೆ ಮನೆಗೆ ಹೋಗಿ ಚಕ್ಕುಲಿ ಮತ್ತು ಲಾಡು ತರುವ ತಾಳ್ಮೆಯಿರಲಿಲ್ಲ. ಅವಳಿಗೇ ಅಡುಗೆ ಮನೆಗೆ ಕಳುಸಿದೆ.

ನಗರಗಳ ಬಹುಮಹಡಿ ಕಟ್ಟಡಗಳಲ್ಲಿ ಕಾಗೆಗಳ ಜೊತೆಗಿನ ಸಂವಾದ ವಿರಲಿ ಕಾಗೆಗಳನ್ನು ನೋಡುವುದೇ ವಿರಳ.

ನಮ್ಮ ಗ್ರಾಮದ ಸುತ್ತಲೂ ಭತ್ತದ ಗದ್ದೆಗಳು, ದೂರದಲ್ಲಿ ಬೆಟ್ಟಗಳು, ಬೆಟ್ಟದ ತಪ್ಪಲಿನಲ್ಲಿ ಕೆರೆ, ಕೆರೆ ಕೋಡಿ ಹಳ್ಳವಾಗಿ ಗ್ರಾಮದ ಪಕ್ಕ ಹರಿದು ನಂತರ ಒಂದು ರಿಸರ್ವಾಯರನಲ್ಲಿ ಸೇರುವುದು. ನಮ್ಮ ಗ್ರಾಮದಲ್ಲಿ ಮೇಕೆ, ಕುರಿ, ಎಮ್ಮೆ, ಹಸು ರಾಸುಗಳು ಬಹಳ ಇದ್ದವು. ಬೆಳಗ್ಗೆ 8ರನಂತರ ಈ ರಾಸುಗಾಳ ಹಲವಾರು ಹಿಂಡುಗಳು ಸಾಲುಸಾಲಾಗಿ ಗ್ರಾಮದ ಬೀದಿಗಳಲ್ಲಿ ಊರಾಚೆಯ ಕಾಡು–ಬೆಟ್ಟಗಳಿಗೆ ಹೊರಡುವುದನ್ನು ಕಾಣಬಹುದು. ಸಂಜೆ 5ರಹೊತ್ತಿಗೆ ಇವು ಹಿಂದಿರುಗುವುದನ್ನೂ ಕಾಣಬಹುದು. ಅಂದರೆ ನಾವೆಲ್ಲ ಶಾಲೆಗೆ – ಅವು ಮೇವಿಗೆ. ನಮ್ಮ ಮನೆಯ ಮುಂದೆಯೇ ವಿಶಾಲವಾದ ಕೊಟ್ಟಿಗೆಯಿತ್ತು. ಅದರಲ್ಲಿ ಮೇಕೆ, ಕುರಿಗಳೇ ಜಾಸ್ತಿ. ಸಂಜೆ ಶಾಲೆ ಬೇಗಾ ಮುಗಿದರೆ ನಮಗೆ ಆ ಕೊಟ್ಟಿಗೆಯೇ ಆಟದ ಸ್ಥಳ. ಒಂದು ಮೂಲೆಯಲ್ಲಿ ಈ ರಾಸುಗಳ ಪಿಕ್ಕೆಗಳ ಗೊಬ್ಬರ ಒಂದು ದೊಡ್ಡ ಪರ್ವತದಂತೆ ಶೇಖರಣೆಯಿರತ್ತಿತ್ತು. ಅದರಲ್ಲಿ ಬಿದ್ದು ಹೊರಳಾಡಿದ್ದು ಮಜವೇ ಬೇರೇ.

ನನಗೆ ಶಾಲೆಯ ಸಹಪಾಠಿಗಳ ಮನೆಗೆ ಹೋಗುವುದೇ ಕಾಯುತ್ತಿದ್ದೆ. ಅವರ ಮನೆಗಳಲ್ಲಿ ಎಮ್ಮೆ – ಹಸುಗಳು, ಕೋಳಿಗಳನ್ನು ನೋಡುವುದು ಆನಂದ ಪಡುವುದು. ನನಗೆ ಪರಿಸರದ ಬಗ್ಗೆ ಕಾಳಜಿ ಪ್ರಾರಂಭವಾಗಿರುವುದೇ ನನ್ನ ಬಾಲ್ಯದ ಗ್ರಾಮ ಅನುಭವದಿಂದ ಎನ್ನಿಸುತ್ತದೆ. ಸ್ನೇಹಿತರ ಮನೆಗೆ ಹೋದಾಗ ಅವರ ಮನೆಯಲ್ಲಿ ತಿಂಡಿಗಳು, ಊಟಗಳು ನನ್ನ ಮನೆಯ ರುಚಿಗಿಂತ ವಿಶೇಷವಾಗಿರುತ್ತಿತ್ತು. ಅವರ ಮನೆಗಳಲ್ಲಿ ತಿನ್ನುತ್ತಿದ್ದನ್ನು ನಾನು ನನ್ನ ಮನೆಯಲ್ಲಿ ಹೇಳುತ್ತಿರಲಿಲ್ಲ. ಸ್ನೇಹಿತರ ಮನೆಯಲ್ಲೂ ತಿನ್ನುವುದು, ಮತ್ತು ಮನೆಗೆ ಬಂದು ಅಲ್ಲೂ ತಿನ್ನುವುದು. ಈಗಲೂ ಗ್ರಾಮೀಣ ಪ್ರದೇಶ ಅಥವಾ ಬೆಂಗಳೂರು ಬಿಟ್ಟು ಬೇರೇ

ಊರುಗಳಿಗೆ ಹೋದಾಗ ಸ್ಥಳೀಯ ತಿಂಡಿ ತಿನಿಸುಗಳೆಂದರೇ ಈಗಲೂ ಬಹಳ ಪ್ರೀತಿ ನನಗೆ.

ನಗರಕ್ಕೆ ಬಂದು ನೆಲೆಸಿದ ಮೇಲೆ ಮತ್ತೆ ಗ್ರಾಮಗಳಿಗೆ ಹೋಗುವ ಸಂದರ್ಭ ಬಂದದ್ದು, ಕೆಲಸ ಪ್ರಾರಂಭಿಸಿದಮೇಲೆ. ನಾನು ಪರಿಸರ ಪ್ರೇಮಿಯಾಗಿ, ಪರಿಸರವನ್ನು ಉಳಿಸಲು ಪಣ ತೊಟ್ಟಿರುವ ಬಿಸಿ ರಕ್ತದ ಯುವಕನಾಗಿ ಬೆಂಗಳೂರಿನ ಒಂದು ಗ್ರಾಮದಲ್ಲಿ ಎರಡು ವರ್ಷ ತೊಡಗಿಸಿಕೊಂಡದ್ದು. ಈ ಎರಡು ವರ್ಷಗಳು ನನಗೆ ಯಾವುದೋ ಒಂದು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಶಿಕ್ಷಣ ಮುಗಿಸಿದಂತೆ ಅನುಭವ. ನಂತರ ರಕ್ತ ಸ್ವಲ್ಪ ತಣ್ಣಗಾಯಿತು.

ಗ್ರಾಮದ ಜನರ ದಿನನಿತ್ಯದ ಜೀವನದ ಅವಶ್ಯಕತೆಗಳು, ಅವರ ಜೀವನಶೈಲಿ, ನೀರು, ಸೌದೆ, ಮರಮುಟ್ಟುಗಳಿಗೆ ಬೇಕಾದ ಅಂಶಗಳನ್ನು ಅವರು ಪ್ರಕೃತಿಯಿಂದ (ಕಾಡಿನಿಂದ) ಪಡೆಯುವ ವಿಧಾನ (ಎಷ್ಟು ಬೇಕೋ ಅಷ್ಟು), ಇವುಗಳನ್ನು ನೋಡಿ ನನಗೆ ಸಾಕಾಯಿತು. ಎಂದರೇ, ಇವರು ಈಗಾಗಲೇ ಅವರ ಸಂಪನ್ಮೂಲಗಳನ್ನು ಕಾಪಾಡಿಕೊಳ್ಳುತ್ತಿದ್ದಾರೆ, ನಾನು ನಗರದಿಂದ ಬಂದು ತಿಳುವಳಿಕೆಕೊಡುವ ಅಗತ್ಯವಿಲ್ಲಯೆಂದು. ನನಗೆ ಬಿಡುವಿದ್ದಾಗಲೆಲ್ಲಾ ನಾನು ಊರಿನ ಅಂಗಡಿ ಛಾವಡಿಗಳಲ್ಲಿ, ಅಥವಾ ಊರಿನ ಗೇಟಿನಲ್ಲಿರುವ ಬಸ್ ಸ್ಟಾಪಿನಲ್ಲಿ, ಅಥವಾ ಚಹಾ ಅಂಗಡಿಯಲ್ಲಿ ಕೂತು ದೊಡ್ಡವರೊಡನೆ ಹರಟೆ ಹೊಡೆಯುತ್ತಿದ್ದೆ.

> ನರಸಿಂಹಯ್ಯ ಕೇಳಿದರು 'ತಾವು ಬೆಂಗಳೂರಿನಲ್ಲಿ ಓದಿ, ಕಂಪೆನಿಯಲ್ಲಿ ಕೆಲಸಕ್ಕೆ ಸೇರುವುದು ಬಿಟ್ಟು, ಗ್ರಾಮಕ್ಕೆ ಬಂದಿದಿದ್ದೀರಲ್ಲ. ನಾವೆಲ್ಲ ನಗರದ ಕಡೆಗೆ ಮುಖ ಮಾಡಿದ್ದರೆ, ತಾವುಗಳು ಗ್ರಾಮದಕಡೆ ಮುಖಮಾಡಿದ್ದೀರಲ್ಲಾ?'.

ನನಗೆ ಈರೀತಿಯ ವಿವರಣೆಗಳು ಕೊಡುವ ಬಹಳ ಸಂದರ್ಭಗಳು ಪ್ರಾರಂಭದಲ್ಲಿರುತ್ತಿದ್ದವು. ನನಗೆ ಆಸಕ್ತಿಯಿರುವುದರಿಂದ ನಾನು ಈ ರೀತಿಯ ವಿಷಯಕ್ಕೆ ಕೈಹಾಕಿದ್ದೀನೆಂದು ಹೇಳಿದ್ದೆ. ಕಾಡನ್ನು ಕಾಪಾಡುವುದು, ಸಂರಕ್ಷಣೆ ಮಾಡುವುದರಬಗ್ಗೆನೂ ಮಾತುಕತೆಗಳಾಗುತ್ತಿದ್ದವು.

> ನರಸಿಂಹಯ್ಯ ಮತ್ತೆ ಹೇಳಿದರು 'ಸಮಾಜದಲ್ಲಿ ಮುಖ್ಯವಾಗಿ ಮನುಷ್ಯರಿಗೆ ಬೇಕಾಗಿರುವುದು ಊಟ, ಬಟ್ಟೆ, ಮನೆ. ಈ ಮೂರು ಇದ್ದವರಿಗೆ ಲೋಕದಬಗ್ಗೆ ಧ್ಯಾಸೆ. ಬೇಕಾಗಿರೋ ಮೂರು ಅಂಶಗಳಿರುವುದರಿಂದ ಬೇರೊಂದರ ಬಗ್ಗೆ ಯೋಚಿಸಲು ಸಮಯವಿರುತ್ತದೆ. ಈ ರೀತಿಯ ಜನ ತಿಳುವಳಿಕೆ ಹೇಳಿದರೆ ಕೇಳಲು ಇನ್ನೊಂದು ಹೊಟ್ಟೆತುಂಬಿದ ಜನ ಸಿಗುವುದಿಲ್ಲ, ಏಕೆಂದರೆ ಅವ ಬೇರೇ ಇನ್ನೊಂದು ತೆವಲು ತೀರಿಸಿಕೊಳ್ಳುವ ಪ್ರಯತ್ನದಲ್ಲಿರುತ್ತಾರೆ. ಹಾಗಾಗಿ ಹೊಟ್ಟೆ ತುಂಬಿಸಿಕೊಳ್ಳಲು ಪ್ರಯತ್ನ ಮಾಡುತ್ತಿರುವ ಮಂದಿಯೇ ಈ ಪ್ರಯತ್ನದಲ್ಲಿ ಸಿಕ್ಕಿಹಾಕಿಕೊಳ್ಳುವುದು. ಯಾರಿಗೆ ತಿನ್ನೋಕ್ಕೇ ಹಿಟ್ಟಿಲ್ಲವೋ ಅವನೇ ಕೊನೆಗೆ ಹೊಟ್ಟೆ ಖಾಲಿಯಿಟ್ಟುಕೊಂಡು ಪರಿಸರ ರಕ್ಷಣೆಯಲ್ಲಿ ತೊಡಗಿಸ್ಕೋಬೇಕೆಂದು ನೀವು ಹೇಳೋದು'.

ಆಗ ನನಗೆ ಕರೆಂಟು ಶಾಕ್. ಹೌದು, ಅವರು ಹೇಳ್ತಾಯಿರೋದು ಸರಿ. ಎಲ್ಲಾ ಸೌಲಭ್ಯಗಳನ್ನು ನಗರಗಳು ಪೇರಿಸಿಕೊಂಡು (ಗ್ರಾಮಗಳಿಂದಲೇ ಪಡೆದುಕೊಂಡು), ಗ್ರಾಮಸ್ಥರಿಗೆ ಬುದ್ಧಿವಾದ ಹೇಳುವುದನ್ನು ನಗರಗಳು ಈಗಲೂ ಮಾಡ್ತಾಯಿದ್ದಾವೆ, ನಾನೇ ದೊಡ್ಡಣ್ಣ, ನಾನು ಹೇಳಿದ ಹಾಗೆ ನೀನು ಕೇಳಬೇಕು ಎಂದು.

ಇದೇ ವಿಷಯ 'ಅಭಿವೃದ್ಧಿ' ವಲಯದಲ್ಲಿ ಕೆಲಸಮಾಡುತ್ತಿರುವ ಜನರಿಗೂ ಸಲ್ಲುತ್ತೆ. ತನಗೆ ಅನ್ನಿಸಿರುವ ಅಂಶಗಳನ್ನು, ಸ್ಥಳೀಯ ಅಗತ್ಯಗಳಿಗೆ ಅವಶ್ಯಕತೆಯಿಲ್ಲದಿದ್ದರೂ, ಹೇರಿ, ಜನರು ಬದಲಾವಣೆಯ ದಿಕ್ಕಿನಲ್ಲಿ ಚಲಿಸುವ ಯೋಚನೆಯೇಯಿಲ್ಲದೆಯೇ ಸ್ತಬ್ಧರಾಗಿದ್ದಾರೆಂದು ಹೇಳುವುದು.

ನರಸಿಂಹಯ್ಯನವರು ಹೇಳಿರುವ ಅನುಭವದ ಮಾತು ಗ್ರಾಮೀಣ ಜನರಲ್ಲಿರುವ ಜ್ಞಾನದ ಆಳವನ್ನು ಎತ್ತಿತೋರಿಸುತ್ತದೆ. ಈ ಸರಳತೆ, ವಾಸ್ತವಿಕತೆ, ಅನಭವಗಳನ್ನು ಎಲ್ಲಿಯತನಕ ನಾವು ಪ್ರಾಮಾಣಿಕವಾಗಿ ಅರ್ಥಮಾಡಿಕೊಳ್ಳುವುದಿಲ್ಲವೋ, ಅಲ್ಲಿಯತನಕ, ನಮ್ಮ ಜ್ಞಾನದ ಬಟ್ಟಲು ಖಾಲಿಯೇ!!

ನರಸಿಂಹಯ್ಯನವರ ಹಲವಾರು ಅಂಶಗಳು ಈಗಲೂ ನಾನು ಆಗಾಗ ನೆನಪಿಸಿಕೊಂಡು ನಾನು ಮಾಡುತ್ತಿರುವ ಮಾರ್ಗ ಸರಿಯಿದೆಯೋ, ಇಲ್ಲವೋ ಎಂದು ಆಗಾಗ ನೋಡಿಕೊಳ್ಳುತ್ತಿರುತ್ತೇನೆ.

**(ಸಂಚಿಕೆ 73, ಸೆಪ್ಟಂಬರ್ 2018)**

# Blackboard - A Window to the World

**-Akshatha S Belludi, District Institute Koppal**



Blackboard is a vital tool in our work as teachers if used effectively it can be a window from the classroom to the world.


It's easier for a child to connect itself to what it could see, touch and feel, if these could be brought into the classroom via the medium of the board it is one of the best way to engage the children of diverse learning types.

Consider the below example; Different drawings are used to introduce the vocabulary for the objects the child commonly sees like boy and girl, different trees, action words, concept of pronouns, various expressions, different hair styles, ornaments worn, parts of the body etc..

The more creative the teacher gets the more enjoying the learning becomes consider for example instead of using the normal man for introducing the body parts the above example uses the monster to trigger interest in the child.

Sentence tables can also be used to describe the function of different organs of the monster.

**Sentence Tables:**




Learning happens when the information is repeated multiple times but in various contexts. Sentence tables are the effective tools to achieve this.


Consider the below examples.

Various questions in different contexts could be written on the black-board and the child could be asked to repeat the same and ask each other similar questions taking turns. This would enable the child to come up with various sentences and create a need for it to know the vocabulary for asking and answering various questions.

Vocabulary for various animals, birds, trees, vehicles could be introduced in the similar fashion.

Prepositions, tenses which are difficult to introduce to the children because of their abstractness could be easily introduced by using the below method.

The first instance is about the scene in the forest which existed before and after the tiger enters it. Children could be encouraged to elicit a story around the pictures and suitable vocabulary could be introduced. This would also help them trigger their imagination.



Second picture could be used to introduce prepositions like up, below, around, then, next etc. like the following way first the parrot flew though the mango tree then it flew into the palmyrah tree after that the parrot flew though the tamarind tree next the parrot flew around the fir tree finally the parrot flew under the coconut tree.

Children could be encouraged to create stories in similar contexts like the third picture to reinforce the use of various grammatical constructs.

**(Issue 87, November 2019)**

## Kotreshi Kanasu – review of a Kannada movie on school education

**-Sreekanth Shreedharan, Dist. Institute Bangalore**

This review is prompted by the feeling of dissatisfaction at having said to a few colleagues after watching the movie, that despite it's apparent descriptive accuracy, the movie disappoints. This comment neither does full justice to what is good in the movie, nor clarifies the core issue, both of which are elaborated below.

Kottreshi Kanasu is a movie directed Na. Chandrasekhar based on a story by Kum. Veerabhadrappa. The story portrays Kotra, a Dalit boy doing well in securing a $1^{st}$ Class in Grade 7 against all odds. He doesn't have any of the social and cultural capital to make this happen, as we can see in the impoverished hut, where he lives with no signs of any books, newspaper or magazines, his possibly illiterate parents and neighbours. He also works in the house of the local Gowda family, who seems to have an ambiguous relation to him. He works in their house for a small earning and they share both an inner core of affection and outer core of the maintenance of certain caste and social distinctions, like giving him coffee in a separate glass.

Of special note is that even if there is a discrimination at the village level, the school is as far it is shown, an equitable space, where all children sit with each other, and the school master is fair, competent and compassionate. He seems to remind of John Dewey's thoughts on how the school should create a space where the child can experience a democratic way of being, which may often not be available in the outside community. (The later portrayal of the master who is unable to not discriminate against Kotra even in his own house, only reinforces the value of the space the school provides even more)

At his success after Grade 7, his parents and community rejoice and dream of his going on to do well in later life and hopefully become an officer. In a dream sequence, the suite-booted Kotra returns to the village in a car, and the Gowda runs behind him with a garland. This is like the so-called Freudian dream, where the repressed desires find its fulfillment. However the expression of desire in overt celebrations, which culminate in the Gowda's house have an air of triumphalism to it. There are multiple jibes at other children including the Gowda's, who only got a $3^{rd}$ class. This elicits tough retribution, where Kotra is thrown out of his work at the Gowda house and also severely physically harassed by another localite by being forced to smoke a cigarette.

Kotra doesn't yet fully grasp the sudden change in his situation, where he is not only harassed but also isolated by his school friends, as they are also cross with him for being ridiculed at their low performance. Kotra develops high anxiety of going to High School based on all this.

The subsequent part of the movie shows the parents and their desperate attempts to get him to agree and then have to deal with the aided school management in paying fees and overcoming various calculated roadblocks created to keep Kotra out. The situation is as hopeless as they are desperate. Eventually Kotra's father goes on a hunger strike, and the heightened tension causes a few of their community to show aggression to which the elite of the village respond by torching their huts!

Eventually different arms of the State intervene by design and by chance. The police exert some control over the village elites. Meanwhile an aide and mentor takes Kotra to Bangalore to meet various politicians and officials, in the end reaching none other than the Education Minister. Orders are sent from "above" and now the local officials, school management and local elites have no option but to comply and eventually "Kotra Highschoolige Seriddu" which is also the name of the story based on which the film is made.

For a film, possibly based in the 70s or 80s and made in 1994, Kotreshi Kanasu shows a remarkable level of social commitment in choosing an important topic and doing justice to it in a certain sense. It tells a story that is as important as it is believable and through a host of likeable characters, it portrays the issue with poignancy. However every movie made on such a cause cannot also be an artistic or literary high-point and one needs to appreciate it for what it is, a genuine, well-intentioned movie, that is not easy to forget.

However the only crib is that, having brought the audience to the threshold of such an important issue a little more attention to certain aspects would have helped. The community of the protagonists' is painted in somewhat pastel shade of having no other dimension to life than getting Kotra to high School. Such selective attention doesn't bring out the different layers of their life. The jubilation of the community at Kotra's success is probably an accurate description of what may happen. And the power display that one finds there is certainly to be seen as a response to the way the relations are shaped by the local elite, where any discourse has to be on the basis of power and every ritual has to explicitly reinforce the hierarchy. However in painting only such a dialectic of power and counter-power, the movie misses out on the possibility of establishing a different discourse, which may not be a portrayal of what is journalistically possible, but of what is philosophically imaginable. After all is all great art to be mere representation? It is the absence of this that causes the movie to finally require the God's avatar, which in this case is in the form of a Vishnu Vardhan cameo and a gift right from the Education Minister.

This is why the movie, as much as it invites us to the threshold of the house of a normatively superior possibility, doesn't end up giving us the coffee in the cup of the household. Instead it disappoints us by serving us in the cup of mere power discourse. Lucky Kotra, but what of the 1000s of similar others?

**Benny, Bangalore**

This is my first ever attempt at writing about a movie. That too after just one viewing and a lousy one at that. I am not sure how relevant what I say to the purpose of the movie.

The review is a well-written analysis of the movie. What I like the most is the way the synopsis of the storyline presented. It, while giving a fair understanding of the theme and the development of the plot, also touches upon the larger social issues the movie attempts to portray (the neatly segregated lives of the social life of Kotra and his community as contrasted with that of the local elites) as well as some psychological aspects of some individual characters as well the not-so-easy-to-define relationship between some of the characters (the conflicting personality of the school master; the ambiguous relationship the Gowda family has with Kotra).

The review clearly states that every movie made on a cause as the Dalit's right to education cannot be an artistic or literary high-point and one needs to appreciate it for what it is, a genuine and well-intentioned

movie, which is not easy to forget. However, it would have been better if the review also had mentioned, at least in passing, some of the aesthetically and artistically jarring aspects of the movie as well. Perhaps, the review is written basically from the point of view of the 'art for society's sake school' of aesthetics. Nevertheless, it may not be totally wrong to say that there's not much of extraordinary acting by any of the actors. Even an accomplished artiste like Dattatreya doesn't inspire much. Especially when one thinks of his later stellar performances in movies like 'Bettada Jeeva' and 'Mounie'. (Probably such performances were a later maturation of the actor in him.) The whole movie appears to be a plain story telling without leaving much to the imagination of the interpretation of the viewer. In other words, it seems that everything is 'said', where much should/could have been 'shown'.

It seems that at times, the director laboriously tries to fit in certain scenes to put across a social and political message, which seems to affect the organic flow of the story (One instance could be the scene where a man gets impressed by what Kottra tells his mother about the polluted water in the temple pond and handing him over a book with the picture of Ambedkar on its cover). If one remembers the frozen frame with which the Marathi movie Fundri (which also deals with a similar theme), one could think of the alternative possibilities of ending the movie in a more symbolic and open-ended way.

Having said all these, I do believe that the movie has to be appreciated for what it was trying to do almost three decades ago when the social and political awareness about the Dalit cause was not at a level as it is now. It is sure that if Na. Chandrashekhar were to make a movie today on the same theme, his treatment of it – both thematically and artistically – would be much more refined and sophisticated.

**Shilpa, Bangalore**

Another point that adds consistency to the Teacher's story is, when Kotra's friends are cross with him, all those scenes are outside the school. Of course, they had finished $7^{th}$ and going to $8^{th}$, so holidays mostly.

Teacher's role has been portrayed idealistically. How, even being aware of holiness of the pond, how Kotra talks scientifically.

And even takes action during the baba scene and rescues Arjuna, his pet.

Could be the wave of "scientific thinking" during the times of when the movie was made.

**Issue 82, June 2019**

# ದಿನಚರಿ ಬರೆವಣಿಗೆ ಮತ್ತು ಶಿಕ್ಷಣ

– ಶಿವರತನ್ ಥಾನ್ವಿ

ಮಕ್ಕಳಲ್ಲಿ ಸ್ವತಂತ್ರ ಹಾಗೂ ಸೃಜನಶೀಲ ಬರವಣಿಗೆ ರೂಪಿಸುವಲ್ಲಿ ದಿನಚರಿ ಬರೆಯುವುದು ಒಂದು ಉಪಯುಕ್ತವಾದ ಚಟುವಟಿಕೆಯಾಗಬಹುದು. ಆದರೆ ಇದನ್ನು ಕಡ್ಡಾಯಗೊಳಿಸಬಾರದು. ಈ ಲೇಖನ ಮಕ್ಕಳೊಂದಿಗೆ ದಿನಚರಿ ಬರೆಯುವುದನ್ನು ಪ್ರಾರಂಭಿಸುವುದು ಮತ್ತು ಅದರ ಮೂಲಕ ಜಗತ್ತನ್ನು ನೋಡುವ, ಅರ್ಥಮಾಡಿಕೊಳ್ಳುವ ದೃಷ್ಟಿಕೋನದ ಮೇಲೆ ಬೀಳುವ ಪರಿಣಾಮವನ್ನು ಪ್ರತಿಪಾದಿಸುತ್ತದೆ.

ಒಂದು ಚಟುವಟಿಕೆಯು ಪಠ್ಯದ ಬಹುಮುಖ್ಯ ಭಾಗ ಆಗಬಹುದು ಮತ್ತು ಪಠ್ಯೇತರ ಚಟುವಟಿಕೆಯಲ್ಲಿಯೂ ಸ್ಥಾನ ಪಡೆಯಬಹುದು. ನಾವು ನೆನಪಿನಲ್ಲಿಡಬೇಕಾದ ಒಂದು ವಿಷಯ ಎಂದರೆ ಇದನ್ನು ಕಡ್ಡಾಯಗೊಳಿಸಬಾರದು. ಇದನ್ನು ಸ್ವ-ಇಚ್ಛೆಯಿಂದ ರಚಿಸುವುದು ಬಹಳ ಮುಖ್ಯವಾದದ್ದು. ಆಗ ಮಾತ್ರ ಈ ಚಟುವಟಿಕೆಯು ಪರಿಣಾಮಕಾರಿಯಾಗುತ್ತದೆ.

ಈ ರೀತಿಯ ಒಂದು ಚಟುವಟಿಕೆಯೇ ದಿನಚರಿ ಬರೆಯುವುದು. ಇದರ ಬಗ್ಗೆ ಎಲ್ಲರಿಗೂ ಗೊತ್ತಿದೆ ಆದರೆ ಅಷ್ಟೊಂದು ಗಮನ ಹರಿಸದೆ ಇದ್ದಿರಬಹುದು. ಗಮನ ಹರಿಸಿರಿ. ಈ ಕೆಲಸವನ್ನು ಭಾಷಾ ಶಿಕ್ಷಕರೇ ಮಾಡಬೇಕೆಂಬ ಅಗತ್ಯವಿಲ್ಲ. ಅನ್ಯ ವಿಷಯ ಬೋಧಿಸುವ ಶಿಕ್ಷಕರು ಸಹ ಮಾಡಬಹುದು. ನೈಜ ಅನುಭವವನ್ನು ದಿನಚರಿಯ ರೂಪದಲ್ಲಿ ಬರೆಯುವುದರಿಂದ ಅದು ಭಾಷೆಯ ವಿಕಾಸಕ್ಕೆ ಸಹಾಯ ಮಾಡುತ್ತದೆ. ಹಾಗೆಯೇ ಆಲೋಚಿಸುವುದನ್ನು ಹೇಳಿಕೊಡುತ್ತದೆ ಮತ್ತು ಒಳ್ಳೆಯ ಸ್ವಭಾವವನ್ನು ಅಳವಡಿಸಿಕೊಳ್ಳುವುದರ ಬಗೆಗೂ ಸಹ ತಿಳಿಸುತ್ತದೆ. ಇದರಿಂದ ಶೈಕ್ಷಣಿಕ ಕಲಿಕೆಯು ಉಂಟಾಗುತ್ತದೆ ಹಾಗೂ ನೈತಿಕ ಮಾನದಂಡವು ಸಹ ಹೆಚ್ಚಾಗುತ್ತದೆ.

ಹಾಗಾದರೆ ನಮ್ಮ ವಿದ್ಯಾರ್ಥಿಗಳು ದಿನಚರಿಯನ್ನು ಹೇಗೆ ಬರೆಯುತ್ತಾರೆ? ಮತ್ತು ಯಾಕೆ ಬರೆಯಬೇಕು? ಇದನ್ನು ನಾವು ಅವರಿಗೆ ಅರ್ಥಮಾಡಿಸಬೇಕು. ನಾವು ಹೀಗೆ ಹೇಳಬೇಕಾಗಬಹುದು– ಅವರು ಸುತ್ತಮುತ್ತ ಏನನ್ನು ನೋಡುತ್ತಾರೆ ಅದರ ಬಗ್ಗೆ ಬರೆಯುವುದು, ಯಾವುದರ ಅನುಭವಕ್ಕೊಳಗಾಗುತ್ತಾರೆ ಅದರ ಬಗ್ಗೆ ಬರೆಯುವುದು ಇತ್ಯಾದಿ. ಹಾಗೆಯೇ ಏತಕ್ಕಾಗಿ ಬರೆಯಬೇಕೆಂದರೆ– ಅವರು ಏನನ್ನು ನೋಡುತ್ತಾರೆ ಹಾಗೂ ಹೇಗೆ ಆಲೋಚಿಸುತ್ತಾರೆ ಎಂಬುದನ್ನು ಸ್ವತಃ ತಿಳಿಯಲು ಬರೆಯುವುದು ಮುಖ್ಯ. ಒಂದು ತರಹದಲ್ಲಿ ನಾವು ನಮ್ಮ ಇತಿಹಾಸವನ್ನು ಬರೆಯುತ್ತಿದ್ದೇವೆ ಹಾಗೂ ಬರೆಯುವುದನ್ನು ಕಲಿಯಲು ಸಹ ಬರೆಯುತ್ತಿದ್ದೇವೆ. ಬರೆಯುತ್ತಾ ನಾವು ಹೇಗೆ ಬರೆಯಬಹುದು ಹಾಗೂ ಏನನ್ನ ಬರೆಯಬಹುದು ಮತ್ತು ಬರವಣಿಗೆಯನ್ನು ಇನ್ನೂ ಚೆನ್ನಾಗಿ ಹೇಗೆ ರೂಪಿಸಬಹುದು ಎಂಬುದನ್ನು ತಿಳಿಯಲು ಸಹ ಬರೆಯುತ್ತೇವೆ. ಇದು ಪ್ರತಿದಿನ ಮಾಡುವ ಕೆಲಸವಲ್ಲ ನಮಗೆ ಯಾವಾಗ ತೋಚುತ್ತದೆಯೋ/ ಇಷ್ಟವಾಗುತ್ತದೋ ಆಗ ಮಾಡುವ ಕೆಲಸ.

ಶಿಕ್ಷಕರ ಮುಖ್ಯ ಪಾತ್ರ ವಿದ್ಯಾರ್ಥಿಗಳು ದಿನಚರಿ ಬರೆಯುವುದನ್ನು ಇಷ್ಟ ಪಡುವಂತೆ ಮಾಡುವುದು. ಮಕ್ಕಳನ್ನು ಹುರಿದುಂಬಿಸಲು, ಅವರೆಲ್ಲರೂ ಲೇಖಕರು ಮತ್ತು ಅವರ ನಿಜ ಜೀವನದ ಕಥೆಯನ್ನು ಒಂದು ಪುಸ್ತಕದ ರೂಪದಲ್ಲಿ ವ್ಯಕ್ತಪಡಿಸುವರು ಎಂಬುದನ್ನು ತಿಳಿಸಬೇಕು.

ಅವರ ವೈಯಕ್ತಿಕ ಜೀವನವು ಈ ಪುಸ್ತಕದಲ್ಲಿ ಪ್ರತಿಬಿಂಬಿಸಬೇಕಾಗಿದೆ. ಸಣ್ಣ ಪುಸ್ತಕದೊಂದಿಗೆ ದಿನಚರಿ ಬರೆಯುವುದನ್ನು ಶುರುಮಾಡಬಹುದು. ಇದಕ್ಕೊಂದು ಹೆಸರಿಡಬಹುದು ಉದಾಹರಣೆಗೆ "ನನ್ನ ದಿನಚರಿ", "ನನ್ನ ಪುಸ್ತಕ", "ನನ್ನ ಕಥೆ", "ಒಂದು ಪುಸ್ತಕ" ಇತ್ಯಾದಿ. ಅದರ ಮೇಲೆ ಹೆಸರು ಬರೆಸೋಣ. ಆಗ ಮಕ್ಕಳು ಬರೆಯುವುದಕ್ಕೆ ಇಂಗಿತ ವ್ಯಕ್ತಪಡಿಸುತ್ತಾರೆ. ಅವರ ಜೀವನದ ಘಟನಾವಳಿಗಳ ಕಡೆಗೆ ಅವರು ಗಮನಹರಿಸುತ್ತಾರೆ. ಹಾಗೆಯೇ ಆ ಘಟನೆಗಳಿಂದ ಇವತ್ತಿನ ದಿನಕ್ಕೆ ಒಂದು ವಿಚಾರವನ್ನು ಬರೆಯಲು ಹೇಳುವುದು. ಅವರ ಗಮನವು ಯಾವ ವಿಚಾರವನ್ನು ಆರಿಸುವುದು, ವಿಷಯವನ್ನು ಆರಿಸುವಾಗ ಅವರು ಯೋಚಿಸುವರು, ಅದು ಆ ದಿನದ ಒಂದು ಮುಖ್ಯ ಕೆಲಸವಾಗುತ್ತದೆ. ಡೈರಿಯ ಪುಟವು ಅವನ ಜೀವನದ ಆ ಕ್ಷಣಗಳಲ್ಲಿ ಅದ್ಭುತ ಪವಾಡಗಳನ್ನು ಸೃಷ್ಟಿಸುತ್ತದೆ, ಅವನು ಆ ಚಮತ್ಕಾರವನ್ನು ಅನುಭವಿಸುತ್ತಾನೆ ಮತ್ತು ಬರೆಯುತ್ತಾ ಪುಳಕಿತನಾಗುತ್ತಾನೆ. ಹಾಗೆಯೇ ಬರೆಯಲು ಸಂತೋಷಪಡುತ್ತಾನೆ.

ನಾವು ಡಾಕ್ಟರ್ ಆಗಿರಬಹುದು, ಇಂಜಿನಿಯರ್, ವ್ಯಾಪಾರಿ, ನಾಯಕ, ಕಾರ್ಯಕರ್ತ, ಅಧಿಕಾರಿ, ಯಾವುದೇ ಕ್ಷೇತ್ರದ ಅಧಿಕಾರ ದಲ್ಲಿರಬಹುದು ನಾವು ದಿನಚರಿ ಬರೆದರೆ ನಮಗೆ ತುಂಬಾ ಸಂತೋಷವಾಗುತ್ತದೆ. ವಿದ್ಯಾರ್ಥಿ ಜೀವನದಿಂದಲೇ ನಾವು ದಿನಚರಿ

ಬರೆಯುವುದರ ಲಾಭವನ್ನು ಅರಿತುಕೊಂಡರೆ ಹಾಗೆಯೇ ಅಭ್ಯಾಸಮಾಡಿದರೆ ನಮ್ಮ ವ್ಯಕ್ತಿತ್ವ ಹೇಗೆ ರೂಪುಗೊಳ್ಳುತ್ತದೆ ಎಂಬುದನ್ನು ಕಾಣಬಹುದು. ನಮ್ಮ ಜ್ಞಾನ ವಿಕಾಸಕ್ಕೆ ಮತ್ತು ವ್ಯಕ್ತಿತ್ವ ನಿರ್ಮಾಣಕ್ಕೆ ದಿನಚರಿ ಒಂದು ಉತ್ತಮ ಮಾಧ್ಯಮವಾಗಿದೆ. ನಾವು ವಿದ್ಯಾಲಯದಲ್ಲಿ ಪಠ್ಯಕ್ರಮ ಮತ್ತು ಪಠ್ಯೇತರ ಪ್ರವೃತ್ತಿಯಲ್ಲಿ ಇದಕ್ಕೆ ಸ್ಥಾನ ನೀಡುವುದು ಅನಿವಾರ್ಯವಾಗಿದೆ. ದಿನಚರಿ ಬರೆಯುವುದು ಒಂದು ತರ ಪತ್ರ ಬರೆದಂತೆ. ಈ ಪತ್ರ ನಮಗೆ ನಾವೇ ಬರೆಯುವಂಥದ್ದು. ಯಾರಿಗಾದರೂ ನಾವು ಯಾವಾಗ ಪತ್ರ ಬರೆಯುತ್ತೇವೆ? ಏನಾದರೂ ಹೇಳಲು ಇದ್ದಾಗ ತಾನೇ? ಇದಕ್ಕೆ ವಿರುದ್ಧವಾಗಿ ಹೇಳುವುದಾದರೆ ಪತ್ರ ಬರೆಯಲು ಶುರುಮಾಡಿದಾಗ ನಾವು ಏನು ಬರೆಯುವುದು ಎಂದು ಸಹ ಯೋಚಿಸುವುದಿದೆ. ಈ ರೀತಿ ಯೋಚಿಸುವುದು ಸಹ ಒಂದು ದೊಡ್ಡ ಕೆಲಸವಾಗಿದೆ. ಯೋಚಿಸಿ ಬರೆಯುವುದಕ್ಕೂ ಸಹ ಕೆಲವು ಪ್ರಸಂಗಗಳನ್ನು ಹುಡುಕಬೇಕಾಗಬಹುದು. ಇದೊಂದು ಮಹತ್ವಪೂರ್ಣವಾದ ಸೃಜನಾತ್ಮಕ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆ ನಮ್ಮ ವ್ಯಕ್ತಿತ್ವ ರೂಪಿಸುವಲ್ಲಿ ನಮಗೆ ಸಹಾಯ ಮಾಡುತ್ತದೆ.

ಇದೇ ಪರಿಸ್ಥಿತಿ ದಿನಚರಿ ಬರೆಯುವುದರಲ್ಲಿಯೂ ಇದೆ. ಹೇಗೆ ಒಂದು ಪತ್ರ ಬರೆಯುವಾಗ ಯಾವ ವಿಷಯ ಅಥವಾ ಸಮಸ್ಯೆಯ ಬಗ್ಗೆ ಹುಡುಕುವೆವೋ ಅಲ್ಲಿಯೇ ಒಂದು ಸೃಜನಾತ್ಮಕ ಪ್ರಕ್ರಿಯೆ ನಡೆಯುತ್ತದೆ. ಯಾವುದೇ ವಿಷಯವಿಲ್ಲದೆ ಏನು ಬರೆಯುವುದು? ವಿಷಯದ ಬಗ್ಗೆ ಯೋಚಿಸಬೇಕು ಮತ್ತು ಬರೆಯಬೇಕು. ನಾನು ಬರೆಯಲೇ ಬೇಕೆಂದು ಮೊದಲು ನಿರ್ಧರಿಸಿರಬೇಕು. ನಾವು ಬರೆಯಲು ನಿರ್ಧರಿಸಿದ್ದರೆ ತಾನೇ ನಮಗೆ ವಿಷಯ ಸಿಗುವುದು.

ಒಂದು ಸಂಸ್ಥೆಯು ದಿನಚರಿ ಬರೆಯಲು ಅಭ್ಯಾಸ ಮಾಡಿಸಲು 24 ಪುಟಗಳ ಒಂದು ಪುಸ್ತವನ್ನು ನೀಡಿ, ಅದರ ಮೊದಲ ಪುಟದಲ್ಲಿ "ನನ್ನ ಪುಸ್ತಕ" ಎಂಬ ಶೀರ್ಷಿಕೆ ನೀಡಿ ಮಕ್ಕಳ ಹೆಸರು, ತರಗತಿ, ವಯಸ್ಸು ಇತ್ಯಾದಿ ವಿವರಗಳನ್ನು ಬರೆಯಲು ಹೇಳಿ ಈ ಕೆಳಕಂಡಂತೆ ವಿವರಿಸಿದರು.

"ಇದು ನಿಮ್ಮ ಪುಸ್ತಕ. ನೀವು ಇದರ ಲೇಖಕ. ನೀವು ಈ ಪುಸ್ತಕದಲ್ಲಿ ಏನು ಬೇಕಾದರು ಸಹ ಬರೆಯಬಹುದು. ಯಾವಾಗ ಬೇಕಾದರೂ ಬರೆಯಬಹುದು.ಅಲ್ಲಿ– ಇಲ್ಲಿಯ ಮಾತು, ಅವರ– ಇವರ ಮಾತು, ಹಳ್ಳಿಯ ಮಾತು, ನಗರದ ವಿಷಯ, ಗಲ್ಲಿ ಬೀದಿಯ ವಿಚಾರ, ನಿನ್ನೆ – ಇವತ್ತು ಕೇಳಿದಂತ ಮಾತು ಇತ್ಯಾದಿ. ಅಂಗಡಿ ಮಾರುಕಟ್ಟೆಗಳಲ್ಲಿ ಕೇಳಿದ್ದ / ನೋಡಿದ್ದ ವಿಷಯಗಳು, ಮಂದಿರ–ಮಸೀದಿಗಳಲ್ಲಿ ನೋಡಿದ್ದು ಕೇಳಿದ್ದು, ಈ ವರ್ಗ ಹಬ್ಬ ಆಚರಿಸಿದ ಬಗೆ, ಯಾವುದಾದರು ಪುಸ್ತಕ ಓದಿದ್ದರೆ ಅದರ ಬಗ್ಗೆ ಸ್ವಲ್ಪ ಬರೆಯುವುದು– ಯಾವ ಪುಸ್ತಕ ಓದಿದ್ದು, ಅದರಲ್ಲಿ ಏನು ಇಷ್ಟ ಆಯ್ತು ಅದರ ಬಗ್ಗೆ ಸ್ವಲ್ಪ ಬರೆಯುವುದು. ಅಜ್ಜಿ– ತಾತ ಹೇಳಿದ ಕಥೆಯ ಬಗ್ಗೆ, ಹಳ್ಳಿಯಲ್ಲಿ ಅಥವ ಹಬ್ಬಗಳಲ್ಲಿ ಕೇಳಿದ ಹಾಡಿನ ಬಗ್ಗೆ– ಅರ್ಧಂಬರ್ಧ ಎಷ್ಟೇ ಇರಲಿ ಅದರ ಬಗ್ಗೆ ಬರೆಯುವುದು. ಆಟಗಳ ಬಗ್ಗೆ– ಕುಸ್ತಿ, ಕಬ್ಬಡ್ಡಿ, ಗಿಲ್ಲಿ–ದಾಂಡು, ಮರಕೋತಿ, ಫುಟ್ ಬಾಲ್ ಇತ್ಯಾದಿ. ಗದ್ದೆ/ ತೋಟದ ಬಗ್ಗೆ– ಅಲ್ಲಿ ಏನು ಮಾಡುತ್ತಾರೆ?, ಮರಗಳ ಬಗ್ಗೆ– ಯಾವ ಯಾವ ಮರಗಳಿವೆ?, ಹುಲ್ಲು– ಹುಲ್ಲು ಮೆದೆ ಬಗ್ಗೆ, ಹಾಲು–ಮೊಸರು–ಮಜ್ಜಿಗೆ ಬಗ್ಗೆ, ಢೋಲು– ಡಂಗೂರದ ಬಗ್ಗೆ, ಆಡು– ಕುರಿ, ಹಸು– ಎತ್ತು–ಕೋಣ, ಕವಿತೆಗಳು, ಚಲನಚಿತ್ರಗಳು,ಹಳ್ಳಿ– ನಗರಗಳಲ್ಲಿನ ವಯಸ್ಸಾದ ಜನರ ಬಗ್ಗೆ– ಅವರೇನು ಮಾಡುತ್ತಾರೆ ಎನ್ನುವುದರ ಬಗ್ಗೆ, ನೀವು ಅವರಿಗೇನು ಸಹಾಯ ಮಾಡಬಹುದು ಎಂದು, ಪಕ್ಷಿಗಳ ಬಗ್ಗೆ– ಅದರ ರೂಪ, ಬಣ್ಣ, ಧ್ವನಿ, ಅದರ ಗೂಡಿನ ವರ್ಣನೆ, ವಸ್ತುಸಂಗ್ರಹಾಲಯದ ಬಗ್ಗೆ, ನಿಮ್ಮ ಸ್ನೇಹಿತ, ಶಿಕ್ಷಕರು, ನೆರೆಹೊರೆಯವರು, ವ್ಯಾಪಾರಿ, ಕ್ರೀಡಾಪಟು, ಏನಾದರು, ಯಾರಬಗ್ಗೆಯಾದರು ಬರೆಯಿರಿ."

"ಯಾವಾಗಲಾದರೂ ಬರೆಯಿರಿ, ಏನಾದರೂ ಬರೆಯಿರಿ, ಆ ದಿನದ ತಾರೀಖನ್ನು ಬರೆಯಲು ಮರೆಯದಿರಿ".

ಇದೇ ರೀತಿ ನೀವು ಸಹ ಹೊಸ ವಿಷಯಗಳ ಬಗ್ಗೆ ಮಕ್ಕಳಿಗೆ ಸಲಹೆ ನೀಡಬಹುದು. ಯಾರು ಸ್ವ ಇಚ್ಛೆಯಿಂದ ತಮ್ಮ ದಿನಚರಿಯಲ್ಲಿ ಏನನ್ನಾದರೂ ಬರೆಯಲು ಶುರು ಮಾಡಿದರೆ ಅವರ ಭಾಷಾ ಜ್ಞಾನ ಹೆಚ್ಚುತ್ತದೆ, ಅಭಿವ್ಯಕ್ತಿಸುವ ಸಾಮರ್ಥ್ಯ ಹೆಚ್ಚುತ್ತದೆ ಮತ್ತು ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ದುಃಖಭರಿತ ಮತ್ತು ಸುಖಭರಿತ ದಿನಗಳ ವರ್ಣನೆ ಮಾಡುವುದು ಸಹ ತಿಳಿಯುತ್ತದೆ.

ಎರಿಕ್ ಗ್ರವೆಲ್ ಎಂಬ ಅಮೇರಿಕಾದ ಶಿಕ್ಷಕ– ಅಲ್ಲಿನ ನಗರಗಳಲ್ಲಿನ ಕೊಳಗೇರೀ ಪ್ರದೇಶದಲ್ಲಿನ ಹಿಂಸೆಯ ಬಗ್ಗೆ ಬಡತನ ಪ್ರದೇಶಗಳ ಶಾಲೆಗಳಲ್ಲಿನ ಮಕ್ಕಳಿಗೆ ದಿನಚರಿ ಬರೆಸಲು ಪ್ರಾರಂಭಿಸಿದರು. ಅದರ ಬಗ್ಗೆ ಚರ್ಚಿಸಿದರು. ದಿನಚರಿ ಬರೆಯುತ್ತಾ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಾಯಿತು, ಅವರು ಹಿಂಸಾತ್ಮಕ ಪ್ರವೃತ್ತಿಯನ್ನು ಬಿಟ್ಟು ಸುಸಂಸ್ಕೃತ ನಾಗರೀಕರಾದರು ಹಾಗೆಯೇ ಉನ್ನತ ಹುದ್ದೆಗಳನ್ನು ಅಲಂಕರಿಸಿದರು. ಡಾಕ್ಟರ್, ಇಂಜಿನಿಯರ್,ಪೈಲೆಟ್, ಕಲಾವಿದ/ಸಾಹಿತಿ ಇತ್ಯಾದಿ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಎರಿಕ್ ಗ್ರವೆಲ್ ರವರ ಈ ಪ್ರಯೋಗವನ್ನು ನಾವು ಅವರ ಪುಸ್ತಕ" ಫ್ರೀಡಂ ರೈಟರ್ಸ್ ಡೈರಿ"ಯಲ್ಲಿ ನೋಡಬಹುದು. ಇವರ ಈ ಕಾರ್ಯದ ಸಫಲತೆಯಿಂದ ಇವರಿಗೆ ತುಂಬಾ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಿಂದ ಆಹ್ವಾನ ಕೂಡ ಬಂದಿದೆ. ಹಾಗೆಯೇ ಈ ಚಮತ್ಕಾರದ ಕಾರ್ಯದ ಬಗ್ಗೆ ಒಂದು ಚಲನಚಿತ್ರವು ಸಹ ಮೂಡಿಬಂದಿದೆ.

ದಿನಚರಿ ಬರೆಯುವುದರ ಬಗ್ಗೆ ಯಾವ ಶಿಕ್ಷಕರು ತಮ್ಮ ತರಗತಿಯಲ್ಲಿ ಗಮನಹರಿಸುತ್ತಾರೋ ಅವರು ಖಂಡಿತವಾಗಿಯೂ ಇದರ ಲಾಭದಾಯಕ ಪ್ರಭಾವವನ್ನು ನೋಡುತ್ತಾರೆ.

ಕೊನೆಯಲ್ಲಿ ಎರಡು ವಿಷಯಗಳನ್ನು ಹೇಳಲು ಇಚ್ಚಿಸುತ್ತೇನೆ. ಶಿಕ್ಷಕರ ದಿನಚರಿ ಬರೆಯುವುದರ ಬಗ್ಗೆ. ವಿದ್ಯಾರ್ಥಿಗಳನ್ನು ಅಭಿವ್ಯಕ್ತಿಗೊಳಿಸಲು, ಅವರ ಸ್ವಭಾವವನ್ನು ಬದಲಾಯಿಸಲು ಅವರಿಗೆ ಹೊಸ ಸಂಸ್ಕಾರ ನೀಡಲು ಮತ್ತು ಅವರ ವ್ಯಕ್ತಿತ್ವ ನಿರ್ಮಾಣ ಮಾಡುವ ಉದ್ದೇಶದಿಂದ ನೀವು ಅವರಿಗೆ ದಿನಚರಿ ಬರೆಯಲು ಹೇಳುತ್ತೀರಿ. ಹಾಗಿದ್ದರೆ ನೀವು ಸಹ ದಿನಚರಿ ಬರೆದರೆ ನಿಮಗೂ ತುಂಬಾ ಉಪಯೋಗವಾಗುತ್ತದೆ ಅಲ್ಲವೇ? ಅದರ ಲಾಭವನ್ನು ನೀವು ಪಡೆಯಬಹುದಲ್ಲವೇ? ಶಿಕ್ಷಕನ ಒಂದು ದಿನಚರಿ ಶಾಲೆಯ ಆಡಳಿತದ ಬಗ್ಗೆಯಾಗಿರುತ್ತದೆ ಮತ್ತೊಂದು ವಿದ್ಯಾರ್ಥಿಗಳು ಹಾಗೂ ಶಾಲಾ ಸಿಬ್ಬಂಧಿಗಳೊಂದಿಗಿನ ಅವರ ಅನುಭವದ್ದಾಗಿರುತ್ತದೆ. ಇದು ಅವರಿಗೆ ತುಂಬಾ ಉಪಯೋಗವಾಗುವಂತದ್ದು.ಇದು ಒಂದು ಅಧ್ಯಯನದ ರೀತಿಯೇ ಆಗುತ್ತದೆ. ದಿನಚರಿ ಬರೆಯಲು ಪ್ರಾರಂಭಿಸಿದಾಗ ಹೇಗೆ ಬರೆಯುವುದು ಎಂದು ಯೋಚಿಸುವಾಗಲೇ ಆತ ಚಿಂತನಾಶೀಲನಾಗುತ್ತಾನೆ ಹಾಗೆಯೇ ಭಾಷೆಯಲ್ಲಿ ಆತನ ಬರವಣಿಗೆಯ ಶೈಲಿಯಲ್ಲಿ ಆತ ಪ್ರವೀಣನಾಗುತ್ತಾನೆ. ಬರೆಯುವುದು ಅಷ್ಟು ಸುಲಭವಲ್ಲ. ಬರೆದರೆ ನಮಗೆ ಅರಿವಾಗುವುದು ಬರೆಯುವುದು ಎಷ್ಟು ಕಠಿಣ, ಅಥವ ಸರಳ ಮತ್ತು ದಿನಚರಿ ಬರೆಯುವುದು ಲಾಭದಾಯಕವಾಗುವುದರ ಜೊತೆಗೆ ಎಷ್ಟು ಆನಂದಕರ ಎಂದು. ಆಗ ಶಿಕ್ಷಕ ಸ್ವತಃ ಅವನೇ ತನ್ನ ವಿದ್ಯಾರ್ಥಿಗಳ ಜಾಗದಲ್ಲಿ ನಿಂತು ಯೋಚಿಸುತ್ತಾನೆ. ಈ ಪ್ರಕ್ರಿಯೆಯಿಂದ ಅವರು ಯೋಚಿಸಲು ಆರಂಭಿಸುತ್ತಾರೆ ಅದರಿಂದ ಅವರ ಸೃಜನಾತ್ಮಕ ಶಕ್ತಿಯು ಸಹ ಹೆಚ್ಚುತ್ತದೆ. ಆಗ ಅವರು ವಿದ್ಯಾರ್ಥಿಗಳ ಸೃಜನಾತ್ಮಕ ವಿಕಾಸದ ಬಗೆಗೂ ತಿಳಿಯಬಲ್ಲರು. ಭವಿಷ್ಯದಲ್ಲಿ ಅವರ ಈ ದಿನಚರಿ ಅವರ ಶೈಕ್ಷಿಕ ಚಿಂತನೆಯ ಪ್ರತಿರೂಪವಾಗಿ ಪುಸ್ತಕವಾಗಿ ಮುದ್ರಿತವಾಗಿ ಎಲ್ಲರಿಗೂ ಉಪಯೋಗವಾದರೆ ಏನೂ ಆಶ್ಚರ್ಯವಿಲ್ಲ.

ನನ್ನ ನುಡಿ: ಮೇಲಿನ ಲೇಖನವನ್ನು ನೋಡಿದರೆ ಇದೊಂದು ಐಡಿಯಲ್ ಸಿಚುಯೇಶನ್ ಎನಿಬಹುದು, ಇದು ಸಾಧ್ಯವೇ ಎನಿಸಬಹುದು. ಶಿಕ್ಷಕರೂ ಸಹ ಇದರ ಬಗ್ಗೆ ಅಧ್ಯಯನ ಮಾಡಿರಬಹುದು. ದಿನಚರಿ ಬರೆಯುವ ಮೂಲಕ ನಾವು ಮಕ್ಕಳ ಬರೆವಣಿಗೆಯಲ್ಲಿ ಸುಧಾರಣೆಯನ್ನು ಕಾಣಬಹುದು. ದಿನಚರಿ ಬರೆವಣಿಗೆಯಲ್ಲಿ ಮಕ್ಕಳ ಆಲೋಚನೆ, ಭಾವನೆ, ವಾಕ್ಯ ಸಂಯೋಜನೆ, ಪದ ಬಳಕೆ, ವಾಕ್ಯಗಳ ನಿರರ್ಗಳತೆ ಹಾಗೂ ವ್ಯಾಕರಣಬದ್ಧ ಬರೆವಣಿಗೆಯನ್ನು ನಾವು ಕಾಣಬಹುದು. ಮಕ್ಕಳಿಗಷ್ಟೇ ಅಲ್ಲದೇ ಶಿಕ್ಷಕರಿಗೂ ಸಹ ದಿನಚರಿ ಬರೆಯುವುದು ತುಂಬಾ ಉಪಯುಕ್ತವಾದುದು.

ದಿನಚರಿ ಬರೆಸುವ ಮೊದಲು ಪೂರ್ವಭಾವಿ ಚಟುವಟಿಕೆಗಳನ್ನೂ ಮಾಡಿಸುವುದು ಬಹುಮುಖ್ಯ ಎನ್ನುವುದನ್ನು ನಾವು ನೆನಪಿನಲ್ಲಿಡಬೇಕು.

ಉಲ್ಲೇಖ:


1. "ಡೈರಿ ಲೇಖನ್ ಸೆ ಶಿಕ್ಷಾ" – ಶಿವರತನ್ ಥಾನ್ವಿ

2. CARE–ಲೇಖನ– ಮುಖೇಶ್ ಚೌರಸಿಯಾ


**(ಶಿವರತನ್ ಥಾನ್ವಿಯವರ ಮೂಲಲೇಖನ: "ಡೈರಿ ಲೇಖನ್ ಸೆ ಶಿಕ್ಷಾ"ದ ಕನ್ನಡ ಅನುವಾದ)**

**ಅನುವಾದ: ಹರಿಪ್ರಿಯ ಜೆ, ಜಿಲ್ಲಾ ಸಂಸ್ಥೆ ಮಂಡ್ಯ ಮತ್ತು ಮುಖೇಶ್ ಚೌರಸಿಯಾ**

**ಸಂಚಿಕೆ 93, ಮೇ 2020**

# ಸೃಜನಾತ್ಮಕತೆಯನ್ನು ಹೊರಗೆಡುಹುವ ವೇದಿಕೆ ಬಯಲು: ಪೆರಿಯೋಡಿ

('ಬಯಲು' – ಐವತ್ತನೇ ವಿಶೇಷ ಸಂಚಿಕೆಯ ಹಿನ್ನೆಲೆಯಲ್ಲಿ ಮಾರ್ಗದರ್ಶಕರಾದ ಉಮಾಶಂಕರ ಪೆರಿಯೋಡಿ ಅವರೊಂದಿಗೆ ಸಂದರ್ಶನ. ಸಂದರ್ಶಕರು : ರಾಘವೇಂದ್ರ ಹೇರ್ಳೆ, ಗುಂಡಪ್ಪ ಕಾಟೇಕರ್, ರಾಜಶ್ರೀ ನಾಯಕ್, ಗುರು ಮೋಗೇರ್, ರವಿ ಬಿ.ಟಿ., ಸ್ವಾತಿ)

**– ನಿರೂಪಣೆ ಮತ್ತು ನಿರ್ವಹಣೆ: ರಾಘವೇಂದ್ರ ಹೇರ್ಳೆ**

- **ಸರ್, ತಮ್ಮ ಮಾರ್ಗದರ್ಶನದಲ್ಲಿ ರೂಪುಗೊಳ್ಳುತ್ತಾ ಬಂದಿರುವ 'ಬಯಲು' ಪತ್ರಿಕೆ ಇದೀಗ 50ನೇ ಸಂಚಿಕೆಯ ಪ್ರಕಟನೆಯ ಹಂತದಲ್ಲಿದೆ. ಇದರ ಹಿನ್ನೆಲೆ ಏನು? ಈ ಬಗ್ಗೆ ಸ್ವಲ್ಪ ತಿಳಿಸುತ್ತೀರಾ?**

ನಾನು ತುಂಬಾ ರಿಮೋಟ್ ಏರಿಯಾಗಳಲ್ಲಿ ಕೆಲಸ ಮಾಡಿದವನು. ('ಕಲಿಕಾ ಖಾತ್ರಿ ಕಾರ್ಯಕ್ರಮ'ದ ಸಂದರ್ಭದಲ್ಲಿ). 'ಬಾಲಸ್ನೇಹಿ' ಕಾರ್ಯಕ್ರಮಕ್ಕಾಗಿ 2007 ರಲ್ಲಿ ನಾನು ಸುರಪುರಕ್ಕೆ ಬಂದೆ. ಅಲ್ಲಿ 6–7 ವರ್ಷ ಇದ್ದೆ. 2011ರಲ್ಲಿ ಯಾದಗಿರಿಗೆ ಬಂದೆ. ಅದು ಬೆಂಗಳೂರಿನಂತಹ ಪಟ್ಟಣದಿಂದ ಸಾಕಷ್ಟು ದೂರದಲ್ಲಿರುವ ರಿಮೋಟ್ ಏರಿಯಾ. ಅಲ್ಲಿದ್ದ ಚಿಕ್ಕ ತಂಡವನ್ನು ಮೋಟಿವೇಟ್ ಮಾಡಲು ಕ್ರಿಯೇಟಿವ್ ಪ್ರಕ್ರಿಯೆ ಬೇಕು ಎಂದು ನನ್ನ ಭಾವನೆ. ಬಹುಶಃ ಈ ಹಿನ್ನೆಲೆಯಲ್ಲಿಯೇ ಪತ್ರಿಕೆ ಉಗಮವಾಯಿತು. ಪತ್ರಿಕೆಯನ್ನು ಹುಟ್ಟು ಹಾಕುವ ಕಲ್ಪನೆ ನನ್ನದಲ್ಲ. ಸೌಧಾಮಿನಿ, ಪವನ್, ಆರಿಫ್, ರಾಜಶ್ರೀ ಎಂಬ ಈ ನಾಲ್ಕು ಮಂದಿ ಆಗ ಕ್ಯಾಂಪಸ್ ಅಸೋಸಿಯೇಟ್ಸ್ ಆಗಿ ಬಂದಿದ್ರು. ಅವರಿಂದ ಈ ಪ್ರಸ್ತಾಪ ಬಂತು. ಸೌಧಾಮಿನಿ ಇ– ಮ್ಯಾಗಝಿನ್ ನ ಐಡಿಯಾ ಕೊಟ್ಟರು. ನಮ್ಮ ಒಳಗಿನ ಸಂವಹನಕ್ಕಾಗಿ, ನಮ್ಮೊಳಗಿನ ಕ್ರಿಯೇಟಿವಿಟಿ ಹೊರಗೆ ತರಲು, ನಮ್ಮೊಳಗನ್ನು ರಿಫ್ಲೆಕ್ಟ್ ಮಾಡಿಕೊಳ್ಳಲು ಇಂಥದೊಂದು ಮೀಡಿಯಾ ಬೇಕೆಂದು ನನಗೂ ಅನ್ನಿಸಿತು. ಬಹುಶಃ ಬಯಲು ಪತ್ರಿಕೆಯ ಮೊದಲ ಸಂಚಿಕೆಯ ಮುನ್ನುಡಿಯಲ್ಲಿ ಇದನ್ನು ಹೇಳಿದ ನೆನಪು. ಒಟ್ಟಾರೆ ಇದನ್ನು ಸ್ಟಾರ್ಟ ಮಾಡಿದ್ದು ಕ್ಯಾಂಪಸ್ ಅಸೋಸಿಯೇಟ್ಸ್.

- **50 ನೇ ಸಂಚಿಕೆಯ ಪ್ರಕಟನೆಯ ಈ ಸಂದರ್ಭದಲ್ಲಿ ಹಳೆಯ ಸಂಚಿಕೆಗಳೆಡೆಗೆ ಹೊರಳು ನೋಟ ಬೀರಿದಾಗ ನಿಮಗೆ ಏನು ಅನ್ನಿಸುತ್ತೆ ? (ಪ್ರಕಟಗೊಂಡ ಬರೆಹಗಳು, ಚಿತ್ರಗಳು, ಬರೆಹಗಾರರು, ಪತ್ರಿಕೆಯ ಒಟ್ಟು ವಿನ್ಯಾಸ ಇತ್ಯಾದಿ)**

ಈ ಪತ್ರಿಕೆ ಪ್ರತಿ ತಿಂಗಳು 15ನೇ ತಾರೀಕು ಹೊರಬರುತ್ತೆ. ನಿರಂತರತೆ ಮತ್ತು ಸರಿಯಾದ ಸಮಯದಲ್ಲಿ ಹೊರತರುವುದು ಪತ್ರಿಕಾ ಧರ್ಮದಲ್ಲಿ ಬಹು ಮುಖ್ಯ. ಹೀಗೆ ಇದು ಪ್ರತಿ ಸಾರಿಯೂ ಸಮಯಕ್ಕೆ ಸರಿಯಾಗಿ ಬರಬೇಕೆಂದ್ರೆ ಒಬ್ಬರಿಂದ ನಡೆಯುವ ಕೆಲಸವಲ್ಲ. ಗುರು ಮೊಗೇರ್, ರಾಜಶ್ರೀ ಅಂದಿನಿಂದ ನಮ್ಮೊಂದಿಗಿದ್ದಾರೆ. ಈಗ ಮಂಡ್ಯದಿಂದ ರವಿ ಇದ್ದಾರೆ. ಬೆಂಗಳೂರಿನಿಂದ ನೀವಿದ್ದೀರಿ. (ರಾಘವೇಂದ್ರ ಹೇರ್ಳೆ) ಗುಲ್ಬರ್ಗದಿಂದ ಗುಂಡಪ್ಪ ಇದ್ದಾರೆ. ಈ ಹಿಂದೆ ಬೇರೆಯವರಿದ್ರು. ಇವರೆಲ್ಲರೂ ಬೇರೆ ಬೇರೆ ಲೆವೆಲ್ ನಲ್ಲಿ ಅವರದೇ ಕೆಲಸ ಮಾಡಿಕೊಂಡು ಬಂದಿದ್ದಾರೆ. ವೈವಿಧ್ಯಮಯತೆ ಇದರ ಇನ್ನೊಂದು ಗುಣ. ಎಲ್ಲೆಲ್ಲೋ ಇರುವ ಬೇರೆ ಬೇರೆ ಮಂದಿ ಇದನ್ನು ಓದ್ತಾರೆ. ಒಂದಷ್ಟು ಜನ ಇಲ್ಲಿ ಡೆವಲಪ್ ಆಗಿದ್ದಿದೆ. ಚಿತ್ರ ಕಲಾವಿದರಿಲ್ಲದೇ ಇದ್ದಾಗ ನಾವೇ ಚಿತ್ರ ಮಾಡಿದ್ದಿದೆ. ಲೇಖನ, ಕವಿತೆ ಬರೆದವರೇ ಚಿತ್ರ ಬಿಡಿಸಿದ್ದೂ ಇದೆ. ಬಹು ಮಂದಿ ಬರೆದು ಬರೆದು ಪ್ರೌಢತೆ ಸಾಧಿಸಿದ್ದಿದೆ. (ಉದಾಹರಣೆಗೆ ವೈದ್ಯರಂಥವರು.) ಬೇರೆ ಬೇರೆ ಕೌಶಲವನ್ನು ಕಲಿಯಲು ಅವಕಾಶವಾದದ್ದಿದೆ. ಇದರ ಜೊತೆಗೆ 'ಬುತ್ತಿ' ಬೇರೆ ಇತ್ತು. ಈಗ ಸಬ್ಜೆಕ್ಟ್ ಬೇಸ್ಡ್ ಪುರವಣಿ ನೀಡಬೇಕು ಎಂಬ ಇರಾದೆ ಇದೆ. ಬಯಲಿನಿಂದ ನಮಗೆ ಒತ್ತಡ ಇಲ್ಲ. ಒಳಗಿನಿಂದ ಬರೆಯುವ ಒತ್ತಡ ಇದ್ದಾಗ ಭಾವನೆಗಳಿಗೆ ಅಭಿವ್ಯಕ್ತಿಯ ಅವಕಾಶ ಇದೆ. ಯಾರು ಓದ್ತಾರೆ ಎಂಬುದು ಮುಖ್ಯವಲ್ಲ. ಭಾವನೆಗಳ ಹಂಚಿಕೆ ಮುಖ್ಯ. ನಾವು ಮಾಡುತ್ತಿರುವ ಕೆಲಸದ ರಿಪೋರ್ಟ ಇಲ್ಲಿ ತರಬಾರದು. ಇಲ್ಲಿ ಎಡಿಟರ್ ಇಲ್ಲ. ಕೋ–ಆರ್ಡಿನೇಟರ್ ಇರೋದು. ಇಲ್ಲಿ ಪರಸ್ಪರ ಸಹಕಾರ ಇದೆ. ತುಂಬಾ ಖುಷಿಯಲ್ಲಿ ಕೆಲಸ ಮಾಡಿದೋರೂ ಇದ್ದಾರೆ. ತುಂಬಾ ಬೇಸರದಲ್ಲಿ ಕೆಲಸ ಮಾಡಿದೋರೂ ಇದ್ದಾರೆ. ಕಂಪ್ಯೂಟರ್ ವರ್ಕ ಗೊತ್ತಿಲದೇ ಇರೋರೂ ಇದ್ದಾರೆ. ಇಲ್ಲಿ ಜನಪದ ಕಲಿಕೆಯ ಪ್ರಕ್ರಿಯೆ ಇದೆ. ವಿಶೇಷ ಕಲಿಕೆಯ ಸಂಗತಿ ಇರೋದಿಲ್ಲ. ಒಬ್ಬರನ್ನು ನೋಡಿ ಇನ್ನೊಬ್ಬರು ಮುಂದುವರಿಸಿಕೊಂಡು ಹೋಗ್ತಾರೆ. ಕ್ಲಾಸ್ ಮೂಲಕ ಇಲ್ಲಿ ಯಾರೂ ಏನೂ ಕಲಿತಿದ್ದಲ್ಲ.

- **ಕಳೆದ ನಾಲ್ಕು ವರ್ಷಗಳಿಂದ ಹೊರ ಬರುತ್ತಿರುವ ಬಯಲು ಪತ್ರಿಕೆ ಗಮನಿಸಿದರೆ ಥಟ್ಟನೆ ಕಾಣಿಸುವುದು ವಿಷಯ ವೈವಿಧ್ಯ. ಒಂದಕ್ಕಿಂತ ಭಿನ್ನವಾದ ವಿಷಯವಸ್ತುಗಳು. ಹೀಗೆ ಬೇರೆ ಬೇರೆ ವಿಷಯಗಳ ಆಯ್ಕೆಗೆ ನಿರ್ದಿಷ್ಟವಾದ ಕಾರಣಗಳಿವೆಯೇ?**

ವಿಷಯ ವೈವಿಧ್ಯಕ್ಕೆ ಒಂದು ನಿರ್ದಿಷ್ಟ ಕಾರಣವಿದೆ. ಸಂಚಿಕೆ ಪ್ರಕಟನೆಗೆ ಮೊದಲು ಆ ತಿಂಗಳ ವೈಶಿಷ್ಟ್ಯ ಏನು ಎಂದು ನೋಡುತ್ತೇವೆ.. ಹಿಂದಿನ ಪತ್ರಿಕೆ ನೋಡ್ತೇವೆ. ಆ ತಿಂಗಳಿಗಾಗಿ ಹೊಂದಬಹುದಾದ ಥೀಮ್ ತಗೊಂಡು ಮಾಡ್ತೇವೆ. ಓಪನ್ ಥೀಮ್ ತೆಗೆದುಕೊಂಡದ್ದೂ ಇದೆ. ಏಕೆಂದ್ರೆ ಕೆಲವ್ರಿಗೆ ಥೀಮ್ ಇದ್ರೆ ಕಟ್ಟಿ ಬೇಲಿ ಹಾಕಿದಂತಾಗ್ತದೆ. ಸೋ ಬೇರೆ ಬೇರೆ ಜನರೊಂದಿಗೆ ಥೀಮ್ ಡಿಸ್ಕಷನ್ ಆಗಿ ಥೀಮ್ ಡಿಸೈಡ್ ಆಗ್ತದೆ. ಇದೊಂದು ಡೆಮೋಕ್ರೆಟಿಕ್ ಇವೆಂಟ್. ಇಲ್ಲಿರೋದು ಓಪನ್ ಮ್ಯಾನೇಜ್ ಮೆಂಟ್.

- **ಈ ಹಿಂದೆ ತಮ್ಮದೇ ಮಾರ್ಗದರ್ಶನದಲ್ಲಿ 'ಬುತ್ತಿ' ಎಂಬ ಪತ್ರಿಕೆಯೂ ಬಯಲಿನ ಜೊತೆಜೊತೆಗೆ ಪ್ರಕಟಗೊಳ್ಳುತ್ತಿತ್ತು. ಅದು ಕೂಡ ವಿಷಯವೈವಿಧ್ಯದೊಂದಿಗೆ ಸಾಕಷ್ಟು ಓದುಗರ ಮೆಚ್ಚುಗೆ ಗಳಿಸಿದ ಪತ್ರಿಕೆಯಾಗಿತ್ತು. 'ಬುತ್ತಿ' ಮತ್ತು 'ಬಯಲು' ಎರಡೂ ಪತ್ರಿಕೆಗಳನ್ನು ತುಲನಾತ್ಮಕವಾಗಿ ನೋಡಿದಾಗ ನಿಮಗೆ ಏನು ಸಾಮ್ಯ–ವೈಷಮ್ಯ ಕಾಣಿಸುತ್ತೆ?**

ನೋಡಿ ಹೇರ್ಳೆಯವರೇ, ಬಯಲು ಬಯಲೇ. ಓಪನ್ ನೆಸ್ ಅಲ್ಲಿದೆ. ಫ್ರೆಷ್ ಏರ್ ಅಲ್ಲಿದೆ. ಬುತ್ತಿ ಎನ್ನುವುದು ಕ್ಲೋಸ್ಡ್. ಅದರೊಳಗೆ ರುಚಿಕರವಾದ ತಿಂಡಿ ಇದೆ. ಅದು ಎಲ್ಲರಿಗೂ ಅಲ್ಲ. ಅದು ಇನ್ನೂ ಟೈಟ್. 60–70 ಜನರಷ್ಟೇ ಅಲ್ಲಿ ಬರೆಯುವುದು. ಅಲ್ಲಿ ಬರೆಸುವ, ಫಾಲೋ ಅಪ್ ಮಾಡುವ ಮಾನಿಟರಿಂಗ್ ಪ್ರೋಸೆಸ್ ಇದೆ. ಅದೊಂದು ರಿಫ್ಲೆಕ್ಟಿವ್ ಪ್ರ್ಯಾಕ್ಟಿಷನರ್ ನ ಅವಧಿಯಲ್ಲಿ ಬಂದಂಥ ತುಂಬಾ ಸ್ಟ್ರಕ್ಚರ್ಡ್ ಆದ ಲೀಡರ ಷಿಪ್ ಪ್ರಕ್ರಿಯೆಯ ಬೈ ಪ್ರಾಡಕ್ಟ್ ಎನ್ನಬಹುದು. ಬುತ್ತಿ ಇರೋದು ಕನ್ನಡದಲ್ಲಿ ಮಾತ್ರ. ಬಯಲು ಬೇರೆ ಬೇರೆ ಭಾಷೆಗಳಲ್ಲಿ ಬರೆಯುವವರಿಗೂ ಅವಕಾಶ ಮಾಡಿಕೊಡ್ತದೆ.

- **ನಾವೆಲ್ಲರೂ ಭಿನ್ನ ಭಿನ್ನ ಮನಸ್ಥಿತಿಯ, ಭಿನ್ನ ಭಿನ್ನ ವೃತ್ತಿ ಪ್ರವೃತ್ತಿಗಳ ಹಿನ್ನೆಲೆಯಿಂದ ಬಂದವರು. ಹೀಗೆ ಬೇರೆ ಬೇರೆ ದೃಷ್ಟಿಕೋನಗಳುಳ್ಳ ಮನಸ್ಸುಗಳ ನಡುವೆ ಒಂದು ಪತ್ರಿಕೆಯನ್ನು ಕಟ್ಟಿ ಬೆಳೆಸುವುದು ಸುಲಭ ಸಾಧ್ಯವಲ್ಲ. ಇಂತಹ ಸನ್ನಿವೇಶವನ್ನು ನೀವು ಹೇಗೆ ನಿಭಾಯಿಸಿದಿರಿ? ಈ ದಿಸೆಯಲ್ಲಿ ನೀವು ಎದುರಿಸಿದ ಸವಾಲುಗಳೇನು?**

ಈ ಪತ್ರಿಕೆಯನ್ನು ಕಟ್ಟಿ ಬೆಳೆಸಿದ ಭಾವನೆ ನನಗಿಲ್ಲ. ಹಳ್ಳಿ ಮನೆಗಳಲ್ಲಿ ವಯಸ್ಸಾದ ಮುದುಕರ ಬಳಿ ಮಗುವಿಗೆ ಹುಷಾರಿಲ್ಲದವರು ಮದ್ದು ಕೇಳುವಂತೆ ನನ್ನ ರೋಲ್. ಇದನ್ನು ಯಂಗ್ ಬ್ಲಡ್ ನವರು ನಡೆಸ್ತಾರೆ. ನನ್ನದು ಹಿನ್ನೆಲೆ ಸಹಕಾರ ಅಷ್ಟೆ. ಇದನ್ನು ಭಾರಿ ಹೆವ್ವಿಯಾಗಿ ನಾನು ತೆಗೆದುಕೊಳ್ಳುವುದಿಲ್ಲ. ಲೈಟ್ ಆಗಿಯೇ ತೆಗೆದುಕೊಳ್ತೇನೆ. ಇದು ನನಗೆ ಪ್ರೆಷರ್ ಅನ್ನಿಸುವುದಿಲ್ಲ. ಅದನ್ನು ನಾನು ಇಡೀ ನನ್ನ ಬೆನ್ನ ಮೇಲೆ ಹಾಕಿಕೊಂಡಿಲ್ಲ. ಇದೊಂದು ರೀತಿಯಲ್ಲಿ ತೇರಿನ ಥರ. ತೇರು ಎಳಿತಾ ಇರ್‍ತಾರೆ. ನಾನು ಒಂದು ಕೈ ಹಾಕುವುದು ಅಷ್ಟೆ. ಪ್ರಕೃತಿಯಲ್ಲಿ ಅದ್ಭುತ ಶಕ್ತಿ ಅಂತ ಒಂದಿದೆ, ಅದು ನಿರ್ಣಯಿಸ್ತದೆ. ನನ್ನಿಂದ ಆಯ್ತು ಎಂದು ನಾನು ತೆಗೆದುಕೊಳ್ಳುವುದಿಲ್ಲ. ಆರ್ಟ ಬರೆದೇ ಇದ್ದಾಗ ನಾನೇ ಬರೆದುಕೊಟ್ಟದ್ದಿದೆ. ಅದು ಚೆಂದ ಕಾಣುವುದು ಎಲ್ಲರ ಪ್ರೀತಿಯ ಲೇಪನದಿಂದ. ಇದರಿಂದ ಅಡ್ವಾಂಟೇಜ್ ಇದೆ. ನಾನೊಬ್ಬ ವಯಸ್ಸಾದ ಮುದುಕನ ಹಾಗೆ. ನನಗೆ ಇಲ್ಲಿ ಇರುವವರ ಪೈಕಿ ತುಂಬಾ ಕ್ಲೋಸ್ ಆದ ಪರಿಚಯವಿದೆ. ಸಹಕಾರ ಇಲ್ಲದೆ ಪ್ರಪಂಚದಲ್ಲಿ ಯಾವ ಕೆಲಸಕ್ಕೂ ಬೇರೆ ದಾರಿ ಇಲ್ಲ. ಜೊತೆಯಾಗಿ ಕೆಲಸ ಮಾಡ್ಕೊಂಡು ಹೋಗೋದನ್ನು ನಾನು ತುಂಬಾ ಪ್ರ್ಯಾಕ್ಟಿಕಲ್ ಆಗಿ ತಗೊಳ್ತೇನೆ. ನನಗೆ ಹೊಸರಕ್ತದ ಹುಡುಗರಲ್ಲಿ ಭಾರೀ ಉತ್ಸಾಹ ಕಂಡು ಬರ್‍ತದೆ. ಅವರಿಂದಲೇ ನಾನು ಎನರ್ಜಿ ಕಂಡುಕೊಳ್ತೇನೆ. ಏಕೆಂದ್ರೆ ಅವರ ಎನರ್ಜಿಯಿಂದ ತುಂಬಾ ಕೆಲಸ ಆಗುತ್ತೆ.

- **ಬಯಲು ಪತ್ರಿಕೆ ಕುರಿತಂತೆ ಭವಿಷ್ಯದ ಯೋಜನೆಗಳೇನು? ಇದನ್ನು ಇನ್ನಷ್ಟು ಮೆರಗುಗೊಳಿಸುವ ಬಗೆ ಹೇಗೆ? ಈ ಬಗ್ಗೆ ಏನಾದರೂ ಯೋಚಿಸಿದ್ದೀರಾ?**

ಬೆಂಗಳೂರಿನಲ್ಲಿ ಮೊನ್ನೆ ಬಯಲು ತಂಡದ ವಿಶೇಷ ಕಥಾಗೋಷ್ಠಿ ಕಾರ್ಯಕ್ರಮ ನಡೆಯಿತು. ಅಂತಹ ಚಟುವಟಿಕೆಗಳು ಎಲ್ಲಾ ಕಡೆ ಇನ್ನಷ್ಟು ನಡೆಯಬೇಕು ಅನ್ನಿಸುತ್ತೆ. ಇದೊಂದು ವೇದಿಕೆ. ಮನಸ್ಸಿನ ಭಾವನೆಗಳನ್ನು ಫ್ರೀ ಆಗಿ ಎಕ್ಸ್ ಪ್ರೆಸ್ ಮಾಡಲು ಇಲ್ಲಿ ಅವಕಾಶ ಇದೆ. ಇದು ಉಳಿಯಬಹುದು. ಇನ್ನೂ ಚೆನ್ನಾಗಿ ನಡೆಯಬಹುದು. ಅದು ಹೇಗೆ ಹೋಗುತ್ತದೋ ಹಾಗೆ ತೆಗೆದುಕೊಂಡು ಹೋಗಬೇಕು ಅನ್ನೋನು ನಾನು. ಇದು ಸಡನ್ ಆಗಿ ನಿಂತ್ರೂ ಆಶ್ಚರ್ಯವಿಲ್ಲ. ಅನೇಕ ವಿಚಾರಗಳು ನಮ್ಮ ಕೈಲಿರುವುದಿಲ್ಲ. ಇದು ಚೆನ್ನಾಗಿ ಹೋದ್ರೂ ಹೋಗಬಹುದು. ಇದು ನಿಂತೂ ಹೋಗಬಹುದು. ಅದು ನ್ಯಾಚುರಲ್ ಪ್ರೋಸೆಸ್. ಅದಕ್ಕೆ ತಲೆ **ಬಾಗುವೆ.**

- **ಬಯಲಿಗೆ ಬರೆಯುವವರ ಸಂಖ್ಯೆ ನಿಮಗೆ ತೃಪ್ತಿ ತಂದಿದೆಯೇ ? ಹೆಚ್ಚು ಮಂದಿ ಬಯಲಿಗೆ ಬರೆಯಲು ಏನು ಮಾಡಬಹುದು? ಈ ಬಗ್ಗೆ ನಿಮ್ಮ ಆಲೋಚನೆಗಳೇನು ?**

ಬಯಲಿಗೆ ಹೆಚ್ಚು ಮಂದಿ ಬರೆಯಬೇಕು. ಈ ಬಗ್ಗೆ ತುಸು ಬೇಸರ ಇದೆ. ಅನೇಕರು ಇದನ್ನು ಯಾರು ಓದ್ತಾರೆ ಎಂಬ ಪ್ರಶ್ನೆ ಮುಂದಿಡ್ತಾರೆ. ನಾವು ನಮಗಾಗಿ ಕೆಲಸ ಮಾಡಬೇಕು. ಒಳಗಿದ್ದನ್ನು ಹೊರಹಾಕಬೇಕು. ಇದರಿಂದ ನಮ್ಮ ಮನಸ್ಸು ವಿಚಾರವನ್ನು ಕ್ಲೀನ್ ಮಾಡುತ್ತದೆ. ಬೇರೆ ಓದದೇ ಇರುವವರು ಇದನ್ನಾದರೂ ಓದಲಿ. ಬುತ್ತಿಯಲ್ಲಿ ಆದಂತೆ ಬಯಲಲ್ಲಿ ಬಂದ ಬರೆವಣಿಗೆಯ ಕುರಿತು ಚರ್ಚಿಸುವ ಕೆಲಸ ಆಗಬೇಕು. ಬಂದ ಫೀಡ್ ಬ್ಯಾಕ್ ಮೇಲೆ ಕೆಲಸ ಮಾಡಬೇಕು. ನಮ್ಮ ತಂಡದವರು ಎಲ್ಲರಿಂದಲೂ ಅಷ್ಟಿಷ್ಟು ಬರೆಸುವ ಕೆಲಸ ಮಾಡಬೇಕು. ಕವಿಗೋಷ್ಠಿ, ಕಥಾಗೋಷ್ಠಿ, ನಾಟಕ ಸಾಹಿತ್ಯ ಹೀಗೆ ಬೇರೆ ಬೇರೆ ಚಟುವಟಿಕೆಗಳು ನಡೆಯಬೇಕು. ಮುಖ್ಯವಾಗಿ ಬಯಲು ಬರೆವಣಿಗೆಯ ಕುರಿತು ಚರ್ಚಿಸುವ ವಾತಾವರಣ **ಬರಬೇಕು.**

- **ಬಯಲು ಪತ್ರಿಕೆ ಪ್ರತಿ ತಿಂಗಳೂ 15ನೇ ತಾರೀಕಿನಂದು ತಪ್ಪದೆ ಪ್ರಕಟಗೊಳ್ಳುತ್ತಿದೆ. ಈ ಸಮಯ ಪರಿಪಾಲನೆ ನಿಮಗೆ ಹೇಗೆ ಸಾಧ್ಯವಾಯಿತು ? ವೈಯಕ್ತಿಕವಾಗಿ ನೀವು ಸಮಯಕ್ಕೆ ಕೊಡುವ ಮಹತ್ವವು ಇಲ್ಲಿ ಕೆಲಸ ಮಾಡಿತೇ ?**

ಹೌದು. ನಾನು ಸಮಯಕ್ಕೆ ಮಹತ್ವ ಕೊಡುತ್ತೇನೆ. ಇದು ನನಗೆ ಸಿಕ್ಕಿದ ವ್ಯಕ್ತಿಗಳ ಸಂಸ್ಕಾರದಿಂದ ಬಂದದ್ದು. ನನ್ನ ಸಮಯ ಮಾತ್ರವಲ್ಲ, ಬೇರೆಯವರ ಸಮಯ ಕೂಡ ಮುಖ್ಯ ಎಂಬ ಭಾವ ಮೊಳೆಯಬೇಕು. ಅದು ಅವರ ಸಮಯ ಎಂಬ ಈ ಪ್ರಜ್ಞೆ ನಮಗಿರಬೇಕು. ಬಯಲಿನ ವಿಷಯದಲ್ಲೂ ಇದು ಕೆಲಸ ಮಾಡಿರಬಹುದು.

- **ಓರ್ವ ಬರೆಹಗಾರರಾಗಿ ಮತ್ತು ಓರ್ವ ಓದುಗರಾಗಿ ಬಯಲು ಪತ್ರಿಕೆಯ ಆರಂಭದಿಂದ ಇಲ್ಲಿಯವರೆಗೆ ಎಲ್ಲಾ ಸಂಚಿಕೆಗಳನ್ನು ಕಂಡವರು ನಾವು. ಈ ನೆಲೆಯಲ್ಲಿ ಬಯಲಿಗಾಗಿ ಬರೆಯುವ ಹೊಸಬರಿಗೆ, ವಾಚಕವೃಂದಕ್ಕೆ ನಿಮ್ಮ ಸಲಹೆಗಳೇನು ?**

ಬರೆಯುವುದು ಒಂದು ಸೃಜನಾತ್ಮಕ ದಾಖಲೆ. ಇದನ್ನು ಬರೆದ ತಕ್ಷಣ ವ್ಯಾಲ್ಯೂ ಸಿಗುವುದಿಲ್ಲ. ಎಷ್ಟೋ ದಿನದ ಬಳಿಕ ಅದರ ಮೌಲ್ಯ ಗೊತ್ತಾಗುತ್ತದೆ. ಬರವಣಿಗೆ ನಮ್ಮ ಮನಸ್ಸನ್ನು ಕ್ಲಿಯರ್ ಮಾಡುತ್ತದೆ. ಫೀಲಿಂಗನ್ನು, ಥಾಟ್ಸ್ ನ್ನು ಶಾರ್ಪ ಮಾಡುತ್ತದೆ. ಅದರೊಳಗಿನ ಕಸವನ್ನು ಕ್ಲೀನ್ ಮಾಡುತ್ತದೆ. ಅದರಿಂದ ನಮ್ಮ ಮನಸ್ಸಿನ ಪರ್‌ಸ್ಪೆಕ್ಟಿವ್ ಬಿಲ್ಡ್ ಆಗ್ತದೆ. ಅದು ನಮ್ಮನ್ನು ಸಮೃದ್ಧ ಗೊಳಿಸ್ತದೆ. ಕೈಗಿ ಸಿಕ್ಕಿದ್ದನ್ನು ಓದೋ ರೂಢಿ ಮಾಡ್ಕೊಳ್ಳ ಬೇಕು.

- **ಸರ್, ತಮಗೆ ಈ ಪತ್ರಿಕೆಗೆ 'ಬಯಲು' ಶೀರ್ಷಿಕೆ ಹೊಳೆದ ಬಗೆ ಹೇಗೆ? ಈ ಕುರಿತು ಹೇಳ್ತೀರಾ? ಹಾಗೇನೇ ಇದಕ್ಕೆ ಕರ್ನಾಟಕದ ಹೊರಗಿನವ್ರೂ ಬರೀತಿದಾರೆ. ಈ ವ್ಯಾಪ್ತಿ ಬಯಲುಗೆ ಲಭಿಸಿದ್ದು ಹೇಗೆ ? (ರಾಜಶ್ರೀ ನಾಯಕ್ )**

ನನಗೀಗ ಸರಿಯಾಗಿ ನೆನಪಿಲ್ಲ. ಯೂನಿವರ್ಸಿಟಿಯಲ್ಲಿರುವವರೊಬ್ಬರು ಇಟ್ಟ ಹೆಸರು ಇದು. (ಈ ಸಂದರ್ಭದಲ್ಲಿ ಪತ್ರಿಕೆಗೆ ಬಯಲು ಎಂಬ ಹೆಸರಿಟ್ಟಿರುವವರನ್ನು ಯುನಿವರ್ಸಿಟಿ ರಿಸೋರ್ಸ ಸೆಂಟರ್ ನಲ್ಲಿರುವ ಅರುಣ್ ನಾಯಕ್, ಹೊನ್ನಾವರ/ಕುಮಟಾ ಕಡೆಯವರು ಎಂದು ಗುರು ಮೊಗೇರ್ ಅವರು ನೆನಪು ಮಾಡಿಕೊಂಡರು.) ಬಯಲುಗೆ ಡಿಸೈನ್ ಕೊಟ್ಟವರು ಈ ಹಿಂದೆ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಅರ್ಚನಾ ಅವರು. 2012ರ ಆಲ್ ಮೆಂಬರ್ಸ್ ಮೀಟ್ ನಲ್ಲಿ ಬಯಲು ಬಗ್ಗೆ ಪ್ರಶಂಸೆ ಬಂತು. ನಾನ್ ಕರ್ನಾಟಕ ಪೀಪಲ್ಸ್ ಸಹ ಬರೆಯಬಹುದೆಂದು ನಿರ್ಧಾರಕ್ಕೆ ಬರಲಾಯಿತು. ಜೊತೆಗೆ ಎಲ್ಲಾ ಕಡೆಗೂ ಬಯಲು ಕಳಿಸ್ಬೇಕು ಎಂಬ ಐಡಿಯಾನೂ ಬಂತು. ಬಹುಶ: ಈಗ ಹೊಸ ಮದುಮಗಳ ಹಾಗೆ ಬಯಲುಗೆ ಹೊಸ ವಿನ್ಯಾಸ ಕೊಡುವ ಯೋಚನೆ ಇದೆ. ಹಾಗೇನೆ ಸಬ್ಜೆಕ್ಟ್ ವೈಸ್ ಬಯಲು ಬಂದ್ರೆ ಇನ್ನೂ ಉತ್ತಮ ಅನ್ನಿಸ್ತಿದೆ. ಆಗ ಅದನ್ನು ವಿಶೇಷ ಪುರವಣಿ ರೂಪದಲ್ಲಿಯೂ ತರಬಹುದು.

- **ಸರ್, ಬಯಲು ಪತ್ರಿಕೆಗೆ ಕೆಲಸ ಮಾಡುವ ಸದಸ್ಯರನ್ನು ಇಂಥವರು ಸಮರ್ಥರು ಎಂದು ನೀವು ಹೇಗೆ ಗುರುತಿಸುತ್ತೀರಿ? (ಗುಂಡಪ್ಪ ಕಾಟೇಕರ್ )**

ಬೇರೆಯವರ ಬಗ್ಗೆ ಇರುವ ನಂಬಿಕೆ ನನ್ನ ಆಸರೆ. ಇದೇ ಮನುಷ್ಯನ ವಿಶೇಷತೆ. ಎಷ್ಟೋ ಬಾರಿ ನಮಗೇ ನಮ್ಮ ಮೇಲೆ ನಂಬಿಕೆ ಇರುವುದಿಲ್ಲ. ಆದರೆ ಬೇರೆಯವರಿಗೆ ನಮ್ಮ ಮೇಲೆ ನಂಬಿಕೆ ಇರುತ್ತದೆ. ಈ ಸೆನ್ಸ್ ನಮಗಿದ್ದರೆ ಎಂಥವರಿಂದಲೂ ನಾವು ಕೆಲಸ ತೆಗೆಸಬಹುದು. ಬೇರೆಯವರ ಸಾಮರ್ಥ್ಯವನ್ನು ಗುರುತಿಸುವ ಒಳಗಣ್ಣು ನಮಗಿರಬೇಕು. ನಮ್ಮ ಮೇಲೆ ವಿಶ್ವಾಸ ಇಟ್ಟು ಕೆಲಸ ಕೊಟ್ಟಾಗ ಅದನ್ನು ಉಳಿಸಿಕೊಂಡು ಹೋಗುವುದು ನಮ್ಮ ಜವಾಬ್ದಾರಿ. ಇದರಿಂದ ನಾವೂ ಬೆಳೆಯುತ್ತೇವೆ. ಅವರೂ ಬೆಳೀತಾರೆ. ಇದು ಕಲೀತಾ, ಕಲಿ ೀತಾ ಮುಂದೆ ಹೋಗೋ ಪ್ರೋಸೆಸ್.

- **ಸರ್, ಈಗೀಗ ಹೆಚ್ಚು ಮಂದಿ ಬಯಲಿಗೆ ಬರೀತಾ ಇಲ್ಲ. ಓದೋದೂ ಕಡಿಮೆಯಾಗ್ತಿದೆ. ಆವಾಗ ಬರೆಯೋರಿಗೂ ಆಸಕ್ತಿ ಹೊರಟು ಹೋಗುತ್ತೆ. ಮತ್ತೆ ಮತ್ತೆ ಬರೀರಿ ಬರೀರಿ ಎಂದು ರಿಮೈಂಡ್ ಮಾಡ್ತಾ ಇರ್ಬೇಕಾಗುತ್ತದೆ. ಬರೆಯುವವ್ರೇ ಬರೀತಾರೆ ಹೊರ್ತು ಹೊಸಬರು ಬರೆಯೋದು ಕಡಿಮೆ. ಹೆಚ್ಚು ಮಂದಿ ಬರೆಯೋ ಹಾಗೆ, ಓದೋ ಹಾಗೆ ಏನು ಮಾಡ್ಬಹುದು ? (ರವಿ ಬಿ. ಟಿ.)**

ಬಯಲುನ ಹೆಚ್ಚು ಜನ ಓದ್ಬೇಕು, ಬರೀಬೇಕು ಎಂಬ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ನಾವು ನಮಗನ್ನಿಸಿದ್ದು ಬರೆಯುತ್ತಾ ಹೋಗಬೇಕು. ಓದುವವರು ಓದೇ ಓದ್ತಾರೆ. ಓದದೇ ಇದ್ರೆ ಬಿಟ್ಟು ಬಿಡಿ. ಪತ್ರಿಕೆ ಚೆನ್ನಾಗಿ ಬಂದ್ರೆ ಅದಕ್ಕಿಂತ ಸಂತೋಷ ಯಾವುದಿದೆ ? ಬತ್ತ ಬೆಳೆಯುವವರು ಮಾರುವುದಕ್ಕಾಗಿಯೇ ಬತ್ತ ಬೆಳೆಯೋಲ್ಲ. ಅವರಿಗೆ ಬತ್ತ ಬೆಳೆಸೋದು ಮುಖ್ಯ. ಬತ್ತ ಬೆಳೆಸಿದ ಮೇಲೆ ಡಿಮ್ಯಾಂಡ್ ಬರ್ತದೆ. ಬೆಳೆಯುವಾಗಲೇ ಈ ಯೋಚನೆ ಬೇಡ. ನೆಗೇಟಿವ್ ಥಿಂಕಿಂಗ್ ಬೇಡ.

- **ಸರ್, ಬಯಲು ಪತ್ರಿಕೆಯ ಬರವಣಿಗೆ ನೋಡ್ತಾ ಇದ್ರೆ ನಂಗೆ ಇದಕ್ಕೆ ಬರಿಯೋರಿಗಾಗಿ, ಥಾಟ್ಸ್ ಎಕ್ಸಪ್ರೆಸ್ ಗಾಗಿ ಈ ರೈಟಿಂಗ್ ಬಗ್ಗೇನೇ ಒಂದು ವರ್ಕಶಾಪ್ ಮಾಡಿದ್ರೆ ಒಳ್ಳೇದು ಅನ್ಸುತ್ತೆ. ನಿಮಗೂ ಇಂಥಾ ವರ್ಕಶಾಪ್ ಬೇಕು ಅನ್ಸುತ್ತಾ ? (ಸ್ವಾತಿ )**

ಪ್ರೊಫೆಷನ್ ಓರಿಯೆಂಟೆಡ್ ರೀಡಿಂಗ್ ಅಥವಾ ರೈಟಿಂಗ್ ಬೇರೆ. ಕ್ರಿಯೇಟಿವ್ ಓರಿಯೆಂಟೆಡ್ ರೀಡಿಂಗ ಅಥವಾ ರೈಟಿಂಗೇ ಬೇರೆ. ಇಲ್ಲಿ ಯಾರಿಗೂ ಫೋರ್ಸ ಮಾಡುವುದಿಲ್ಲ. ಕ್ರಿಯೇಟಿವಿಟಿಯಿಂದ ಸಿಗುವ ಸುಖ ಬೇರೆಯದರಿಂದ ದೊರಕುವುದಿಲ್ಲ. ಕ್ರಿಯೇಟಿವ್ ಎಲಿಮೆಂಟ್ ಬೇರೆ. ಅದು ಒತ್ತಾಯದಿಂದ ಬರುವುದಿಲ್ಲ. ಎಲ್ಲರಿಗೂ ಬರವಣಿಗೆಯ ಕೌಶಲ ಮಾಡಿಸುವ ಉದ್ದೇಶ ಇಲ್ಲ. ಎಲ್ಲರನ್ನೂ ಓದಿಸುವ ಉದ್ದೇಶವೂ ಇಲ್ಲ. ಒಳಗಿದ್ದನ್ನು ಹೊರಹಾಕುವ ಪ್ರವೃತ್ತಿ ಇದ್ದರೆ ಮನಸ್ಸು ಹಗುರವಾಗುತ್ತದೆ. ಫೀಲಿಂಗ್ ಹೊರಹಾಕುವುದೇ ಇಲ್ಲಿ ಮುಖ್ಯ. ಓದುವವರಿಲ್ಲ ಎಂದು ಬರೆಯುವುದು ಕಡಿಮೆ ಮಾಡುವುದು ಅಪಾಯಕಾರಿ.

- **ಸರ್, ಇದುವರೆಗೆ ಬಿಡುವು ಮಾಡಿಕೊಂಡು ನಮ್ಮ ಎಲ್ಲಾ ಪ್ರಶ್ನೆಗಳಿಗೂ ತಾಳ್ಮೆಯಿಂದ ಉತ್ತರಿಸಿದ್ದೀರಿ. ತಮಗೆ ನಮ್ಮ ಬಯಲು ತಂಡದ ಪರವಾಗಿ ಹೃತ್ಪೂರ್ವಕ ಧನ್ಯಾವಾದಗಳು.**


ನನಗೂ ಕೂಡ ಸಂತೋಷವಾಯಿತು. ನಿಮ್ಮ ಪ್ರಶ್ನೆಗಳೂ ಚೆನ್ನಾಗಿದ್ದವು. ಒಂದಿಷ್ಟು ಹೊತ್ತು ನನ್ನನ್ನು ಯೋಚನೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿವೆ. ನಿಮಗೆಲ್ಲರಿಗೂ ನನ್ನ ನಮಸ್ಕಾರ.

**(ಸಂಚಿಕೆ 50, ಅಕ್ಟೋಬರ್ 2016)**

## Place Value of a Number

- Bibi Raza Khanam, Dist. Institute Koppala

Lot of discussion happens when we talk on the concept of place value which I have experienced while discussing it with teachers and even with our members. There are very strong beliefs and understanding on the use of place value to learn numbers and basic operations. Two of the points which I found repeatedly in the discussions are, firstly Place value is used to introduce the number 10 and above and second one is only with the help of place value basic operations are done. On these two points, we need to first understand the importance of conceptual understanding rather than focusing more on number representation and algorithms. Because when it comes to introducing the number 10 to child, it is important to build the concept of 10 concretely as we do for numbers 1 to 9 and then the concept of place value helps to represent the number 10. We need to understand the purpose of using place value to represent a quantity in the form of a number, it is not to learn numbers.




We all know very well about the place value in terms of multiples of 10's used in Decimal number system having base 10. If we need to represent the quantity in the abstract form of mathematical symbols such as we count twenty eight children present in the class that has to be written as 28 in which child should be able to understand it as an whole number 28 (2 in the place of tens so its value is 20 and 8 is in the place of units, hence the total represented quantity is 28) not as 2 and 8 which may mislead to total of 10. Another example as, I purchase a bag for Rupees two hundred and sixty which will be represented as 260. Here the child should understand value of a number and proper representation using place value as 200+60+0= 260, some of the children use to write it as 200+60=20060 where child know to represent 200 and 60 but facing a challenge in addition. So, it becomes very important to understand in which stage child is facing a problem then only we will be able to build the concept of representation of a number.


And we need to understand the difference between place value and face value and also the importance of number composition and decomposition. Here let us consider the number nine hundred and twenty eight that is represented in numeral as 928 which is three digit number comprising of 9, 2 and 8. In this, 9 is in place of hundreds representing 9 x 100= 900, 2 in place of tens representing 2 x 10= 20 and 8 in place of ones representing 8 x 1=8 which makes a total of 900+20+8= 928. So the place value of 9 is 900, place value of 2 is 20 and place value of 8 is 8. But face value represents numerical value of that particular digit such as in this




number, face value of 9 is 9 itself, face value of 2 is 2 and face value of 8 is 8 which does not depend on the place of the digit in a number. When we look up to this number 928 suddenly it comes to our mind that it consists of 900+20+ 8 as we are stick on to this method of place value of representing numbers in decimal number system. But cant this number be made of 464+464 or 508+420 or

588+340 or 232+232+232+232 or 820+108 etc.. ? Off course it is possible and we get so many possible compositions of this number in that 900+20+8 is one of them. We all are just focusing on place value rather giving importance for number composition and decomposition. Another simple example I used to say is about number 15, most of us say it as 10+5. Why can't it be taught as 9+6, 4+11, 7+8, 12+3 etc which promotes child thinking and enhance the idea of constructing a number.




When we talk about place value, one more belief is for solving algorithms of basic operations understanding of place value is must. And many of us say child faces challenge in learning basic operations if he/she has not learnt place value properly. Once the child learns the number representations and start solving algorithms based on place value method, we can notice some of these issues in understanding the concept and solving the problem meaningfully. Let us take an example of addition and subtraction of 36 and 12. Look at the below image which represents the way some of us teach and child learns on it accordingly. Here 36 is split up as 3 and 6 and 12 id split up as 1 and 2 rather than considering it as an whole number. We ask the child to remove 2 from 6 and 1 from 3 not as removing 12 from 36 in first case and in second case we ask child to add 2 to 6 and 1 to 3 to get the answer rather than saying it as add 12 to 36. Actually 2 is removed from 6 and 10 is removed from 30 to get the difference of 24 if we go algorithmically in first case and 2 is added to 6 and 10 is added to 30 to get the total of 48 in second case.

The same problem can be solved with different strategies like

36-10 gives 26 then subtracting 2 from it gives 24
30-10 gives 20 and then 6-2 gives 4 which makes 20+4=24,
36-6=30- 6=24 or 36-6-6= 24
36-2=34-10=24 etc

Similarly we find different strategies of solving addition problem by number composition in which place value is one of the type. Let us think on this for multiplication and division also. Learning is important and should happen meaningfully. Mathematical learning should happen conceptually from concrete to abstraction by using the situational strategies to get the different solution strategies which promote child thinking but many of us are sticking up just to algorithms which has to overcome.

**(Issue 96, August 2020 )**

## Need for Sustainability in Innovations

**- Rajesh S Mahantmath, Dist. Institute Vijayapura**

We live in an age where everything seems to be constantly changing. People are crazy about new things. They want to purchase or construct new houses, taste new types of food, try different styles of clothing, and use the latest gadgets available in the market and so on. Thanks to economic reforms, market policies and an increase in the purchasing power of the people, increasing number of people are beginning to afford these things. This has heralded a good time for companies and innovators to come up with new products. Modern marketing and communication techniques help to spread word about the new products and advertising plays its part in convincing people that these products are “necessary’’ for them.

Of late, we have become highly consumeristic. Our social status is determined by the products we use and consume. Increase in demand for new products spurs innovators to develop newer and better products. This has flooded our markets with a large number and variety of products. There is an increasing trend among people mindlessly purchasing products even if they do not need or require them. When we do not use those products we gather what may be called a deadstock and the amount we have spent on them is dead investment. We do not give a second thought to the socio-economic and environmental implications of our spree of innovations.

Through our innovations we have achieved feats which would have been unimaginable two centuries ago. Our technology has enabled us to satisfy our needs with the least efforts and in the least time compared to our ancestors. It has enabled us to perform our tasks more accurately too. But, there are side effects. Large scale manufacturing of goods puts undue pressure on natural resources. Day by day natural resources are becoming scarce and precious. Increase in the rate of production has led to depletion of natural resources and pollution.

Development of such innovations has also resulted in unemployment, unrest and stress. We are never satisfied with our innovations and we keep developing better and complex technologies. We are tempted by the prospect of a more comforts. Gradually, instead of technology remaining a tool in our hands we become puppets in the hands of the technological innovations created by ourselves. We must try to understand that a time will come when the resources that sustain our technology are exhausted out innovations will be useless. As our technologies become more complex, we need to have more intelligent and innovative people to use it. There are always very few people who are exceptionally intelligent and who can control and manage innovative technologies. Such a scenario can be quite dangerous as it may lead to technocracy.

We have to be cautious while using technology and judiciously decide to what extent we ought to depend on our innovations. Today we are able to travel at amazing speeds from one place to another, we have devised cures for previously impossible ailments, and we are able to communicate with people in every nook and corner of the earth and so on. But, we also have nuclear missiles that can reduce all life on earth in to ashes.

We have to be careful that our innovations are sustainable. Our innovations should empower us and not endanger our growth and survival. Sustainable innovations need not be less effective or less magnificent. For example, just recall the numerous beautiful monuments erected by our ancestors all over the world. We need not stop or curb our urge to innovate. But, we have to take lessons in sustainability from the time tested practices of our ancestors. (**Issue 65, January 2018)**

# Revisiting the Gandhian Understanding of Leadership, his Ideas, and Values for a better World

**-Sanjay Daniel, Dist. Institute-Ballary**

India has witnessed numerous forms and patterns of leaderships throughout its epochs. The early rule of our society was both monarchical and republican in nature. However, the continuity of republican leadership in Early India after the formation of State-based political system is still debatable. But, the changes in its Historical contexts which gave rise to public-dependent governance cannot be ignored completely. Due to India's exposure to multiple rulings, the periodization of Indian History becomes complex and laborious to understand. James Mill's interpretation of Indian history by dividing it into three major phases (Ancient India – ruled by the Hindus, Medieval India – ruled by the Muslims and Modern India – ruled by the British) is commonly accepted. Universities of our present time which follows this idea of periodization fails to provide us the holistic picture of our pasts. Romila Thapar, a noted Historian of India has criticized Mill's periodization of Indian History and has provided us with periodization which suits a diversified Nation like India. Dividing History based on religion to manipulate the minds of the people of India by setting up one community against the other was one of the ambition of Colonial Historiography and its consequences are felt in India even today. Therefore, only deeper Historical enquiries provide true stories of our pasts and the stories developed through Historical methods solves the issues of the present.

Though the Indian polity was complex, few monarchs and ministers or few philosophers and reformers are remembered and cherished today. Few such leaders have remained in the lives of Indians. What we feel when we hear about of Asoka may not be the same for Bindusara or What we feel when we hear about Akbar may not be the same for Muhammad Azam Shah. Similarly, Indian Freedom Struggle has given us leaders belonging to different ideologies, regions and those leaders have also used varied languages in which they used to address the gatherings. But, only a few have remained in the hearts of Indians today and each one of us have the capacity to explain the connection between one's own life with the chosen leader. For me, Bapu is such a leader in whose leadership I see Equality, Empathy and Certainty.

Bapu, who disbelieved in the strength of force and violence, had a unique world view when compared to the leaders of the time. He gained this from his personal experiences and readings. His meek voice and a height of 5.3 feet was often seen as drawbacks of becoming a leader. His ideas such as 'Sathyagraha' and 'Non – Violence' were seen as excuses of the weak. The Film 'Gandhi' directed by Richard Attenborough in which Ben Kingsley plays the role of the Mahatma, inspires me each time I watch the film.

Generally, the interests of children during their school days are different from the ideas of their adult age. When I screened the movie 'Gandhi' for my students, they were more appealed to Bhagat Sigh or Azad's idea of leadership with little or no awareness of their socialist stands. The calling of Revolution and usage of Violence to attain Freedom attracts them initially. I remember Apostle Paul's words in one of his letters to the Corinthians in the Bible 1 Corinthians 13:11 – 'When I was a child, I talked like a child, I thought like a child, I reasoned like a child. When I became a man, I put the ways of childhood behind me' – In a way, every individual's perceptions evolve periodically. Gandhi in his political career believed in providing political consciousness to the people prior to gaining freedom, without which the understanding of independence becomes meaningless. This does not mean to say that he refused to fight for Independence from the brutality of the imperial rule. But, primarily his approaches were to make each individual aware about the idea of Freedom.

Bapu was a peripatetic. Prior to his statements on any political or social issue, the tour which he takes up with specific objectives and the connections that he makes with the real issues in the field would make his observations reflective and reliable. The understanding of Gandhi was therefore directly from the field unlike other leaders. However, his writings nearly come up to nine volumes and he can be regarded as one such leader who spent ample time in writing. We come across a lot of people in the intellectual and political field, who either restrict themselves to the actual field without understanding the scholarships on the area of study or limit oneself to reading the theories of the field without understanding it in reality. Therefore, the idea of 'Praxis' which means each of our practices or activities performed with prior understanding becomes important. Gandhi was one such leader who practiced his principles.

Gandhi's ideas on 'Religion' and Contribution to the unity of Hindus and Muslims which he addressed as 'Communal Harmony' or his understanding of modernization resulting in actions like that of using

'Charaka' as a symbol of our National Movement reveals us the nature of his leadership. In fact, the design of our National Flag and its orderly representation of colour was a collaborative design of Pingali Venkayya, who was an Andhra Congressman, Lal Hansraj and Bapu. Ramachandra Guha, a noted Historian of Modern India in his book, Gandhi: The years that changed the world – mentions that – "P. Venkayya, who for several years had been pressing Gandhi to adopt a 'National' Flag for the nation-in-the-making. This time too Venkayya made the same proposal, but in the design he offered, Gandhi 'saw nothing to stir the nation to its depths'. Then Lal Hansraj of Jullundur suggested that the spinning wheel should find a place on the Swaraj Flag. Gandhi was struck by the suggestion, and asked Venkayya to give him a design containing a spinning wheel on a background of saffron (denoting Hindu) and green (denoting Muslim). The enthusiastic Venkayya produced a design in three hours. Gandhi looked at it, and realized that a colour was also needed for the other religions of India. He suggested white be added to the saffron and the green. For, Hindu-Muslim unity is not an exclusive term; it is an inclusive term, symbolic of the unity of all faiths domiciled in India. If Hindus and Muslims can tolerate each other, they are bound to tolerate all other faiths.' Gandhi further suggested the order in which the colours should be placed: white first, next green, finally saffron, in progressive order of numerical importance, the idea being that the strongest should act as a shield to the weakest'. Eventually, the white was placed in the middle, between the saffron and the green, the two major religions symbolically surrounding and protecting the others."

Mahatma was fully aware that understanding the local issues and seeking for solutions from the people belonging to the locality by participating in the local-governance is an important practice in Democracy. His strong belief that the people of the 'Grama' are the ones who understand the difficulties better was his trust in the common people. Few theories which are considered to solve the larger issues fails drastically due its lesser understandings of the micro issues of the locality. In fact, Gandhi was one of the leader who initiated the people-based movements during India's Freedom Struggle. Though the efforts of the Early Nationalists gave us an intellectual framework to our struggle, the attempts to bring it amongst the Indian masses could only be seen in the Gandhian phase. His faith in involving people in the decision making processes and being transparent in his thoughts and actions were two main reasons which helped him to mobilize larger number of people for the cause of our Freedom. Sometimes, I have observed common people talking to each other about the failures of their organizational programs due to less importance given to the views of the people while taking some important decisions. In our work spaces or in families we all have seen few individuals who give attention to every individual member's thoughts and we tend to develop a workable rapport with them. A Democratic lifestyle even in smaller units of society brings greater meaning to people's lives. Bapu's career and lifestyle was indeed based on the Spirit of Democracy.

Guha's recent biographical work, Gandhi – The years that changed the world – is a phenomenal articulation of Bapu's life. He mentions few interesting aspects of Mahatma's life. One such narrative in the book which informs us about his leadership skill is about the increase in the number of members in the Indian National Congress. The members by 1920 had increased up to two million after Bapu took over the leadership. His ideals which sought to bring people together for a cause pressurized the British-Raj to grant us independence. Remember, Joseph Stalin (1878 – 1953) who led the USSR, which was already a free country and who was also a contemporary of Gandhi was responsible of killing tens of millions during his regime. What makes them different? and What are the sources on which their understanding of leadership and methods to achieve their goals originated? Are some of the crucial questions that we need to ask.

The contributions of Gandhi to 21st century India is beyond our imagination. His love for Humanity and Respect for every individual irrespective of the caste, religion or gender she or he belongs is truly a character of a Modern Democratic Leader. He was able to encourage new leaderships like that of Vallabhbhai Patel, Jawaharlal Nehru and B.R Ambedkar though he had differences with some of their political leanings. His mobilization of people for any cause was not based on religion or caste. He cannot be traced as a leader of a single community and thus can be called as one of the Maker of Modern India, whose identity is not that of Singularity. Therefore, he lives in every one of us irrespective of the community we belong. And every citizen of this Country will need his principles to have a life of Equality, Empathy and Certainty.


(Issue 80, April 2019)

## ಕಮಲ ಕಾಳನ ತಂಗಿ – ಇಲ್ಲಿ ಕಮಲಳಿಗೂ ಕಾಳನಿಗೂ ಇರುವ ಸಂಬಂಧವೇನು?

**–ಪುನೀತ್ ಎಸ್. ಜಿಲ್ಲಾ ಸಂಸ್ಥೆ– ಮಂಡ್ಯ**


ಒಂದು ತಿಂಗಳ ಹಿಂದೆ ಫೇಸ್‌ಬುಕ್‌ನಲ್ಲಿ ಪೋಸ್ಟ್‌ಗಳನ್ನು ನೋಡುವಾಗ, ನನ್ನ ಸ್ಕೂಲಿನ ಗೆಳೆಯ 'ದಿಯಾ' ಎನ್ನುವ ಸಿನೆಮಾ ಬಗ್ಗೆ ವಿಮರ್ಶೆ ಬರೆದಿದ್ದು ಕಣ್ಣಿಗೆ ಬಿತ್ತು. ಇದ್ಯಾವ ಸಿನೆಮಾ ವಿಶೇಷವಾಗಿದೆಯಲ್ಲಾ ಎನ್ನುತ್ತಾ ಓದಿದಾಗ ತಿಳಿಯಿತು. ಅದು ನಮ್ಮ ಶಾಲೆಯ ಸೀನಿಯರ್ ನಿರ್ದೇಶಿಸಿರುವ ಸಿನಿಮಾ ಎಂದು ಓದಿ ಇನ್ನೂ ಖುಷಿಯಾಯಿತು. ಪಕ್ಕ ಪಕ್ಕದ ಕಾಟ್‌ನಲ್ಲಿ ಕುಳಿತು ಹರಟೆ ಹೊಡೆಯುತ್ತಿದ್ದ ಸೀನಿಯರ್ ಅಶೋಕಣ್ಣ, ಇಷ್ಟು ಉತ್ತಮ ಸಿನಿಮಾ ನಿರ್ದೇಶಿಸಿದ್ದಾರಲ್ಲಾ ಎಂದು ಆಶ್ಚರ್ಯವೆನಿಸಿತು. ಕೂಡಲೇ ಗೂಗಲ್‌ನಲ್ಲಿ ರಿವೀವ್ಸ್ ಓದಿದೆ, ಅದರಲ್ಲೂ 9.6/10 ರೇಟಿಂಗ್ ದೊರಕಿತ್ತು. ಕೂಡಲೇ ಅರ್ಧದಿನ ರಜಾ ಹಾಕಿ ಗೆಳೆಯ ಗಜೇಂದ್ರನೊಂದಿಗೆ ಮೈಸೂರಿನಲ್ಲಿ ಅದೇ ಸಿನಿಮಾ ನೋಡಿದೆ, ಎರಡು ದಿನ ಅದೇ ಗುಂಗಿನಲ್ಲಿದ್ದೆ. ಅಶೋಕಣ್ಣನಿಗೆ ಉತ್ತಮ ಸಿನಿಮಾ ಮಾಡಲು ಹೇಗೆ ಸಾಧ್ಯವಾಯಿತು ಎಂದು ಯೋಚಿಸತೊಡಗಿದೆ. ಮೂರು ದಿನ ಬಿಟ್ಟು ಅದೇ ಗೆಳೆಯ 'ದಿಯಾ' ಸಿನಿಮಾ ನಿರ್ದೇಶಕರೊಂದಿಗೆ ಸಂವಾದವನ್ನು ಪೋಸ್ಟ್ ಮಾಡಿದ್ದ. ನಮ್ಮ ಅಶೋಕಣ್ಣ ಇಷ್ಟು ಚೆನ್ನಾಗಿ ತನ್ನಲ್ಲಿರುವ ವಿಚಾರವನ್ನು ವಿಶ್ಲೇಷಿಸುತ್ತಿರುವುದನ್ನು ನೋಡಿದೆ. ಅಬ್ಬಾ ಇಷ್ಟು ದೊಡ್ಡ ಮಟ್ಟದಲ್ಲಿ ಯೋಚಿಸುತ್ತಿದ್ದಾರಲ್ಲಾ, ಅದೂ ನಮ್ಮ ಕನ್ನಡ ಫಿಲ್ಮ್ ಇಂಡಸ್ಟ್ರಿಯಲ್ಲಿ, ಎಂದು ನೋಡಿ ಸಂತೋಷವಾಯಿತು. ಅದರಲ್ಲಿ ಇಂಟರ್‌ವ್ಯೂವರ್ ಒಂದು ಪ್ರಶ್ನೆ ಕೇಳುತ್ತಾರೆ, ಈ ಕಥೆ ಎಲ್ಲಾದ್ರೂ ಕೇಳಿದ್ರಾ ಅಥವಾ ಬೇರೆಭಾಷೆಯಲ್ಲಿ ಬಂದಿತ್ತಾ ಎಂದು. ಅದಕ್ಕೆ ಅವರು ಹೇಳುತ್ತಾರೆ 'ಮೂವಿ ಅಂದರೆ ಅದೊಂದು ಸ್ಟೋರಿ ಟೆಲ್ಲಿಂಗ್, ಕಥೆ ಹಳೆಯದೇ ಇದ್ದರೂ ಅದರಲ್ಲಿ ಎಮೋಷನ್ಸ್, ಎಂಟರ್‌ಟೇನ್‌ಮೆಂಟ್, ಟ್ವಿಸ್ಟ್ ಇರಬೇಕಾಗುತ್ತದೆ.' ಆಗ ಮಾತ್ರ ಆ ಮೂವಿ ನೋಡಿಸಿಕೊಂಡು ಹೋಗಲು ಸಾಧ್ಯ ಎಂದು ಹೇಳುತ್ತಾರೆ. ಈವತ್ತಿನ ಟ್ರೆಂಡ್‌ಗೆ ಎಷ್ಟು ಸತ್ಯ ಅಲ್ವಾ ಎನಿಸಿತು. ಕನ್ನಡದಲ್ಲಿ ಕಥೆಯನ್ನು ಕುತೂಹಲಕಾರಿಯಾಗಿ ಹೇಳುವುದೂ ಸಹ ಒಂದು ಪ್ರಮುಖ ಕೌಶಲ ಅಲ್ವಾ ಎಂದುಕೊಂಡು ಯೋಚಿಸುವಾಗ ನಮ್ಮ ಟ್ರೈನಿಂಗ್‌ನಲ್ಲಿ ನಡೆದ ಚರ್ಚೆಯ ಮೇಲೆ ಗಮನಹರಿಯಿತು. ನಮ್ಮ ತಾಲೂಕಿನಲ್ಲಿ ನಡೆದ ಕಿರು ಅಧ್ಯಯನದ ಪ್ರಕಾರ ಸಾಕಷ್ಟು ಮಕ್ಕಳು ಗಣಿತಕ್ಕೆ ಹೋಲಿಸಿದರೆ ಪ್ರತಿದಿನ ಆಡುವ ಭಾಷೆಯಲ್ಲೇ ಮಕ್ಕಳ ಕಲಿಕೆ ಕಡಿಮೆಯಿರುವುದನ್ನು ಶಿಕ್ಷಕರೊಂದಿಗೆ ನಡೆದ ಚರ್ಚೆಯ ಸಂದರ್ಭ. ಯಾಕೆ ಹೀಗಾಗುತ್ತಿದೆ ಎಂದು ಕೇಳಿದಾಗ ಶಿಕ್ಷಕರು 'ಗಣಿತ ಕಲಿಸುವುದಕ್ಕಿಂತ ಕನ್ನಡ ಕಲಿಸುವುದೇ ಕಷ್ಟ' ಎಂದು ಅಭಿಪ್ರಾಯಪಟ್ಟರು. ನನ್ನ ಶಾಲಾ ದಿನಗಳಲ್ಲಿ ಕನ್ನಡ ಪರೀಕ್ಷೆಯನ್ನು ಮಾತ್ರ ಪುಸ್ತಕ ಹಿಡಿಯದೇ 25ಕ್ಕೆ 24 ಅಂಕಗಳನ್ನು ಪಡೆಯುತ್ತಿದ್ದುದನ್ನು ಜ್ಞಾಪಿಸಿಕೊಂಡು, ಇತ್ತೀಚಿನ ದಿನಗಳಲ್ಲಿ ಭಾಷೆ ಕಲಿಸುವುದು ಏಕೆ ಕಷ್ಟ ಎಂದು ಕೇಳಿದೆ. ಅದಕ್ಕೆ ಶಿಕ್ಷಕರೊಬ್ಬರು, ನಾವು ಭಾಷೆ ಕಲಿಸಲು ಒಂದು ಚೌಕಟ್ಟಿನೊಳಗೆ ಸಿಲುಕಿಕೊಂಡಿದ್ದೇವೇನೋ ಅನಿಸುತ್ತಿದೆ ಎಂದರು. ಮೂರನೆಯ ತರಗತಿ ಮಕ್ಕಳು ಕೊಟ್ಟ ಒಂದು ಹತ್ತು ಸಾಲಿನ ಕಥೆಯನ್ನು ಓದಿ ಅರ್ಥ ಮಾಡಿಕೊಳ್ಳುತ್ತಿಲ್ಲ. ಅನಿಸಿದ್ದನ್ನು ಬರೆಯಲಾಗುತ್ತಿಲ್ಲ, ಅನಿಸಿದ್ದನ್ನು ಅರ್ಥಪೂರ್ಣವಾಗಿ ಹೇಳಲಾಗುತ್ತಿಲ್ಲ ಎಂಬ ದೂರು ಕೇಳಿಬರುತ್ತಿದೆ ಎಂದರು.


ಈ ಅಂಶವನ್ನು ಬೆನ್ನುಹಿಡಿದು ಹೊನ್ನೇನಹಳ್ಳಿ ಶಾಲೆಗೆ ಭೇಟಿಕೊಟ್ಟೆ. ಪ್ರಕಾಶ್ ಮಾಸ್ಟರಿಗೆ ತಿಳಿಸಿ ನೇರವಾಗಿ ಮೂರನೆಯ ತರಗತಿಯ ಮಕ್ಕಳ ಜೊತೆ ಚರ್ಚಿಸಲು ಶುರುಮಾಡಿದೆ. ಮೂರನೆಯ ತರಗತಿಯಲ್ಲಿ ಇರುವುದು ಮೂರೇ ಮಕ್ಕಳು ಜಯಶ್ರೀ, ಶಿವರಾಜ್ ಮತ್ತು ವಿನಯ್ ಮಾತ್ರ. ಏನು ಮಾಡ್ತಾಯಿದೀರಾ? ಎಂದು ವಿಚಾರಿಸುತ್ತಾ ಕಮಲ–ಕಾಳ ಪದ್ಯವನ್ನು ಓದಿಸಲು ಪ್ರಯತ್ನಿಸಿದೆ. ವಿನಯ್ ಕ...ಮ...ಲ – ಕಮಲ, ಕಾ...ಳ...ನ – ಕಾಳನ, ತಂ...ಗಿ – ತಂಗಿ ಎಂದು ಅಕ್ಷರಗಳನ್ನು ಓದುತ್ತಾ, ಪದಗಳನ್ನು ಉಚ್ಚರಿಸುತ್ತಾ ಓದಿ ಮುಗಿಸಿದನು. ಮಕ್ಕಳನ್ನು ಉದ್ದೇಶಿಸಿ ಈ ವಾಕ್ಯದ ಅರ್ಥ ಏನು ಎಂದು ಕೇಳಿದೆ. ನಿಶ್ಯಬ್ದ.....! ಈ ತರಹದ ಪ್ರಶ್ನೆಯನ್ನು ಕೇಳಿದೊಡನೆ, ಇಂತಹ ಪ್ರಶ್ನೆಯನ್ನು ಕೇಳೇ ಇಲ್ಲವೇನೋ ಎಂಬ ಮುಖಭಾವವನ್ನು ವ್ಯಕ್ತಪಡಿಸಿದರು. ಮತ್ತೆ ಕೇಳಿದೆ, ಇಲ್ಲಿ ಕಮಲಳಿಗೂ, ಕಾಳನಿಗೂ ಇರುವ ಸಂಬಂಧವೇನು? ಎಂದು ಕೇಳಿದೆ. ನಿಶ್ಯಬ್ದ...! ಪ್ರಕಾಶ್ ಮಾಸ್ಟರ್ ಪ್ರಕಾರ ವಿನಯ್ ಈ ತರಗತಿಯ ಬುದ್ಧಿವಂತ ಮಗು. ಮತ್ತೆ ಕೇಳಿದೆ, ಇವರಿಬ್ಬರಲ್ಲಿ ಯಾರು ದೊಡ್ಡವರು?. ಮತ್ತೆ ನಿಶ್ಯಬ್ಧ.....! ಆಗಲಿ, ಕಾಳನ ತಂಗಿ ಯಾರು ಎಂದು ಕೇಳಿದೆ. ದೂರದಲ್ಲಿದ್ದ ಜಯಶ್ರೀ 'ಕಮಲ' ಎಂದಳು. ಕಮಲಳಿಗೆ ಕಾಳ ಏನಾಗಬೇಕು ಎಂದು ಕೇಳಿದೆ. ವಿನಯ್ ತಕ್ಷಣವೇ 'ಅಣ್ಣ' ಎಂದನು. ನನಗೆ ಸ್ವಲ್ಪ ಸಮಾಧಾನವಾಯಿತು. ಸರಿ ಹಾಗಾದ್ರೆ, ನಿಮಗೆ ಅಣ್ಣ, ಅಕ್ಕ, ತಮ್ಮ, ತಂಗಿ ಇದ್ದಾರಾ ಎಂದು ಕೇಳಿದೆ. ಹೌದು, ಹೌದು ಎಂದು ಎಲ್ಲರೂ ತಲೆಯಾಡಿಸಿದರು. ಶಿವರಾಜ್, ನೀನ್ ಹೇಳು ನಿನ್ನ ಅಣ್ಣ ಯಾರು? ಅದಕ್ಕೆ ಶಿವರಾಜ್ 'ಆನಂದ' ಎಂದು ಹೇಳಿದನು. ಅದನ್ನೇ ವಾಕ್ಯ ರೂಪದಲ್ಲಿ ಹೇಳು ಎಂದೆ. ಶಿವರಾಜ್‌ನ ಅಣ್ಣ ಆನಂದ ಎಂದನು. ವೆರಿ ಗುಡ್



8 ಕಮಲ-ಕಾಳ

ಕಮಲ ಕಾಳನ ತಂಗಿ.
ಅವರ ತಂದೆ ಕೃಷಿಕ.
ಕಮಲೆಗೆ ಕುದುರೆ ಕಂಡರೆ ಒಲವು.
ಕಾಳನಿಗೆ ಕೋತಿ ಕಂಡರೆ ಒಲವು.
ಕಮಲ, ಕಾಳ, ಕೊಳದಿಂದ ನೀರು ತಂದರು.
ಕೈ ಕಾಲು ಮುಖ ತೊಳೆದರು.
ಹಿಂದೆಯೇ ಬಂದ ಕುದುರೆ ಸಂತೋಷದಿಂದ ಕೆನೆಯಿತು.
ಮುಂದೆ ಬಂದು ಕೋತಿ ಲಾಗ ಹಾಕಿ ಕುಣಿಯಿತು.
ತಾಯಿ ಹಾಲು ಕುಡಿಯಲು ಕೂಗಿದರು.
ಕಮಲ ಕಾಳ ಹಾಲು ಕುಡಿದರು.
ಆಗ ಕೀರ್ ಕೀರ್ ಎಂಬ ದನಿ ಕೇಳಿಸಿತು.
ಕೌತುಕದಿಂದ ನೋಡಿದರು; ಕಿಟಕಿಯ ಬಳಿ ಒಂದು ಗಿಳಿ !
ತಾಯಿ ಗಿಳಿಗೂ ಹಾಲು ನೀಡಿದರು.
8

ಎಂದು ಹೇಳುತ್ತಾ, ಎಲ್ಲರೂ ನಿಮ್ಮ ನಿಮ್ಮ ನೋಟ್‌ಬುಕ್ ಪೆನ್ಸಿಲ್ ತೆಗೆದುಕೊಂಡು ಬನ್ನಿ ಎಂದು ಹೇಳಿದೆ. ಶಿವರಾಜ್‌ನನ್ನು ಉದ್ದೇಶಿಸಿ, ನೀನು ಹೇಳಿದ್ದನ್ನು ಬರೆ ಎಂದು ಕೇಳಿದೆ. ನಿಧಾನವಾಗಿ ಬರೆದನು. ವಿನಯ್, ಸಾರ್ ನಾನೂ ಹೇಳ್ತೀನಿ ಎಂದ, ಹೇಳು ಎಂದೆ. ವಿನಯ್ ತಮ್ಮ ಮೋಹಿತ್ ಎಂದನು. ಸರಿ ಹಾಗೆಯೇ ಬರೆ, ಎಂದು ಹೇಳಿದೆ. ಖುಷಿಯಾಗಿ ಬರೆದು, ಸರಿಯಾಗಿ ಬರೆದಿದ್ದೀನಾ ಎಂದು ಕೇಳಿದ. ಜಯಶ್ರೀ ಹಾಗೆಯೇ ಹೇಳಿ, ಬರೆದಳು. ಇದನ್ನೇ ಉಲ್ಟಾ ಹೇಳಬಹುದಾ ಎಂದೆ. ತಕ್ಷಣ ವಿನಯ್, ಮೋಹಿತ್‌ನ ಅಣ್ಣ ವಿನಯ್ ಎಂದ. ಇದರಂತೆಯೇ ಮೂರೂ ಜನರು ಬರೆದು, ಖುಷಿಪಟ್ಟರು. ಕಮಲ–ಕಾಳ ಪದ್ಯವನ್ನು ಮುಂದುವರೆಸೋಣ ಎನ್ನುತ್ತಾ ಮುಂದಿನದನ್ನು ಓದಲು ತಿಳಿಸಿದೆ. ಜಯಶ್ರೀ ಓದಲು ಕಷ್ಟಪಡುತ್ತಿದ್ದಳು, ಪ್ರಕಾಶ್ ಮಾಸ್ಟರ್ ಬಂದು, ಸಾರ್ 'ಈ ಜಯಶ್ರೀಗೆ ಏನೂ ಬರಲ್ಲ, ಶಿವರಾಜ್–ವಿನಯ್ ಪರವಾಗಿಲ್ಲ' ಎಂದರು. ಸರಿ ಎಷ್ಟಾಗುತ್ತೋ ಅಷ್ಟು ಓದು ಎಂದು ತಿಳಿಸಿದೆ, ತಡವರಿಸುತ್ತಾ, ವಿನಯ್‌ನ ಸಹಾಯ ತೆಗೆದುಕೊಂಡು 'ಅವರ ತಂದೆ ಕೃಷಿಕ' ಎಂದು ಓದಿದಳು. ಇದರ ಅರ್ಥ ಏನು ಎಂದು ಕೇಳಿದೆ, ಮಕ್ಕಳಿಗೆ ಕೃಷಿ ಎನ್ನುವ ಪದ ಕಷ್ಟವಾಗುತ್ತಿತ್ತು. ಮಕ್ಕಳಿಗೆ ಕೃಷಿ ಎಂದರೆ ವ್ಯವಸಾಯ ಎಂಬ ಅರ್ಥ ಎಂದೆ. ನಿಮ್ಮೂರಲ್ಲಿ ವ್ಯವಸಾಯ ಮಾಡೋರು ಇದ್ದಾರಾ ಎಂದು. ಖುಷಿಯಾಗಿ ಹೌದು ಸಾರ್ ಎಂದರು. ಹಾಗಾದ್ರೆ, ಇವರ ತಂದೆ ಏನು ಮಾಡುತ್ತಾರೆ ಎಂದೆ, 'ಇವರ ತಂದೆ ವ್ಯವಸಾಯ ಮಾಡುತ್ತಾರೆ' ಎಂದು ಒಟ್ಟಾಗಿ ಹೇಳಿದರು. ಹಾಗಾದ್ರೆ ನಿಮ್ಮ ತಂದೆ ಏನು ಮಾಡುತ್ತಾರೆ ಎಂದು ಕೇಳಿದೆ 'ನಮ್ಮ ತಂದೆ ಬೆಲ್ಲ ಮಾರುತ್ತಾರೆ'; 'ನಮ್ಮ ತಂದೆ ಡಿಶ್ ಹಾಕುತ್ತಾರೆ'; 'ನಮ್ಮ ತಂದೆ ಗಾರೆ ಕೆಲಸ ಮಾಡುತ್ತಾರೆ'; ಎಂದರು. ಮತ್ತೆ, ಏನು ಹೇಳ್ತಾಯಿದೀರೋ ಅದನ್ನೇ ಬರೆಯಿರಿ ಎಂದೆ. ಮತ್ತೆ ಖುಷಿಯಾಗಿ ಬರೆದು, ತಪ್ಪುಗಳನ್ನು ಅವರಲ್ಲಿಯೇ ಚರ್ಚಿಸಿ ಸರಿಪಡಿಸಿಕೊಂಡು ತೋರಿಸಿದರು. ಹೀಗೆಯೇ ಮುಂದುವರೆದು ನಿಮಗೆ ಯಾವ ಪ್ರಾಣಿ ಇಷ್ಟ, ನಿಮಗೆ ಯಾವ ಪಕ್ಷಿ ಇಷ್ಟ, ನಿಮಗೆ ಯಾವ ಹಣ್ಣು ಇಷ್ಟ, ಎಂದು ಕೇಳುತ್ತಾ ಅವರು ಹೇಳುವುದನ್ನೇ ಬರೆಯಲು ಹೇಳಿದೆ. ಅವರ ಆಸಕ್ತಿಗಳನ್ನು ಬರೆಯುತ್ತಿರುವುದರಲ್ಲಿ ಸಂತೋಷಪಡುತ್ತಿರುವುದನ್ನು ಕಂಡೆನು. ಅಲ್ಲಲ್ಲಿ ಮಾಡುತ್ತಿರುವ ಕಾಗುಣಿತ ತಪ್ಪುಗಳನ್ನು ನಾನೇ ಸರಿಮಾಡಿ ಇಡುತ್ತಿದ್ದೆ ವಿನಃ, ನೀನು ಹೀಗೆಯೇ ಬರೆಯಬೇಕು ಎಂದು ಹೇಳುತ್ತಿರಲಿಲ್ಲ. ಪ್ರತಿಯೊಬ್ಬರೂ 6 ರಿಂದ 7 ವಾಕ್ಯಗಳನ್ನು ಬರೆದರು. ಜಯಶ್ರೀ ಸ್ವಲ್ಪ ಕಷ್ಟಪಡುತ್ತಿದ್ದರೂ ಸಹ, ಇನ್ನಿಬ್ಬರ ಜೊತೆಯಲ್ಲೇ ಅವಳ ಕೆಲಸವನ್ನು ಮುಗಿಸಿದಳು. ಈಗ ನೀವು ಏನು ಬರೆದಿದ್ದೀರೋ ಅದನ್ನು ಓದಿ ಎಂದೆ, ಎಲ್ಲರೂ ಸುಲಲಿತವಾಗಿ ಎಕ್ಸ್‌ಪ್ರೆಷನ್ ಜೊತೆಗೆ ಓದಿದರು. ಪ್ರಾಣಿಗಳ ಹೆಸರು, ತಂದೆ ಮಾಡುವ ಕೆಲಸ, ಪಕ್ಷಿ ಹೆಸರು ಇವುಗಳಿಗೆ ಹೆಚ್ಚು ಮಹತ್ವ ಕೊಟ್ಟು ಓದುತ್ತಿದ್ದುದು ಕಂಡುಬಂತು. ಈಗ, ಬೇರೆಯವರ, ಪುಸ್ತಕದಲ್ಲಿ ಬರೆದಿರುವುದನ್ನು ಓದಿ ಎಂದೆ, ಮತ್ತೆ ಎಲ್ಲರೂ ಸುದೀರ್ಘ ಸುಲಲಿತವಾಗಿ ಓದಿ ಖುಷಿಪಟ್ಟರು. ನಾನು ಮಾತು ಮಾತಿಗೂ ಖುಷಿ ಎಂದು ಉಪಯೋಗಿಸುತ್ತಿದ್ದೇನೆ, ಏಕೆಂದರೆ ನಾನು ಕೊಟ್ಟ ಕೆಲಸ ಅವರಿಗೆ ಹತ್ತಿರವಾಗಿದೆ, ಅವರ ಬಗ್ಗೆ ಬರೆದುಕೊಳ್ಳುತ್ತಿದ್ದಾರೆ, ಅವರ ವಿಶಿಷ್ಟತೆಯನ್ನು ಬರೆದುಕೊಂಡಿದ್ದಾರೆ, ಅವರ ಕಾನ್ಫಿಡೆನ್ಸ್ ಲೆವೆಲ್ ಹೆಚ್ಚಾಗಿದೆ ಆದ್ದರಿಂದ ಖುಷಿಯಾಗಿದ್ದರು ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಮಕ್ಕಳು ಬರೆದ ವಾಕ್ಯಗಳನ್ನು ಈ ಕೆಳಗಿನ ಚಿತ್ರಗಳಲ್ಲಿ ನೋಡಬಹುದು.







ಮುಂದುವರೆದು, ಶಿವರಾಜ್ ನಿನಗಿಷ್ಟವಾದ ಹಣ್ಣು ಯಾವುದು ಎಂದೆ. ತಕ್ಷಣ ಬಾಯಲ್ಲಿ ನೀರೂರಿಸಿ 'ಕಲ್ಲಂಗಡಿ' ಸಾರ್ ಎಂದ. ಹ್ಹ...ಹ್ಹ ಎನ್ನುತ್ತಾ ಹಾಗಾದ್ರೆ ಈಗ ಕಲ್ಲಂಗಡಿ ಬಗ್ಗೆ ಮಾತಾಡೋಣ ಎಂದೆನು. ಸರಿ ಸಾರ್ ಎನ್ನುತ್ತಾ ಶುರು ಮಾಡಿದರು. ಕಲ್ಲಂಗಡಿಯ ಮೇಲೆ ಹಸಿರು ಬಣ್ಣ ಇದೆ, ಜಯಶ್ರೀ ಮುಂದುವರೆಸುತ್ತಾ, ಒಳಗೆ ಕೆಂಪುಬಣ್ಣ ಇದೆ, ಶಿವರಾಜ್... ಅದು ಗುಂಡಾಗಿ ಇದೆ, ವಿನಯ್... ಬೇಕರಿಯಲ್ಲಿ ಕಲ್ಲಂಗಡಿ ಜ್ಯೂಸ್ ಮಾಡುತ್ತಾರೆ, ರಸ್ತೆ ಪಕ್ಕದಲ್ಲಿ ಗುಡ್ಡೆ–ಗುಡ್ಡೆ ಕಲ್ಲಂಗಡಿ ಮಾರುತ್ತಾರೆ, ಅಪ್ಪ ಸಂತೆಯಿಂದ ಕಲ್ಲಂಗಡಿ ತಂದಿದ್ದರು, ಹಸುಗಳು ಕಲ್ಲಂಗಡಿ ಸಿಪ್ಪೆ ತಿನ್ನುತ್ತವೆ, ಬೇಸಿಗೆಕಾಲದಲ್ಲಿ ಕಲ್ಲಂಗಡಿ ಚೆನ್ನಾಗಿರುತ್ತದೆ, ಕಲ್ಲಂಗಡಿಯೊಳಗೆ ಕಪ್ಪು ಕಪ್ಪು ಬಿತ್ತ ಇರುತ್ತದೆ ಎಂದು ಹೇಳಲು ಶುರು ಮಾಡಿದರು ಮತ್ತು ತಾನು ಇನ್ನೊಬ್ಬರಿಗಿಂತ ಹೊಸ ವಿಷಯ ಹೇಳಬೇಕು ಎಂದು ಹಾತೊರೆಯುತ್ತಿದ್ದುದು ಕಂಡು ಬಂತು. ಈಗ ಎಲ್ಲಾ ಹೇಳಿದ್ದೀರಲ್ಲಾ ಅದನ್ನೇ ನಿಮ್ಮ ಪುಸ್ತಕದಲ್ಲಿ ಬರೆಯತ್ತೀರಾ ಎಂದು ಕೇಳಿದೆ. ಮಕ್ಕಳು ನಾ ಮುಂದು ತಾ ಮುಂದು ಎಂದು ಓಡಿಹೋಗಿ ನೋಟ್‌ಬುಕ್ ತೆಗೆದು ಬರೆಯಲು ಶುರು ಮಾಡಿದರು. ಹತ್ತು ನಿಮಿಷದಲ್ಲಿ ಹನ್ನೆರಡು ವಾಕ್ಯಗಳನ್ನು ಇಂಡಿಪೆಂಡೆಂಟ್ ಆಗಿ

ಬರೆದರು. ನಾನು ಮಕ್ಕಳ ಪ್ರತಿಕ್ರಿಯೆ ನೋಡಿ ಸಂತೋಷಪಟ್ಟೆ. ಆ ಮುಗ್ಧ ಮನದಲ್ಲಿರುವ ಅಷ್ಟೂ ಯೋಚನೆಗಳನ್ನು ಅಕ್ಷರ ರೂಪದಲ್ಲಿ ಹೊರತರಲು ಸಾಧ್ಯವಾಯಿತಲ್ಲಾ ಎಂದು ಹೆಮ್ಮೆಯಾಯಿತು. ಇಷ್ಟು ಜೀವವಿರುವ ಪ್ರಕ್ರಿಯೆಯಲ್ಲಿ ಮಕ್ಕಳನ್ನು ತೊಡಗಿಸಲು ನಮ್ಮ ಶಿಕ್ಷಕರಲ್ಲಿ ಏಕೆ ಸಾಧ್ಯವಾಗುತ್ತಿಲ್ಲ ಎಂದು ಯೋಚಿಸಲು ಶುರು ಮಾಡಿದೆ. ಸಾಕಷ್ಟು ಶಿಕ್ಷಕರು ಪಾಠಗಳನ್ನು ಭಾಷಣದ ಮೂಲಕ ಮುಗಿಸುವ ಪ್ರಕ್ರಿಯ–ೆಯಲ್ಲಿದ್ದಾರೆಯೇ ವಿನಃ ಆ ಪಾಠಗಳ ಮೂಲಕ ಮಕ್ಕಳ ಆಲೋಚನೆಗಳನ್ನು ಹೊರತೆಗೆಯಲು ಸಾಧ್ಯವಾಗುತ್ತಿಲ್ಲ ಎನಿಸಿತು. ತರಗತಿಯ ಸಾಕಷ್ಟು ಪ್ರಕ್ರಿಯೆಗಳು ಕೇವಲ ಒಮ್ಮುಖವಾಗಿ ನಡೆಯುತ್ತಿವೆ. ಮಕ್ಕಳು ಕಲಿತಿಲ್ಲಾ ಎಂದರೆ ಮಕ್ಕಳ ಬುದ್ಧಿಮಟ್ಟ ಮತ್ತು ಅವರ ಹಿಂದಿರುವ ಸಾಮಾಜಿಕ ಹಿನ್ನೆಲೆಯೇ ನೇರ ಕಾರಣ ಎನ್ನುವುದು ಕಟ್ಟಿಟ್ಟ ಬುತ್ತಿಯಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ.

ಭಾಷಾ ಬೋಧನೆಯ ಬಗ್ಗೆ ಯೋಚಿಸುವಾಗ ಜ್ಞಾಪಕಕ್ಕೆ ಬರುವ ಮುಖವೆಂದರೆ, ದಿಯಾ ಚಿತ್ರದ ನಿರ್ದೇಶಕ ಅಶೋಕಣ್ಣ ಮತ್ತು ನಮಗೆಲ್ಲಾ ಶಾಲೆಯಲ್ಲಿ ಪಾಠ ಮಾಡಿದ ನಾಗರಾಜ ಮಾಸ್ಟರ್. ಇವರು ಪಠ್ಯವನ್ನು ನಮಗೇ ಓದಿಕೊಳ್ಳಲು ತಿಳಿಸಿ, ದಿನವೂ ರಕ್ತಾಕ್ಷಿ, ಶೂದ್ರತಪಸ್ವಿ, ಜಲಗಾರ, ರನ್ನನ ಗದಾಯುದ್ಧ, ಚೋಮನದುಡಿ ಹೀಗೆ ಪ್ರತೀ ದಿನವೂ ವಿಶೇಷಗಳಿಂದ ಕೂಡಿದ ಭಾಷಾ ತರಗತಿಗಳು ಕಣ್ಮುಂದೆ ಬರುತ್ತವೆ. ಅವರು ಕೊಡುತ್ತಿದ್ದ ನಮ್ಮೂರೇ ನಮ್ಗೆ ಚಂದ, ನಮ್ಮೂರ ಕಲೆ, ನಮ್ಮೂರ ಹಬ್ಬ ಎನ್ನುವ ಪ್ರಾಜೆಕ್ಟ್‌ಗಳು ಜ್ಞಾನಪಕಕ್ಕೆ ಬರುತ್ತವೆ. ವಾರದ ಕೊನೆಯಲ್ಲಿ ನಡೆಯುತ್ತಿದ್ದ ಚರ್ಚಾ ಸ್ಪರ್ಧೆಗಳು, ತಿಂಗಳಿಗೊಮ್ಮೆ ನಾಟಕ ಮತ್ತು ಸಂಗೀತ ಸ್ಪರ್ಧೆಗಳು ಕಣ್ಣಿಗೆ ಕಟ್ಟಿದಂತಿದೆ. ಇಂತಹ ವೈವಿಧ್ಯತೆಯುಳ್ಳ ವಾತಾವರಣಗಳೇ ಅಶೋಕಣ್ಣ ಇಷ್ಟು ಉತ್ತಮ ಕಥೆ–ಚಿತ್ರಕಥೆ ಬರೆದು ಭಾವನೆಗಳನ್ನು ಬರಹರೂಪದಲ್ಲಿ ತರಲು ಸಾಧ್ಯವಾಯಿತೇನೋ ಅನ್ನಿಸುತ್ತದೆ.

**ಭಾಷಾ ತರಗತಿಗಳು ಎರಡು ರೂಪದ ಅಭಿವ್ಯಕ್ತಿಯಾದ ಬರವಣಿಗೆ ಮತ್ತು ಮಾತುಗಾರಿಕೆಯ ಮೂಲಕ ಅಭಿವ್ಯಕ್ತಿಸುವುದನ್ನು ಉತ್ಕೃಷ್ಟಗೊಳಿಸಬೇಕಿದೆ. ಈ ಪ್ರಕ್ರಿಯೆಯಲ್ಲಿ ಮಕ್ಕಳ ಸುತ್ತಮುತ್ತಲಿರುವ ಸನ್ನಿವೇಶಗಳು ಮತ್ತು ಅವರ ಸುಪ್ತ ಭಾವನೆಗಳೇ ಆಹಾರವಾದರೆ ಮಾತ್ರ ಮಕ್ಕಳು ಅಭಿವ್ಯಕ್ತಿಸಲು ಸಾಧ್ಯ ಎನ್ನುವ ಗಟ್ಟಿ ಹೇಳಿಕೆಯನ್ನು ಆತ್ಮವಿಮರ್ಶೆ ಮಾಡಿಕೊಳ್ಳೋಣ.**

**(ಸಂಚಿಕೆ 91, ಮಾರ್ಚ್ 2020)**

## ಇದೊಂದು ಆಕಸ್ಮಿಕವೇ? ಅಪರಾಧವೇ?

**–ನಾಗಾನಂದ ಜಿ.ವಿ. ಜಿಲ್ಲಾ ಸಂಸ್ಥೆ–ಮಂಡ್ಯ**

ಬರೋಡಾದಲ್ಲಿ ಸಾಕಷ್ಟು ವರ್ಷದಿಂದ ವಾಸಿಸುವ ನನಗೆ ಬರೋಡದ ಚಳಿ ಹೊಸತೇನೂ ಆಗಿರಲಿಲ್ಲ. ಆದರೆ ಚಳಿಗಾಲದಲ್ಲಿ ಬೆಳಗ್ಗೆ ಬೇಗ ಎಚ್ಚರವಾಗುವುದು ಕಷ್ಟ. ಆದ್ರೆ ನಾಳೆ ಮಾತ್ರ ಐದು ಗಂಟೆಗೆ ಏಳಬೇಕು ಎಂದು ಯೋಚಿಸಿ. ಬೃಂದಾ ಮಾಮಿಗೆ ನಾನು ನನ್ನ ರಿಸರ್ಚ್ ಸಲುವಾಗಿ ನಾಳೆ ಕೋರ್ಟಿಗೆ ಹೋಗಬೇಕು ಬೇಗ ಎಬ್ಬಿಸಿ ಅಂತ ಹೇಳಿಯೇ ಮಲಗಿದ್ದೆ.

ಬೆಳಗ್ಗೆ ಐದು ಗಂಟೆಗೆ ಮಾಮಿ ಬಂದು ಭಂಡೋ! ಅಂತ ಕರೆದಾಗಲೇ ನನಗೆ ಎಚ್ಚರವಾದದ್ದು, ಮಾಮಿ ಮಾತ್ರ ನನ್ನನ್ನು ಹೀಗೆ ಕರೆಯುತ್ತಿದ್ದರು. ನನ್ನ ಹೆಸರು ಪ್ರಕಾಶ್ ಭಂಡೋಪಾಧ್ಯಾಯ. ನಾನು ಶಿಕ್ಷಣ ಶಾಸ್ತ್ರದಲ್ಲಿ ಪಿ.ಹೆಚ್.ಡಿ ಮಾಡುವ ಸಲುವಾಗಿ ಮಾಮಿ ಮನೆಯಲ್ಲಿ ಪೇಯ್ಡ್ ಗೆಸ್ಟಾಗಿ ಉಳಿದುಕೊಂಡಿದ್ದೇನೆ.

ನಾನು 'ಮಕ್ಕಳಿಗೆ ಶಾಲೆಗಳಲ್ಲಿ ನೀಡಲಾಗುತ್ತಿರುವ ಶಿಕ್ಷೆ & ಅವುಗಳ ದುಷ್ಪರಿಣಾಮದ ಬಗ್ಗೆ' ಅಧ್ಯಯನ ಮಾಡುತ್ತಿದ್ದೆ. ಪಿ.ಹೆಚ್.ಡಿಯ ಭಾಗವಾಗಿ ಈ ಬಗ್ಗೆ ಇರುವ ಒಂದು ಕೇಸನ್ನು ಕೋರ್ಟ್‌ನಲ್ಲಿ (observe) ವೀಕ್ಷಣೆ ಮಾಡಬೇಕು.

ನಾನು ಬೇಡವೆಂದರೂ ನೀನು ಇದೇ ಕೇಸ್ ನೋಡಬೇಕು; ಅದು ನಿನ್ನ ಪಿ.ಹೆಚ್.ಡಿಗೆ ಅನುಕೂಲವಾಗುತ್ತದೆ ಅಂತ ನಮ್ಮ ಗೈಡ್ ಹೇಳಿದ್ದ ಕಾರಣಕ್ಕೆ ಒಂದು ವರ್ಷದಿಂದ ಈ ಕೇಸಿನ ವರದಿಗಾಗಿ ಕೋರ್ಟ್‌ಗೆ ಅಲೆಯುತ್ತಿದ್ದೇನೆ.

ಇವತ್ತು ಕೇಸಿನ ತೀರ್ಪಿನ ದಿನ.

ಮೊದಮೊದಲಿಗೆ ತುಂಬ ಸಲೀಸು ಎನ್ನಿಸಿದ್ದ ಕೇಸು, ಈಗ ತೀರ ಸಂಕೀರ್ಣ ಎಂಬ ಮಟ್ಟಿಗೆ ಬಂದು ನಿಂತಿದೆ.

ಮಾಮಿ ಮಾಡಿದ್ದ ಡೋಕ್ಲಾ ಬಾಯಿಗೆ ತುರುಕಿಕೊಂಡು ಬೈಕ್ ಹತ್ತಿ ಕೋರ್ಟ್ ಕಡೆಗೆ ಹೊರಟೆ. ಕೇಸ್ ಏನಾಗಬಹುದು? ಎಂಬ ಕುತೂಹಲ ನನ್ನನ್ನು ಕಾಡುತ್ತಿತ್ತು. ಬೈಕ್ ಕೋರ್ಟ್ ಕಡೆಗೆ ತಿರುಗಿತ್ತು. ಬೈಕ್ ಎಂಬ ಶಬ್ದ ತಲೆಗೆ ಬಂದ ಕೂಡಲೇ

ಅಯ್ಯೋ ಈ ಕೇಸ್ ಶುರುವಾದದ್ದು ಬೈಕಿನಿಂದಲೇ ಅಲ್ವಾ? ಅನ್ನಿಸಿತು.

ತಕ್ಷಣ ನನ್ನ ಅಲೋಚನೆ ಒಂದು ವರ್ಷದ ಹಿಂದಕ್ಕೆ ಸರಿದು ಹೋಯಿತು.

ಜಾವೆಡ್ಕರ್ ಜೀ! ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. ಚೊಹಟನ್.

ಇವರು ಹೆಸರಿಗೆ ತಕ್ಕ ಮುಖೋಪಾಧ್ಯಾಯರು, ಇವರು ಯಾವತ್ತು ಶಾಲೆಗೆ ಲೇಟಾಗಿ ಹೋದವರಲ್ಲ. ಮಕ್ಕಳೆಂದರೆ ಎಲ್ಲಿಲ್ಲದ ಪ್ರೀತಿ, ಮುಖ ನೋಡುವುದಕ್ಕೆ ಗಡುಸಾದರು ಮಕ್ಕಳ ಹೃದಯದವರು ಎಂದು ಊರಿನವರೆಲ್ಲಾ ಹೇಳುತ್ತಿದ್ದರು. ಪ್ರೀತಿಯಿಂದಲೇ ಚಾಚಾ ಮೇಸ್ಟ್ರು ಅಂತ ಕರೆಯುತ್ತಿದ್ದರು. ಮೇಸ್ಟ್ರು ಶಾಲೆಗೆ ಬೈಕಿನಲ್ಲಿ ಬರುತ್ತಿದ್ದರೆ ಸೋಂಬೇರಿ ಕಟ್ಟೆಯಲ್ಲಿ ಕುಳಿತ್ತಿದ್ದವರೆಲ್ಲ ಎದ್ದು ನಿಂತು ಗೌರವಿಸುತ್ತಿದ್ದರು. ಶಾಲೆ ಮುಗಿದ ನಂತರ ಮೇಸ್ಟ್ರು ಊರ ಜಗಳವನ್ನೆಲ್ಲಾ ಪರಿಹರಿಸುತ್ತಿದ್ದರು. ಊರಿನ ಪ್ರತೀ ಮನೆಯಲ್ಲೂ ಮೇಸ್ಟ್ರ ಹೆಸರಿಲ್ಲದೇ ಬೆಳಗಾಗುವುದಿಲ್ಲ ಎಂಬಂತಹ ಪರಿಸ್ಥಿತಿ ಇತ್ತು. ಮನೆಯಲ್ಲೂ ಹೆಂಡತಿಯರು ಗಂಡನಿಗೆ ಬೈಯ್ಯುವಾಗ ಮೇಸ್ಟ್ರನ್ನು ನೋಡಿ ಕಲಿಯಿರಿ ಎಂಬಷ್ಟು ಮಟ್ಟಿಗೆ ಮೇಸ್ಟ್ರ ಹೆಸರು ಊರಿನಲ್ಲಿಲ್ಲಾ ಚಿರಪರಿಚಿತ

ಇಂತಹ ಜಾವೆಡ್ಕರ್ ಜೀ ಇಂದು ಕೋರ್ಟ್‌ನ ಕಟೆಕಟೆಯಲ್ಲಿ ನಿಂತಿದ್ದಾರೆ !

ಮೊದಲ ದಿನ ಜಾವೆಡ್ಕರ್ ಸರ್ ಕೋರ್ಟಿನಲ್ಲಿ ಹೇಳಿದ್ದು ........

ಅವತ್ತು ಮುಂಜಾನೆ 9 ಗಂಟೆಗೆ ನಾನು ಎಂದಿನಂತೆ ಶಾಲೆಯ ಮುಂದೆ ಬೈಕ್ ನಿಲ್ಲಿಸಿ ಆಫೀಸ್ ರೂಮಿಗೆ ಬಂದಿದ್ದೆ. ಸ್ವಲ್ಪ ಹೊತ್ತಿಗೆ ಏನೋ ಢಮಾರ್! ಎಂಬ ಶಬ್ದ ಕೇಳಿ ಗಾಬರಿಯಿಂದ ಹೊರಗೆ ಓಡಿ ಬಂದೆ

ಕಿಶೋರ್ ಶ್ರಾವಸ್ತಿಯ ಕಾಲಿನ ಹೆಬ್ಬರಳು ಕಟ್ ಆಗಿ ರಕ್ತ ಸುರಿಯುತ್ತಿತು. ಜೋರಾಗಿ ಅಳುತ್ತಿದ್ದ,_. ನನ್ನ ಬೈಕು ಶಾಲಾ ಕಾಂಪೌಡ್ ಮುಂದೆ ಜಜ್ಜಿಯಾಗಿ ಬಿದ್ದಿತ್ತು. ಪಕ್ಕದಲ್ಲಿ ಬ್ರಿಜೇಶ್ ತನಗೂ ಈ ಘಟನೆಗೂ ಸಂಬಂಧವಿಲ್ಲ ಎಂಬಂತೆ ನಿಂತಿದ್ದ. ವಿಚಾರಿಸಿದಾಗ ನಾನು ಬೈಕಿನ ಕೀ ಬೈಕಿನಲ್ಲೇ ಮರೆತಿದ್ದ. ಈ ಬ್ರಿಜೇಶ್ ಕೀ ತಿರುಗಿಸಿ ಈ ಅವಂತರ ಸೃಷ್ಟಿಸಿದ್ದ.

ನನಗೂ ಕೋಪ ಬಂದು ಅವನಿಗೆ ಬೈದೆ. ಹೀಗೆ ಬೈಯ್ಯುವಾಗ ಈ ಹಿಂದೆಲ್ಲಾ ಇವನು ಮಾಡಿದ ಅವಾಂತರಗಳು ನೆನಪಿಗೆ ಬಂದು ಸ್ವಲ್ಪ ಜಾಸ್ತಿಯೇ ಕೋಪ ಉಕ್ಕಿ ಇವನು ಸರಿಹೋಗಲಿ ಎಂಬ ಕಾರಣಕ್ಕೆ ಜೋರಾಗಿಯೇ ಒಂದು ಏಟು ಹೊಡೆದೆ (ಇದನ್ನು ಹೇಳುವಾಗ ಮೇಸ್ಟ್ರ ಲಾಯರ್‌ಗೆ ಸ್ವಲ್ಪ ಕಸಿವಿಸಿ ಆದದನ್ನು ಕಂಡೆ. ಆದರೆ ಏನು ಮಾಡೋದು ಮೇಸ್ಟ್ರ ಬಯಲ್ಲಿ ಸುಳ್ಳು ಬರೋದಿಲ್ಲ) ಅವನ ಅಪ್ಪನಿಗೂ ಕರೆದು ಬುದ್ದಿ ಹೇಳಬೇಕು ಅಂದುಕೊಂಡು ಅವತ್ತೇ ಕರೆಸಿ ಅವರಿಗೂ ಬುದ್ಧಿ ಹೇಳಿದೆ. ಎಂದು ಹೇಳಿ ನಿಲ್ಲಿಸಿದರು.

ಮರುದಿನ ಒಂದು ದೊಡ್ಡ ದುರಂತವೇ ನಡೆದು ಹೋಗಿತ್ತು. ಬ್ರಿಜೇಶ್‌ನ ಹೆಣ ರೈಲ್ವೆ ಟ್ರ್ಯಾಕ್‌ನಲ್ಲಿ ಸಿಕ್ಕಿತ್ತು..

*ನಮ್ಮ ಮೇಸ್ಟ್ರು ನನ್ನ ತಂದೆಯ ಎದುರಿಗೆ ನನ್ನನ್ನು ಬೈದರು, ಹೊಡೆದರು ಅದಕ್ಕೆ ನನಗೆ ತುಂಬ ಬೇಜಾರು ಆಯ್ತು ಅದಕ್ಕೆ ಸಾಯುತ್ತಿದ್ದೇನೆ* ಎಂದು ಬ್ರಿಜೇಶ್ ಸಾಯುವ ಮುನ್ನ ಬರೆದ ಪತ್ರವೂ ಜೊತೆಯಲ್ಲಿ ಸಿಕ್ಕಿತು.

ಮುಂದೆ ಬ್ರಿಜೇಶ್ ಅಪ್ಪ "ವೃತ್ತಿ ನಿಂದನೆ ಮತ್ತು ಕೊಲೆಯ ಕೇಸ್" ನ್ನು ಮೇಸ್ಟ್ರ ಮೇಲೆ ಹಾಕಿದರು.

ಒಂದು ವರ್ಷದ ಅವಧಿಯಲ್ಲಿ ನಡೆದ ಕೇಸ್‌ನಲ್ಲಿ ಮೇಸ್ಟ್ರ ಪರವಾದ ವಕೀಲರು ಇದೊಂದು ಆಕ್ಸಿಡೆಂಟ್ (accident) ಎಂದು ಪರಿಗಣಿಸಬೇಕು. ಇದನ್ನು "ಪನಿಶಬಲ್ ಆ್ಯಕ್ಟ್" (Punishable Act) ಎಂದು ಪರಿಗಣಿಸಬಾರದು ಎಂಬ ವಾದವನ್ನು ಮಂಡಿಸಿದ್ದರು

ಬ್ರಿಜೇಶ್ ಕಡೆ ವಕೀಲರು ಇದು ಒಂದು ಕೊಲೆ ರೀತಿಯ ಅಪರಾಧವಾಗಿದ್ದು, ಭಾರತೀಯ ದಂಡ ಸಂಹಿತೆ 88 ಮತ್ತು 89ರ ಪ್ರಕಾರ ಮೇಸ್ಟ್ರಿಗೆ ಶಿಕ್ಷೆ ವಿಧಿಸಬೇಕು ಎಂದು ವಾದಿಸಿದ್ದರು.

ಇಷ್ಟೆಲ್ಲಾ ಯೋಚಿಸುವ ಹೊತ್ತಿಗೆ ನನ್ನ ಬೈಕ್ ಕೋರ್ಟಿನ ಆವರಣ ಪ್ರವೇಶಿಸಿತ್ತು. ನನಗೂ ಕೇಸ್ ಏನಾಗಬಹುದು? ಎಂದು ಗೊತ್ತಿರಲಿಲ್ಲ. ಎಲ್ಲರೂ ಬಂದಿದ್ದರು. ಕೋರ್ಟ್ ಅವರಣ ಪ್ರವೇಶಿಸಿ ಒಳಗೆ ಕುಳಿತುಕೊಂಡೆ.

ಮೊದಲಿಗೆ ಒಂದು ವರ್ಷ ಅವಧಿಗೆ ಏನೆಲ್ಲಾ ವಾದಗಳು ನಡೆದವು ಎಂಬ ವಿವರಣೆಯನ್ನು ನ್ಯಾಯಾಧೀಶರು ಓದಿ ಮುಗಿಸಿದರು. ನಂತರ ಪ್ರಮುಖ ತೀರ್ಮಾನ ಈ ಕೆಳಗಿನಂತೆ ಓದಲು ಶುರು ಮಾಡಿದರು

ಪ್ರಮುಖ ವಾದಗಳಾದ ಶಿಕ್ಷಕರು ಅತ್ಯಂತ ಒಳ್ಳೆಯವರು, ಸಮಾಜದ ಒಳಿತಿಗೆ ಕೆಲಸಮಾಡಿದ್ದಾರೆ ಎಂಬುದನ್ನು ಕೋರ್ಟ್ ನಿರ್ವಿವಾದವಾಗಿ ಒಪ್ಪಿಕೊಳ್ಳುತ್ತಾದರೂ ಮುಖ್ಯಶಿಕ್ಷಕರು ಇಂತಹ ಶಾಲಾ ಸಂದರ್ಭಗಳನ್ನುನ್ನು ನಿರ್ವಹಿಸಲು ಅವರಿಗೆ ತರಬೇತಿ ನೀಡಲಾಗಿದೆ ಎಂಬುದನ್ನು ಪರಿಗಣಿಸಿ ಇದನ್ನು ಒಂದು "ಆಕಸ್ಮಿಕ ಘಟನೆ" (accident) ಎಂದು ಪರಿಗಣಿಸುವ ಬದಲು "ಪನಿಶಬಲ್ ಆ್ಯಕ್ಟ್" (Punishable Act) ಎಂದು ಪರಿಗಣಿಸುತ್ತದೆ

ಇದನ್ನು ಕೇಳಿ ಮೇಸ್ಟ್ರು ಕುಸಿದು ಬಿದ್ದರು .......

ಆದರೆ ಇವತ್ತಿಗೂ ಒಂದು ಪ್ರಶ್ನೆ ಇನ್ನು ನನಗೆ ಹಾಗೆ ತಲೆಯಲ್ಲೇ ಉಳಿದಿದೆ,

ಹೌದು ಇಂತಹ ಸಂದರ್ಭಗಳನ್ನು ನಿರ್ವಹಿಸಲು ಕೊಟ್ಟಿರುವ ತರಬೇತಿ ಎಷ್ಟು ಸಫಲವಾಗಿದೆ?

**(ಸಂಚಿಕೆ 89, ಜನವರಿ 2020)**

# "ಚಿಮ್ಮಾ ಇದಲಾಯಿ"

**– ಡಾ. ಶಿವಲಿಂಗಪ್ಪ. ಬಸವಣ್ಣೋರ್, ಜಿಲ್ಲಾ ಸಂಸ್ಥೆ ಬೀದರ್**



ಶ್ರೀ ವಿಶ್ವಗುರು ಬಸವೇಶ್ವರರ ಪುತ್ಥಳಿ

ಚಿಮ್ಮಾಇದಲಾಯಿ ತಾ:ಚಿಂಚೋಳಿ ಜಿ:ಗುಲಬರ್ಗಾ ಈ ಊರಿನ ಜನರು ದಿನೇ–ದಿನೇ ಸಂಪೂರ್ಣವಾಗಿ ಅಕ್ಷರಸ್ಥರಾಗುತಿದ್ದಾರೆ. ಈ ಊರಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಹಾಗೂ ಈ ಊರಿನಲ್ಲಿ ಎಲ್ಲಾ ಜಾತಿಯ ಜನರು ವಾಸಿಸುತಿದ್ದಾರೆ. ಕಬ್ಬಲಿಗ, ಲಿಂಗಾಯತ, ಮುಸ್ಲಿಂ, ಪರಿಶಿಷ್ಟ ಜಾತಿ ಹೊಲೆಯ, ಮಾದಿಗ, ಕಂಬಾರ, ಬಡಿಗ, ಕುರುಬರು ಇಳಿಗೆಯವರು ವಾಸವಾಗಿದ್ದಾರೆ. ಈ ಊರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಿಂದೂ ಧರ್ಮದ ಜನಾಂಗದವರಿರುವವದರಿಂದ ಅವರ ಆಚಾರ–ವಿಚಾರಗಳು ವಿಧಿ–ವಿಧಾನಗಳು ರೂಢಿ ಸಂಪ್ರದಾಯಗಳು ನಂಬಿಕೆಗಳು ಹೆಚ್ಚಿನ ರೀಚತಿಯಲ್ಲಿ ಕಾಣಬಹುದಾಗಿದೆ. ಚಿಮ್ಮಾಇದಲಾಯಿ ಗ್ರಾಮವು ದಿನೆ–ದಿನೆ ಬೇಳೆಯುತ್ತಾ ಸಾಗುತ್ತಿದೆ. ಈ ಊರಿನಲ್ಲಿ ಎಲ್ಲರೂ ಸೇರಿ ಜೀವನ ಸಾಗಿಸುತ್ತಿದ್ದಾರೆ ಊರಿನಲ್ಲಿ ಯಾವುದೇ ಕಾರ್ಯಕ್ರಮ ನಡೆಯುವ ಸಂಧರ್ಭದಲ್ಲಿ ಎಲ್ಲಾ ಜಾತಿಯ ಜನರೂ ಸೇರಿ ಹಬ್ಬ ಹರಿದಿನಗಳಲ್ಲಿ ಪಾಲ್ಗೊಳ್ಳುತ್ತಾರೆ. ಹಬ್ಬ ಹರಿದಿನ ಜಾತ್ರೆ ಉತ್ಸವ ಮೆರವಣಿಗೆಯಲ್ಲಿ ಎಲ್ಲಾ ಜಾತಿಯ ಜನರೂ ಸೇರುತ್ತಾರೆ, ಎಲ್ಲರೂ ಸೇರಿ ಜಾತ್ರೆ ಉತ್ಸವವನ್ನು ಮಾಡುತ್ತಾರೆ ಎಲ್ಲರೂ ಒಂದೇ ಎಂಬ ಭಾವವನೆಯಿಂದ ಆತ್ಮೀಯವಾಗಿ ಬಾಳುತ್ತಾರೆ ಯಾವುದೇ ರೀತಿಯ ಜಾತಿ ಧರ್ಮ ಭೇದ ಭಾವ ಮಾಡುವುದಿಲ್ಲ.

ಈ ನಮ್ಮ ಊರಿನ ಜನರೂ ಮುಗ್ದ ಮನಸ್ಸಿನ ಜನರಾಗಿದ್ದಾರೆ. ಚಿಮ್ಮಾ ಇದಲಾಯಿ ಗ್ರಾಮವು ಈಗ ತೀವ್ರಗತಿಯಲ್ಲಿ ತಾಲೂಕಿನಂತೆ ಬೆಳೆಯುತ್ತಿದೆ. ಪೂರ್ವಕ್ಕೆ ಸಕ್ಕರೆ ಕಾರ್ಖಾನೆಯ ಕಟ್ಟಡ ಪೂರ್ಣಗೊಂಡಿದೆ. ಪಶ್ಚಿಮಕ್ಕೆ ದಸ್ತಾಪುರ ಎಂಬ ಹಳ್ಳಿ ಇದೆ. ಉತ್ತರಕ್ಕೆ ಮಲ್ಲಣದೇವರ(ವಾರಿ) ಗುಡ್ಡವಿದೆ. ದಕ್ಷಿಣಕ್ಕೆ ಹೊಸಳ್ಳಿ ಎಂಬ ಹಳ್ಳಿ ಇದೆ ಈ ನಮ್ಮ ಊರಿನ ವಿಸ್ತೀರ್ಣ 195 ಎಕರೆ 12 ಗುಂಟೆ ಇದೆ. ಒಟ್ಟು ಚಿಮ್ಮಾಇದಾಲಾಯಿಯ ಊರಿನ ವ್ಯಾಪ್ತಿ ಹೆಚ್ಚಿರುವುದರಿಂದ ಇದೊಂದು ಗ್ರಾಮವಾಗಿ ಕಂಡುಬರುತ್ತದೆ. ಗುಲ್ಬರ್ಗಾ ಜಿಲ್ಲೆಯಿಂದ 85 ಕಿಮಿ ದೂರವಿರುವ ಹಾಗೂ ಚಿಂಚೋಳಿ ತಾಲೂಕಿನಿಂದ 6 ಕಿಮಿ ದೂರವಿರುವುದರಿಂದ ಚಿಂಚೋಳಿಗೆ ಹೋಗುವ ಮುಖ್ಯರಸ್ತೆ ಬದಿಯಲ್ಲಿ ಇರುವುದರಿಂದ ತಾಲೂಕಿನ ಪ್ರಭಾವ ಬಿರುತ್ತಿದೆ. ಶಿಕ್ಷಣಕ್ಕಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊಂದಿದೆ. ಅಂಚೆ ಕಚೇರಿ ಊರಿನ ಜನರಿಗೋಸ್ಕರ ಚಿಕ್ಕ ಆಸ್ಪತ್ರೆ ಹೊಂದಿದೆ. ಗ್ರಾಮ ಪಂಚಾಯತಿ ಹೊಂದಿದೆ ರಸ್ತೆ ಸಾರಿಗೆ ವ್ಯವಸ್ತೆ ಅನೂಕೂಲಕರವಾಗಿದ್ದು ಊರಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯವಿದೆ ಮತ್ತು ನೀರಿನ ವ್ಯವಸ್ಥೆ ಈರನ ಹಳ್ಳ(ವೀರಭದ್ರೇಶ್ವರನ ಹಳ್ಳ)ವಿದೆ ಈ ಹಳ್ಳಕ್ಕೆ ಒಂದು ಇತಿಹಾಸವೆ ಇದೆ. ಭಾವಿಗಳು, ನಾಲಾ ಮತ್ತು ಕೊಳವೆ ಭಾವಿಗಳು ಇವೆ.



ಶ್ರೀ ವೀರಭದ್ರೇಶ್ವರ ರಥ

**ಊರ ಹೆಸರಿನ ಇತಿಹಾಸ:** ಊರಿನ ಐತಿಹಾಸಿಕತೆ ಬಗ್ಗೆ ಜನರಿಗೆ ಕೇಳಿದಾಗ ನಮ್ಮ ಊರಿನಲ್ಲಿ ಚಿಮ್ಮ(ಚಿಂಪು) ಕಲ್ಲು ಸಿಗುತ್ತವೆ. ಈ ಕಲ್ಲಿನಿಂದ ಕೊಡಲಿ ಮಸೆಯಲು ಮತ್ತು ಈಗ ನಾವು ಹಿಟ್ಟಿನ ಗಿರಣಿಯಲ್ಲಿ ಜೋಳ ಬಿಸಲು ಬಳಸುವ ಕಲ್ಲು ನಮ್ಮ ಊರಲ್ಲಿ ಹುಟ್ಟುತ್ತದೆ ಎಂದು ಹೇಳುತ್ತಾರೆ. ಚಿಮ್ಮ ಎಂದರೆ ಚೂಪು ಮಾಡುವ ಚೂಪಾದ ಎಂದರ್ಥ ಎಂದು ಹೇಳುತ್ತಾರೆ ಆದ್ದರಿಂದ ಚಿಮ್ಮಾಇದಲಾಯಿ ಎಂದಿದೆ. ಮೊದಲು ಈ ಊರು ಬಹಳ ವಿಸ್ತಾರವಾಗಿದ್ದಂತೆ ಕಾಣುತ್ತದೆ 1962 ಕ್ಕಿಂತ ಮುಂಚೆ ಇಲ್ಲಿ ರಜಾಕರ ಹಾವಳಿಯಿತ್ತು ರಜಾಕರು ನಮ್ಮ ಊರಿನ ಬಾಗದಲ್ಲಿ ಕರಿ(ಚಿಂಪ) ಕಲ್ಲುಗಳು ಹೆಚ್ಚಾಗಿ ಸಿಗುವುದರಿಂದ ಕಲ್ಲ ಇದಲಾಯಿ ಎಂದು ಹಾಗೂ ಮುಂದೆ ವಾರಿ (ಗುಡ್ಡ) ವಿರುವ ಪ್ರದೇಶವನ್ನು ಗುಡ್ಡದ ಇದಲಾಯಿ ಎಂದು ಕರೆಯುವ ವಾಡಿಕೆ ಇತ್ತು 1962 ರ ನಂತರ ಬಂದ ಸರ್ಕಾರ ನಮ್ಮ ಊರಿಗೆ ಚಿಮ್ಮಿದಲಾಯಿ ಮತ್ತು ಗುಡ್ಡದ ಇದಲಾಯಿಗೆ ನಾಗಇದಲಾಯಿ ಎಂದು ನಾಮಕರಣ ಮಾಡಿದೆ.

**ಆಚರಣೆಗಳು:** ವೀರಭದ್ರೇಶ್ವರ ಜಾತ್ರೆ, ಮರಗಮ್ಮನ ಹಬ್ಬ, ಹೋಳಿ, ದೀಪಾವಳಿ, ಬಸವಜಯಂತಿ, ಯಳ್ಳಾಮಸಿ, ಕಾರಹುಣ್ಣಿಮೆ, ಚಟ್ಟಿ ಅಮವಾಸೆ ಇತ್ಯಾದಿ ಆಚರಣೆಗಳು ಮಾಡುತ್ತಾರೆ.

**ಶ್ರೀ ವೀರಭದ್ರೇಶ್ವರನ ದೇವಾಲಯ:** ಈ ದೇವಾಲಯಕ್ಕೆ ಒಂದು ಪ್ರತೀತಿಯೇ ಇದೆ ಸುಮಾರು ನಾಲ್ಕೈದು ಶತಮಾನಗಳ ಹಿಂದೆ ನಮ್ಮ ಊರಿನ ಹಳ್ಳದ ಪಕ್ಕದಲ್ಲಿ ಶಂಬೋನೋರ್ ಬಸಂತ ಒಬ್ಬ ವಕ್ಕಲಿಗನ ಹೊಲಕ್ಕೆ ಹತ್ತಿಕೊಂಡೆ ಈ ಹಳ್ಳ ಹರಿಯುತ್ತದೆ. ಈ ಹಳ್ಳವು ಯೆಲ್ಲಪಳ್ಳಿಯಿಂದ ನಮ್ಮ ಊರಿನ ಕಡೆಗೆ ಹರಿದು ಬರುತ್ತದೆ. ಸುಮಾರು ಐದುವರೆ ಅಡಿ ಎತ್ತರವಿರುವ ಶ್ರೀ ವೀರಭದ್ರೇಶ್ವರನ ಮೂರ್ತಿ ಬೊರಲಾಗಿ ಬಿದ್ದಿತ್ತು. ಹೊಲದ ವಕ್ಕಲಿಗನಿಗೆ ದಿನಾಲೂ ಕನಸಿನಲ್ಲಿ ಬಂದು ಒಂದು ರೂಪ ನನ್ನನ್ನು ಕರೆದುಕೊಂಡು ಹೋಗು ನನ್ನನ್ನು ಕರೆದುಕೊಂಡು ಹೋಗು ಎನ್ನುವಂತೆ ಧ್ವನಿಯ ಕನವರಿಕೆ ಯಾಗುತ್ತಿತಂತೆ ಮತ್ತು ಪ್ರತಿದಿನ ಹೊಲಕ್ಕೆ ಅವರು ಹೋದಾಗಲೆಲ್ಲ ಅವನು ಕಂಡ ಕನಸು ಮತ್ತು ಆ ದ್ವನಿ ಮರುಕಳಿಸುವಂತೆ ಮೈಜುಮ್ಮೆನ್ನುವ ತಳಮಳವಾಗುತ್ತಿದ್ದರಿಂದ ತನ್ನ ಆಳುಮಕ್ಕಳನ್ನು ಕರೆಸಿ ಹಳ್ಳ ಪಕ್ಕದಲ್ಲೆಲ್ಲಾ ಶೋದಿಸಿದಾಗ ಈ ಮೂರ್ತಿ ಬೊರಲಾಗಿ ಬಿದ್ದಿತ್ತು ಅದನ್ನು ತಿರುವಿ ನೋಡಿದಾಗ ಶ್ರೀ ವೀರಭದ್ರೇಶ್ವರನ ರೂಪದ ಮೂರ್ತಿ ಕಂಡಿತು ಈ ಮೂರ್ತಿಯು ಸಿಕ್ಕ ಕಾರಣಕ್ಕಾಗಿ ಆ ಹಳ್ಳಕ್ಕೆ ಈರನ ಹಳ್ಳ ಎಂದು ಹೆಸರಿಡಲಾಗಿದೆ. ಊರಲ್ಲಿ ಈ ವಿಚಾರವಾಗಿ ಎಲ್ಲರೂ ಚರ್ಚಿಸಿ ಊರಿನ ಮಧ್ಯಭಾಗದಲ್ಲಿ ಶ್ರೀ ವೀರಭದ್ರೇಶ್ವರನ ದೇವಾಲಯ ಪ್ರತಿಷ್ಠಾಪಸಿದ್ದಾರೆ.



ಶ್ರೀ ವೀರಭದ್ರೇಶ್ವರ ಮೂರ್ತಿ

**ಜಾತ್ರೆ:** ಪ್ರತಿ ವರ್ಷ ಏಪ್ರಿಲ್ ಮೇ ತಿಂಗಳಲ್ಲಿ ಬರುವ ಬಸವ ಜಯಂತಿ ಮರುದಿನ ಅಥವಾ ಮಳ್ಳೆ ಮರುದಿನ ಶ್ರೀ ವೀರಭದ್ರೇಶ್ವರನ ಜಾತ್ರೆ ಐದು ದಿನಗಳವರೆಗೆ ನಡೆಯುತ್ತದೆ. ಜಾತ್ರೆಯ ಹಿಂದಿನ ದಿನ ಸಂಜೆ ದೀಪದ ರಥವನ್ನು ಊರಲ್ಲಿ ಪೂಜಿಸುತ್ತಾರೆ. ಮರುದಿನ ಬೆಳಿಗ್ಗೆ ಪುರವಂತರು ತಮ್ಮ ಅವತಾರದ ವಸ್ತ್ರ,ವಿಭೂತಿ,ಭಂಡಾರ,ರುದ್ರಾಕ್ಷಿ ಹಾಗೂ ಪ್ರತ್ಯಕ್ಷ ವೀರಭದ್ರರನ ರೂಪದಂತೆ ಆಯುಧಗಳನ್ನು ಹಿಡಿದ ಹತ್ತು ಹನ್ನೆರಡು ಜನರು ತಮ್ಮ ಪೂಜಾ ವಿಧಿ–ವಿಧಾನಗಳನ್ನು ಮುಗಿಸಿ ಹೊರಬಂದು ಪಲ್ಲಕ್ಕಿಯೊಂದಿಗೆ ದೇವಾಲಯದ ಕಡೆಗೆ ಆಯುಧಗಳನ್ನು ತಮ್ಮ ಗಲ್ಲದಲ್ಲಿ ತವಿದುಕೊಳ್ಳುತ್ತ, ಚುಚ್ಚಿಕೊಳ್ಳುತ್ತಾ ವಿವಿಧ ಭಂಗಿಯ ಆಟದೊಂದಿಗೆ ವಾದ್ಯಗಳೊಂದಿಗೆ ಹೋಗುತ್ತಾರೆ ಇವರ ಸುತ್ತ ಊರಿನ ಮುಖಂಡರೂ, ಸಿದ್ದಾರೂಡ ಮಠದ ಸ್ವಾಮಿಗಳು ಭಕ್ತಾದಿಗಳು,ಜನರು ಶ್ರೀ ವೀರಭದ್ರೇಶ್ವನ ಜೈಕಾರವನ್ನು ಹಾಕುತ್ತಾ ಮುಂದೆ ಸಾಗುತ್ತಾ ದೇವಾಲಯವನ್ನು ಪ್ರವೇಶಿಸುತ್ತಾರೆ ನಂತರ ದೇವಾಲಯದಲ್ಲಿ ಎಲ್ಲ ವಿಧಧ ಪೂಜೆಯನ್ನು ಮುಗಿಸಿಕೊಂಡು ಸ್ವಲ್ಪ ದೂರವಿರುವ ಅಗ್ಗಿಮದಾನ(ಕೆಂಡದ ಹಾಸಿಗೆ) ಕಡೆ ಹೋಗುತ್ತಾರೆ ಅಲ್ಲಿನ ಈ ಬೆಂಕಿಯ ಕಿಚ್ಚಿನ ಮೇಲೆ ನಡೆದುಕೊಂಡು ಪಲ್ಲಕ್ಕಿಯೊಂದಿಗೆ ನಡೆದುಕೊಂಡು ಹೋಗುತ್ತಾರೆ ನಂತರ ಭಕ್ತಾದಿಗಳು ಅದರ ಮೇಲೆ ನಡೆದುಕೊಂಡು ಒಡುತ್ತಾರೆ. ಸಂಜೆ ಐದು ಗಂಟೆಯ ಸುಮಾರಿಗೆ ರಥೋತ್ಸವ ಜರುಗುತ್ತದೆ ಊರಿನ ಎಲ್ಲಾ ಭಕ್ತಾದಿಗಳು ಮತ್ತು ಪೊಲಿಸ್ ಸಿಬ್ಬಂದಿಗಳು ಈ ಧಾರ್ಮಿಸಂಪ್ರದಾಯದಲ್ಲಿ ಪಾಲ್ಗೊಂಡಿರುತ್ತಾರೆ.

**ನಾಟಕ:** ಜಾತ್ರೆಯ ಪ್ರಯುಕ್ತ ಪ್ರತಿ ವರ್ಷ ಜನರ ಮನರಂಜನೆಗಾಗಿ ಉತ್ತಮ ನಾಟಕ ಕಂಪನಿಯವತಿಯಿಂದ ಊರ ಹೊರಗಿನ ಖಾಸಗಿ ಪ್ರೌಢ ಶಾಲೆಯ ಪಕ್ಕದಲ್ಲಿ ನಾಟಕ ಪ್ರದರ್ಶನವಿರುತ್ತದೆ.



ಶ್ರೀ ಹನುಮಾನ ದೇವಾಲಯ

**ಶ್ರೀ ಹನುಮಾನ ದೇವಾಲಯ:** ಊರಿನ ಶ್ರೀ ವೀರಭದ್ರೇಶ್ವರ ದೇವಾಲಯದ ಸ್ವಲ್ಪ ದೂರದಲ್ಲಿ ಒಂದು ಹನುಮಾನ ದೇವಾಲಯವಿದೆ ಇದು ಸುಮಾರು ಎರಡು ಶತಮಾನಗಳಷ್ಟು ಹಳೆಯದಾಗಿದೆ. ಪ್ರತಿ ವರ್ಷ ಹನುಮಾನ ಜಯಂತಿಯಂದು ಜಯಂತಿ ಉತ್ಸವ ನಡೆಯುತ್ತದೆ.

**ಮರಗಮ್ಮ ದೇವಾಲಯ:** ಈ ದೇವಾಲಯವು ಕೆಳವರ್ಗದವರ ಕೇರಿಯಲ್ಲಿ ಇದೆ ಎಲ್ಲಾ ಕೆಳವರ್ಗದವರು ಪ್ರತಿದಿನ ಪೂಜೆಮಾಡುತ್ತಾರೆ. ಪ್ರತಿ ಯುಗಾದಿ ಹಬ್ಬದ ಸಂದರ್ಬದಲ್ಲಿ ವಿಶೇಷ ಪೂಜೆ ಪುನಸ್ಕಾರ ಇಲ್ಲಿ ನಡೆಯುತ್ತದೆ. ಮೇಲ್ವರ್ಗದ ಜನರ ಕೇರಿಯಲ್ಲಿ ಏನಾದರೂ ಅನಾಹುತ ಅನಿಷ್ಟ ಸಂಬವಿಸಿದರೆ ಅವರೂ ಕೂಡಾ ಈ ಮರಗಮ್ಮ ದೇವಾಲಯಕ್ಕೆ ಬಂದು ದೀಪ ಹಚ್ಚಿ ಬೇಡಿಕೊಂಡು ತಮ್ಮ ತಪ್ಪುಗಳನ್ನು ಕ್ಷಮಿಸುವಂತೆ ಬೇಡಿಕೊಂಡು ಹೋಗುತ್ತಾರೆ

**ಹಾರಕೂಡ ಮುತ್ಯಾನ ಮಠ:** ಊರಲ್ಲಿ ಒಂದು ದೊಡ್ಡ ಆಲದ ಮರವಿದೆ ಆ ಆಲದ ಮರದ ಪಕ್ಕದಲ್ಲೆ ಈ ಹಾರಕೂಡ ಮುತ್ಯಾನ ಮಠವಿದೆ. ಊರಿನ ಜನರು ತಮ್ಮ ಕೆಲಸಕಾರ್ಯಗಳಲ್ಲಿ ಅಡೆತಡೆಗಳುಂಟಾದಲ್ಲಿ ಮತ್ತು ಅವರಿಗೆ ಮಾನಸಿಕ ತೊಂದರೆಯಿದ್ದರೆ ಈ ಮುತ್ಯನ ಹತ್ತಿರ ಬಂದು ಆರ್ಶಿವಾದ ಮತ್ತು ಅವರ ವಿಘ್ನದ ಪರಿಹಾರೋಪಾಯವನ್ನು ಕೇಳಿಕೊಂಡು ಆರ್ಶಿವಾದವನ್ನು ಪಡೆಕೊಂಡು ಹೋಗುತ್ತಾರೆ. ಯಳ್ಳಾಮಸಿ, ಮತ್ತು ಕಾರಹುಣ್ಣಿಮೆ: ಇವುಗಳ ದಿನದಂದು ಎಲ್ಲರು ಹೋಳಿಗೆ, ಕಡಬು,ತರತರಹದ ಪಲ್ಲೆ, ಚಟ್ನಿಗಳನ್ನು ಮಾಡಿಕೊಂಡು ತಮ್ಮ ತಮ್ಮ ಹೊಲಕ್ಕೆ ಹೋಗಿ ಊಟಮಾಡಿಕೊಂಡುಬರುತ್ತಾರೆ.



**ಬಸವಣ್ಣನ ಮೂರ್ತಿ**

ನಮ್ಮ ಊರಿನ ಜನರು ಸಂಪ್ರದಾಯಬದ್ದ ಆಚರಣೆ, ನಂಬಿಕೆ, ಆಚಾರ–ವಿಚಾರಗಳನ್ನು ತಮ್ಮ ಸರಳ ಜೀವನದ್ಲ್ಲಿ ಅಳವಡಿಸಿಕೊಂಡು ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ನಮ್ಮ ಊರಿನಲ್ಲಿ ಪುರವಂತರು, ಕಮ್ಮಾರರು, ಬಡಿಗೆತನ ಮಾಡುವವರು, ಭಜನೆಮೇಳ, ಹಲಗೆವಾದನ, ಬಾಜಿವಾದನ, ಚೌಡಿಕೆ, ನಾಡಿವೈದ್ಯ ಇತ್ಯಾದಿ ಕಲೆಗಳನ್ನು ತಮ್ಮ ಉಸಿರಾಗಿಸಿಕೊಂಡಿದ್ದಾರೆ. ಅವರವರ ಕಲೆಯಲ್ಲಿ ಸಿದಿ ಪಡೆದು ಕಲೆಯಲ್ಲಿ ಶ್ರೀಮಂತಿಕೆಯಿಂದ ಮೆರೆಯುತ್ತಿದ್ದಾರೆ. ಪುರವಂತರು ಪ್ರತ್ಯಕ್ಷ ವೀರಭದ್ರ ದೇವರ ಅವತಾರವೆಂದು ಊರಿನ ಜನರೆಲ್ಲಾ ನಂಬುತ್ತಾರೆ. ಆದ್ದರಿಂದ ಈ ಪುರವಂತರಿಗೆ ಊರಿನ ಜನರು ಜಾತ್ರೆ ಉತ್ಸವ ಇತ್ಯಾದಿ ಸಂಪ್ರದಾಯ ಆಚರಣೆಗಳಲ್ಲಿ ಅವರಿಗೆ ಬಟ್ಟೆ ಉಡುಗೆ ವಸ್ತ್ರಗಳನ್ನು ಹೊದಿಸಿ ಅವರಿಂದ ಆರ್ಶಿವಾದವನ್ನು ಪಡೆದುಕೊಂಡು ಬರುತ್ತಾರೆ.

ಕಮ್ಮಾರರು ಮತ್ತು ಬಡಿಗೆತನದವರ ಬಗ್ಗೆ ಹೇಳಬೇಕೆಂದರೆ ಇವರದು ಒಂದು ಚಿಕ್ಕ ಕಾರ್ಖಾನೆ, ಉದ್ಯಮಿ, ಗುಡಿ ಕೈಗಾರಿಕೆ ಎಂದೇ ಹೇಳಬಹುದು ಏಕೆಂದರೆ ಹಿಂದಿನ ದಿನಗಳಿಂದ ಹಿಡಿದ ಇವತ್ತಿನವರೆಗೆ ಈ ಕಮ್ಮಾರರು ಮತ್ತು ಬಡಿಗೆತನದವರು ಜನರ ವ್ಯವಸಾಯಕ್ಕೆ ಮತ್ತು ಜೀವನೋಪಾಯಕ್ಕೆ ಬೇಕಾಗುವ ಸಲಕರಣೆ ಸಾಮಾನು ಇತ್ಯಾದಿಗಳನ್ನು ಅವರು ಬೆವರು ಸುರಿಸಿ ತಮ್ಮ ಕಲೆಯಿಂದ ಬೇಕಾದ ರೂಪ ಆ ಲೋಹಕ್ಕೆ ಮತ್ತು ಬಡಿಗೆಗೆ ನೀಡಿ ಜನರಿಗೆ ನೀಡುತ್ತಾರೆ. ಆದ್ದರಿಂದ ಇಂದಿನ ದಿನಗಳು ಈ ಎಲ್ಲಾ ಸಲಕರಣೆಗಳು ಕೈಗಾರಿಕೆಯಲ್ಲಿ ಉತ್ಪತ್ತಿಯಾಗುತ್ತಲಿವೆ ಮತ್ತು ಪ್ಲಾಸಿಟಕ್ ಯುಗದ ಪ್ರಭಾವದಿಂದ ಈ ಲೋಕ ಪ್ಲಾಸ್ಟಿಕ್ ಲೋಕವಾಗುತ್ತಲಿ ಎಂದರೆ ತಪ್ಪಾಗಲಾರದು.



**ಚಿಮ್ಮ ಇದಲಾಯಿ ಮಸ್ಜಿದ್**

ಇನ್ನು ಈ ಜನಪದ ಕಲಾವಿದರ ವಾದ್ಯದ ಕಲಾವಿದರ ಬಗ್ಗೆ ಹೇಳಬೇಕೆಂದರೆ ನಮ್ಮ ಊರಲ್ಲಿ ಹಲಗೆ ವಾದಕರು, ಭಜನೆ ಮೇಳದವರು, ಬಾಜಿ ವಾದಕರು, ಜಾನಪದ ಗಾ□ಕರು, ಚೌಡಿಕೆಯವರು ತಮ್ಮ ಕಲೆಗಳಿಂದಲೇ ಗುರುತಿಸಿಕೊಳ್ಳುತ್ತಾರೆ. ಅವರ ಕಲೆಯೆಂದರೆ ಅವರಿಗೆ ಉಸಿರು ಕಲೆಯ ಪ್ರದರ್ಶನದ ಸಂದರ್ಭದಲ್ಲಿ ಅವರು ಆ ಕಲೆಯಲ್ಲಿ ತಲ್ಲಿನರಾಗಿ ಜನರನ್ನು ಮೈಮರೆಯುವಂತೆ ಕೆಲಸ ಮಾಡುತ್ತಾರೆ.

**ಜನಪದ ವೈದ್ಯರ** ಬಗ್ಗೆ ಹೇಳಬೇಕೆಂದರೆ ಈ ವೈದ್ಯರು ದೇವರ ಎರಡನೇ ರೂಪ ಮತ್ತು ಪ್ರತ್ಯಕ್ಷದೇವರು, ಅವರು ಊರಿನ ಜನರಿಗೆ ಬರುವಂತಹ ರೋಗರುಜಿನುಗಳನ್ನು ಕಾಯಿಲೆಗಳನ್ನು ತಮ್ಮ ಬೇರು, ಎಲೆ, ಕಾಯಿ,ಹೂವು ಇತ್ಯಾದಿ. ಗಿಡಮೂಲಿಕೆಗಳಿಂದ ರೋಗಸ್ಥರ ಅನಾರೋಗ್ಯವನ್ನು ಹೋಗಲಾಡಿಸಿ ಆರೋಗ್ಯವಂತರನ್ನಾಗಿ ಮಾಡುತ್ತಾರೆ. ಬಡವರ ಮನೆಯ ಊಟ ಚೆಂದ, ಶ್ರೀಮಂತರ ಮನೆ ನೋಟ ಚಂದ, ಎನ್ನುವ ಗಾದೆಯಂತೆ ಊರಿನಲ್ಲಿ ಶ್ರೀಮಂತ ಮತ್ತು ಬಡವರಿದ್ದರೂ ಅವರ ಆರ್ಥಿಕ ಮಟ್ಟಕ್ಕೆ ತಕ್ಕಂತೆ ಊರಲ್ಲಿ ಸಹಬಾಳ್ವೆಯಿಂದ ಬದುಕುತ್ತಾರೆ.

ಈ ಚಿಮ್ಮಾ ಇದಲಾಯಿ ಗ್ರಾಮದ ವಿವಿದ ಜನಪದ ಕಲಾ ಪ್ರತಿಭೆಗಳನ್ನು ಮುಗ್ದ ಮನಸ್ಸುಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ಕೇಳಿಕೊಂಡು ಈ ಕೀರು ಲೇಖನವನ್ನು ರಚಿಸಿದ್ದೆನೆ. ಅಲ್ಲಿಯೇ ಹುಟ್ಟು ಬೆಳೆದರೂ ಕೂಡಾ ಅವರೊಂದಿಗೆ ಮಾಹಿತಿ ಶೋಧನೆಯಲ್ಲಿ ತೊಡಗಿದಾಗ ಅವರ ಸಾಹಿತಿಕ, ಸಾಮಾಜಿಕ, ಸಾಂಸ್ಕೃತಿಕ, ಅನುಭವ ಪ್ರಪಂಚ ಬಹಳ ವಿಸ್ತಾರವಾಗಿದೆ.

**(ಸಂಚಿಕೆ 81, ಮೇ 2019)**

## ನಾನು 'ಬಯಲು'

-ಶಿವಕುಮಾರ ಸಿ ಎಸ್, ಜಿಲ್ಲಾ ಸಂಸ್ಥೆ-ಬಾಗಲಕೋಟೆ

ನಾನು, ನಾನೆಂದರೆ ಏನು?
ಕಾಣದ ಹಾಗೆ ಆತ್ಮ ಸಾಕಾರ?
'ಬಯಲು' ಬಟ್ಟೆಯ ಮಾಂಸರುದಿರ?
ಚಿತ್ತ ಹರಿವ ತೀರದ ಒಂಟಿ ನೌಕೆ?

ಮನದ ಕನ್ನಡಿಯೊಳು ಐದು ಮಾಯೆ
ಒಂದರ ಹಿಂದೊಂದು ಹಗ್ಗ ಜಗ್ಗಾಟ;
ಕನಸಿನಂಗಳದಿ ನೂರು ಕನವರಿಕೆ
ಒಂದರ ಮೇಲೊಂದು ಬಣ್ಣದೋಕುಳಿ
ಅಷ್ಟು-ಅಷ್ಟರ ನಡುವೆ ಸಿಕ್ಕಿದ್ದಿಷ್ಟೆ
ಉಳಿದವೆತ್ತಲೋ ಕಾಣೆ.

ತುಡಿವ ಎದೆಯೊಳಗೆ
ನೂರು ತಲ್ಲಣಗಳ ಜಲಪಾತ
ಜಿಗಿಯುತ್ತಲೇ ಇದೆ ಎಣೆ ಇಲ್ಲ;
ಹಿಡಿತ ತಪ್ಪಿದ ಜೀವ, ಬತ್ತಿ ಹೋದ ಭಾವ
ಗೊಣಗುತ್ತಲೇ ಇದೆ
'ಇದು ಬಂಡಿಯಲ್ಲ ಬದುಕೊ?'

ವಾರೆ ನೋಟದ ಸುಳಿಗೆ
ಕಂಡದ್ದೆಲ್ಲ ಹೂದೋಟ ಹರೆಯದಲಿ
ನಾ ದುಂಬಿ ನೀ ಜೇನು ಪ್ರಣಯದಲಿ;
ಕಾಲ ಉರುಳಿದ ಮೇಲೆ
ಸಾಕ್ಷಾತ್ಕಾರದ ಪಾಠ ಅಂಚಿನಲಿ
ಇಟ್ಟ ಹೆಜ್ಜೆಯ ಗುರುತು
ನೋಡುತ್ತಲೇ ಮಬ್ಬು-ಮಬ್ಬು ದಡದಲಿ.

ತೆರೆಗೆ ಸರಿಯುವ ಹೊತ್ತು
ಅವರಿವರ ಗೋಜಿಲ್ಲ
ಸುತ್ತೆಲ್ಲ ಸುಡುಗಾಡ ಕತ್ತಲು;
ಯಾರೋ ಕಾಣುವರಲ್ಲಿ ಬೆತ್ತಲು.

ತಾಳ ತಪ್ಪಿದ ಮೇಲೆ
ಮೇಳ ಮೆಚ್ಚುವರಾರು?
ಈಗ ಮತ್ತೆ ನಾನು
ಬಯಲೊಳು ಬರೆದ ಚಿತ್ತಾರ
ಬಣ್ಣವಿರದ ಆಕಾರ ನಿರಾಕಾರ!

(ಸಂಚಿಕೆ 50, ಅಕ್ಟೋಬರ್ 2016 )

# "ನಾವೂ ನಗುತ್ತೇವೆ."

**– ಲೋಹಿತ್ ಚಾಮನೂರು, ಜಿಲ್ಲಾ ಸಂಸ್ಥೆ–ಯಾದಗಿರಿ**

ಅಂದು ಜಿಲ್ಲಾ ಸಂಸ್ಥೆಯಲ್ಲಿ ಫೀಲ್ಡ ಮೇಜರಮೆಂಟ ಟೆಸ್ಟ ಓರಿಯೆಂಟೇಶನ್ನಿನ 3ನೇ ದಿನದ ಅಂತಿಮ ಘಟ್ಟವಾಗಿತ್ತು. ತಂಡವಾರು ಯಾರು ಯಾವ ಶಾಲೆಗೆ ಹೋಗಬೇಕೆಂಬುವದಾಗಿ ಪ್ರಕಟಿಸಲಾಗಿತ್ತು. ತಂಡದ ನಾಯಕರು ತಂಡದೊಡನೆ ಬಂದು ಪ್ರಶ್ನೆ ಪತ್ರಿಕೆಗಳನ್ನು ತೆಗೆದು ಕೊಂಡು ಹೋಗುವದೊಂದೆ ಬಾಕಿ ಉಳಿದಿತ್ತು. ಆಬ್ಬಾ! ಸಾಕಪ್ಪ ಅಂತೂ ಮುಗಿಯಿತು ಎಂದು ನಿಟ್ಟುಸಿರು ಬಿಟ್ಟೆವು. ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲು ಇಬ್ಬರಿಗೆ ಜವಬ್ದಾರಿ ಕೊಡಲಾಗಿತ್ತು. ನಾನು ನನ್ನ ತಂಡದ ಸದಸ್ಯರೊಡನೆ ಪ್ರಶ್ನೆಪತ್ರಿಕೆಗಳನ್ನು ತೆಗೆದು ಕೊಂಡು ಫಾರಂ ಗಳನ್ನು ಹಾಕಿಡಲು ಕವರ್ (ಪಾಕಿಟ್) ಗಳಿಗಾಗಿ, ಮಹಿಳಾ ಸದಸ್ಯರು ವಿತರಿಸುವಲ್ಲಿಗೆ ಹೋದೆವು.

'ಮೆಡಂ ಕವರ್ ಕೊಡಿ' ಎಂದೆ. "ಕೊಡಾಂಗಿಲ್ಲ ಇವು ಬಹಳ ಕಡಿಮೆ ಬಂದಿವೆ ಪ್ರಶ್ನೆ ಪತ್ರಿಕೆ ಎಲ್ಲಾ ತಂಡದವರು ತೊಗಂಡಾದ ಮೇಲೆ ಕವರ್ ಕೊಡೊದು" ಎಂದು ಪಟಪಟನೆ ಕಡ್ಡಿ ಮುರಿದು ಕೈಯಾಗ ಕೊಟ್ಟವರಂತೆ ನುಡಿದಳು. ಅದಾಗಲೆ ಸಮಯ ರಾತ್ರಿ 7:30 ಆಗಿತ್ತು.

"ನೋಡಿ ಮೇಡಂ, ನೀವೆಷ್ಟು ಕೊಡುತ್ತೀರೊ ಕೊಡಿ. ಉಳಿದಂತೆ ಪರ್ಯಾಯವಾಗಿ ನಾವು ವ್ಯವಸ್ಥೆ ಮಾಡಿಕೊಳ್ಳುತ್ತೇವೆ" ಎಂದು ಪುನಃ ನಾನು ಅಂಗಲಾಚಿದೆ. ಯಾವುದಕ್ಕೂ ಆಸಾಮಿ! ಜಪ್ಪೆನ್ನಲಿಲ್ಲ. ಅಷ್ಟರಲ್ಲಿ ನಮ್ಮ ಜಿಲ್ಲಾ ಸಂಸ್ಥೆಯ ಮುಖ್ಯಸ್ಥರು ಅಲ್ಲಿಗೆ ಬಂದರು ನನ್ನ ಸಪ್ಪೆ ಮುಖವನ್ನು ನೋಡಿ, ಬೆನ್ನು ಚಪ್ಪರಿಸಿ, ಏನು? ಎಂಬಂತೆ ಹುಬ್ಬೇರಿಸಿ, ಗೋಣು ಮೇಲೆ ಮಾಡಿದರು. ನಾನು ವೃತ್ತಾಂತವನ್ನೆಲ್ಲಾ ವಿವರಿಸಿದೆ. ಅವರು ರಾಜಿ ಮಾಡುವ ಗೋಜಿಗೂ ಹೋಗದೆ, ಇತ್ತ ತಮ್ಮ ಗೋಣನ್ನು ಉದ್ದವು ಹಾಕದೆ, ಅಡ್ಡವು ಅಲ್ಲಾಡಿಸದೆ ಮುಗಳ್ನಕ್ಕು ಮುಂದೆ ನಡೆದರು. ನನಗೆ ಏನೂ ಮಾಡಲು ತೋಚದೆ ಹಿಂದೆ ಸರಿದು, ಬೇರೆ ತಂಡದವರಿಗೆ ಕೇಳಲು ಅವಕಾಶ ಮಾಡಿಕೊಟ್ಟೆ. ಅವರಿಗೂ ಅವಳಿಂದ ಬಂದ ಉತ್ತರ... ನನಗೂ ಅವರಿಗೂ ವ್ಯತ್ಯಾಸವೇನಿರಲಿಲ್ಲ. ಬದಲಿಗೆ ಕವರಿನ ಬಂಡಲ್‌ಗಳ ಮೇಲೆ ಕುಳಿತು ಬಿಟ್ಟಳು. ಅವರೂ ಹಿಂದೆ ಸರಿದು ನಿಂತು ತಮ್ಮ ತಮ್ಮಲ್ಲಿಯೇ ಗುಸು, ಗುಸು ಮಾತನಾಡಿಕೊಳ್ಳುತ್ತಿದ್ದರು. ತಂಡದ ನಾಯಕಿ ಅವರಿಗೆ ಈಗೆ ಹೇಳುತ್ತಿದ್ದಳು " ನಾನು ಅವಳನ್ನು ಹಿಡಿದು ನೂಕುತ್ತೇನೆ, ನೀವು ಕವರಗಳನ್ನು ಕಿತ್ತು ಕೊಳ್ಳಿ" ಎಲ್ಲರೂ ನಗಲಾರಂಭಿಸಿದೆವು. ಮತ್ತೊಬ್ಬ ಅಲ್ಲಿಗೆ ಬಂದು ಕೇಳಿದ "ನನ್ನ ಮುಖನಾರ ನೋಡ್ರಿ, ನಿಮ್ಮ ಮಗಳ ಮದುವೆಯ ಅಕ್ಷತೆಯಲ್ಲಿ ಮಂತ್ರ ಹೇಳಲು ಆಚಾರಿಯಾಗಿ ಬಂದಿದ್ನಲ್ರಿ" ಎಂದು ಶುರು ಹಚ್ಚಿದ್ದನು. ಅದಕ್ಕವಳು ಕೋಪಗೊಂಡವಳಂತೆ "ಅದನ್ಯಾಕ ನೆನಪಿಸುತ್ತೀರಿ, ನೀವು ಬರದೆ ಬೇರೆ ಯಾರಾದರು ಬಂದರೆ, ನನ್ನ ಮಗಳ ಮದುವೆ ಆಗ್ತಿತ್ತು" ಅಂದಾಗ ಮತ್ತೆ ನಗುವದು ನಮ್ಮ ಸರದಿಯಾಗಿತ್ತು ('ಬಾಲ್ಯ ವಿವಾಹ ನಿರ್ಮೂಲನಾ' ನಾಟಕದಲ್ಲಿನ ಪಾತ್ರವನ್ನು ನೆನಪಿಸಿ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನವು ಕೈಗೂಡಲಿಲ್ಲ) ಈಗೆ ಬಂದವರೆಲ್ಲ ಕೇಳುವದು, ರೇಗಿಸುವದು, ತಾಳ್ಮೆ ಪರೀಕ್ಷಿಸುವದು ನಡದೇ ಇತ್ತು ಅವಳಂತೂ ಮತ್ತಷ್ಟು ಗಾಂಭೀರ್ಯತೆ ಮೆರಯುತ್ತಿದ್ದಳು.

ಮತ್ತೋರ್ವ ಸದಸ್ಯೆ ಬಂದಳು ಅವಳ ಹತ್ತಿರ ಹೋಗಿ ಆಕಡೆ,ಈಕಡೆ ಬಾಗಿ ನೋಡಿದಳು ಕವರಗಳು ಕಾಣಲಿಲ್ಲ. ಪರಸ್ಪರ ಇಬ್ಬರೂ ದುರುಗುಟ್ಟಿ ನೋಡಲಾರಂಭಿಸಿದರು, ಮಾತಿಲ್ಲ, ಕಥೆಯಿಲ್ಲ ನೀರವ ಮೌನ. ನೋಡತ್ತ ನಿಂತಿರುವ ಸದಸ್ಯೆ ತಕ್ಷಣವೆ "ನಾನೋಲ್ಲೆ...ನಾನೊಲ್ಲೆ..." ಎಂದು ಚೀರುತ್ತಾ ಓಡಿಹೋಗಿ ಕುಣಿದಾಡಲಾರಂಬಿಸಿದಳು. ನಾವೆಲ್ಲರೂ ಗಾಬರಿಯಿಂದ ಕಾಲಿಗೇನಾದರು ಕಚ್ಚಿತೆ! ಎಂದು ಅವಳಲ್ಲಿಗೆ ಹೋಗಿ ವಿಚಾರಿಸಿದೆವು, ಆಗ ಬಂದ ಉತ್ತರ "ಅದು ದೊಡ್ಡ ಮರ ಬೇರು ಬಿಟ್ಟಿದೆ.. ಬೇರು ಬಿಟ್ಟಿದೆ.."ಮತ್ತೆ ಕುಣಿಯತೊಡಗಿದಳು ಮತ್ತೆ ನಾವೆಲ್ಲರೂ ನಗೆ ಗಡಲಲ್ಲಿ ತೇಲಿಹೋದೆವು ಸಣಕಲು ದೇಹದವಳು ನಾನು ಅವಳನ್ನು ಅಲುಗಾಡಿಸುವಷ್ಟು ಶಕ್ತಿ ನನ್ನಲ್ಲಿಲ್ಲ ಎಂಬ ಅಸಹಾಯಕತೆ ಹಾಸ್ಯ ಪ್ರಜ್ಞೆ ಎದ್ದು ಕಾಣುತ್ತಿತ್ತು. ಈಗೆ ಬೇಸರ ಬಂದ ಕೊನೆಯ ಗಳಿಗೆಯು, ಹಾಸ್ಯ ಸನ್ನಿವೇಶವಾಗಿ ಮಾರ್ಪಾಡಾಗಿತ್ತು. ಮನೆಗೆ ಮರಳುವಾಗ ಮನಸ್ಸೆಲ್ಲಾ ಹಗುರವಾದಂತೆನಿಸಿತ್ತು.

**(ಸಂಚಿಕೆ 32, ಏಪ್ರಿಲ್ 2015)**

# ಡ್ರ್ಯಾಗನ್ ಫ್ಲೈ

–ಚಿಕ್ಕವೀರೇಶ ಎಸ್.ವಿ. ಜಿಲ್ಲಾ ಸಂಸ್ಥೆ ಬಾಗಲಕೋಟೆ

ಇತ್ತೀಚಿಗೆ ಬಿ ಬಿ ಸಿ ಡಾಕ್ಯುಮೆಂಟರಿ ನೋಡುವಾಗ ಕೀಟವೊಂದು ಕಣ್ಣಿಗೆ ಬಿತ್ತು. ಅದನ್ನು ನೋಡುತ್ತಾ ಇದ್ದ ಹಾಗೆ ನೆನಪುಗಳು ಬಾಲ್ಯಕ್ಕೆ ಜಾರಿತು. ಅದು ಗಾಳಿಯಲ್ಲಿಯೇ ಸರ್ಕಸ್ ಮಾಡುವ ಬಣ್ಣ ಬಣ್ಣದ ಡ್ರ್ಯಾಗನ್ ಫ್ಲೈ. ಅದಕ್ಕೆ ನಾವು ಕರಿತಾ ಇದದ್ದು 'ಮುದ್ದಿ ಕೋಲು' ಎಂದು. ಬೇಲಿ ಸಾಲುಗಳಲ್ಲಿ ಹಿಡಿಯಲಿಕ್ಕೆ ಹೋದಾಗ ಮುಳ್ಳು ಚುಚ್ಚಿಸಿಕೊಂಡು ಕಷ್ಟ ಪಟ್ಟು ಹಿಡಿದು ಅದರ ಬಾಲದಂತಹ ಹೊಟ್ಟೆಗೆ ಕಳ್ಳಿ ಹಾಲು ಹಾಕಿ ಉದ್ದನೆಯ ಹುಲ್ಲು ಅಚಿಟಿಸಿ ಹಾರೋಕೆ ಬಿಟ್ಟು ಖುಷಿ ಪಟ್ಟದ್ದು ಇನ್ನು ಕಣ್ಣ ಮುಂದೆಯೇ ಇದೆ. ಸುಮ್ಮನೆ ಆಡಿ ಬಿಡದೆ ಕತ್ತು ಮುರಿದು ಆಪರೇಷನ್ 'ಮುದ್ದಿ ಕೋಲು' ಮಾಡಿ ಅಮ್ಮನ ಹತ್ತಿರ ಹಿಂಸೆ ಕೊಡಬೇಡಿ ಅಂತ ಬಯ್ಯಿಸಿಕೊಂಡಿದ್ದು ಇದೆ. ನಮ್ಮ ಬೇರೆ ಬೇರೆ ಭಾಗದ ಗೆಳೆಯರನ್ನು ವಿಚಾರಿಸಿದಾಗ ಅದಕ್ಕೆ ಹಾಂತೆ ಎಂದು, ಪೀಟಿ ಎಂದು, ಹೆಲಿಕ್ಯಾಪ್ಟರ್ ಚಿಟ್ಟೆ ಎಂದು ಕರೆಯುತ್ತಾರೆ ಅಂತ ತಿಳಿಯಿತು. ನಮ್ಮ ಬಾಲ್ಯದ ನೆನಪಿನ ಭಾಗವಾದ ಇದರ ಬಗ್ಗೆ ಹುಡುಕಿದಾಗ ಸಿಕಿದ್ದು ಕೆಲವು ಕೂತುಹಲಕಾರಿ ಮಾಹಿತಿ.



ಡ್ರ್ಯಾಗನ್ ಫ್ಲೈ ಇದು 300 ಮಿಲಿಯನ್ ವರ್ಷಗಳು ಅಂದರೆ ನಮಗಿಂತ ತುಂಬಾ ಹಿಂದೆಯೇ ನಮ್ಮ ಭೂಮಿ ಮೇಲಿದ್ದ ಜೀವಿ. ಮೊದಲ ಹಾರುವ ಕೀಟ ಕೂಡ ಹೌದು. ಶಿಲಾಯುಗದ ಕಾಲದಲ್ಲೇ ಇದು ಇದ್ದ ಬಗ್ಗೆ ಕುಹುರುಗಳು ಪತ್ತೆ ಆಗಿವೆ. ಈಗ ಸುಮಾರು ಪ್ರಪಂಚದಲ್ಲಿ 5000 ಪ್ರಭೇದಗಳನ್ನು ಮತ್ತು ನಮ್ಮ ದೇಶದಲ್ಲಿಯೇ 500 ಪ್ರಭೇದಗಳನ್ನು ಗುರುತಿಸಲಾಗಿದೆ. ಇದಕ್ಕೆ 4 ರೆಕ್ಕೆಗಳು ರೆಕ್ಕೆಗಳಿದ್ದು ಹಾರುವುದರಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿದ ಇದು ದಿನವೆಲ್ಲಾ ಭೂಮಿಗೆ ಬರದೆ ಹಾರಬಲ್ಲದು. ಗಂಟೆಗೆ ಸುಮಾರು 97 ಕಿಲೋಮೀಟರು ವೇಗದಲ್ಲಿ ಚಲಿಸುವುದು ಅಲ್ಲದೆ ಗಾಳಿಯಲ್ಲಿಯೇ ಬೇಟೆ ಆಡಬಲ್ಲದು.ಯಾವುದೇ ದಿಕ್ಕಿನಲ್ಲಿ ಅಂದರೆ ಮೇಲೆ ಕೆಳಗೆ ಎಡ ಬಲ ಮುಂದೆ ಹಿಂದೆ ಈಗೆ 6 ದಿಕ್ಕಿನಲ್ಲೂ ಯಾವುದೆ ಸಮಯದಲ್ಲಿ ಒಂದೇ ಕ್ಷಣದಲ್ಲಿ ದಿಕ್ಕು ಬದಲಿಸುವ ಸಾಮರ್ಥ್ಯ ಡ್ರ್ಯಾಗನ್ ಫ್ಲೈಗೆ ಇದೆ. ಇವು ಒಟ್ಟು 6 ಕಾಲುಗಳನ್ನು ಹೊಂದಿದ್ದು ಮುಳ್ಳುಗಳ ತರಹದ ರೋಮವನ್ನು ಹೊಂದಿವೆ ಆದ್ದರಿಂದಲೇ ಗಾಳಿಯಲ್ಲಿಯೇ ಬೇಟೆ ಇಡಿದು ತಿನ್ನಲಿಕ್ಕೆ ಸಾಧ್ಯ ಆಗುವುದು.

ಇದರಲ್ಲಿ ಮುಖ್ಯವಾಗಿ ಮೂರು ಭಾಗಲಿದ್ದು ತಲೆ, ಎದೆ ಮತ್ತು ಹೊಟ್ಟೆ ಎಂದು ವಿಭಾಗಿಸಬಹುದು. ಮುಖ್ಯವಾಗಿ ತಲೆಯ ಭಾಗ ವಿಶೇಷವಾಗಿದ್ದು. ಬಹುತೇಕ ಭಾಗ ಕಣ್ಣುಗಳಿಂದಲೇ ಕೂಡಿದೆ. ಇವುಗಳ ಸಂಯುಕ್ತ ಕಣ್ಣುಗಳು ಒಟ್ಟು 30000 ಸಾವಿರ ಒಮಿಟಿಡಿಯಾಗಳನ್ನು ಹೊಂದಿದೆ. ಪ್ರತಿಯೊಂದು ಕೂಡ ಕಾಣುವ ಚಿತ್ರಗಳನ್ನು ಮೆದುಳಿಗೆ ವರ್ಗಾಹಿಸುತ್ತವೆ. ಇಷ್ಟು ಸಾಮರ್ಥ್ಯ ಇರುವುದರಿಂದಲೇ ಚಲಿಸುತ್ತಿರುವ ಕೀಟಗಳನ್ನು ಗಾಳಿಯಲ್ಲಿ ಹಿಡಿಯಲು ಸಾದ್ಯ ಆಗುವುದು. ಮತ್ತು 360 ಡಿಗ್ರಿ ದಿಕ್ಕಿನಲ್ಲೂ ನೋಡುವ ಸಾಮರ್ಥ್ಯ ಹೊಂದಿದೆ. ಹಾಗಾಗಿಯೇ ಇದನ್ನು ಹಿಡಿಯುವುದು ಚೂರು ಕಷ್ಟ.

ಗಂಡು ಡ್ರ್ಯಾಗನ್ ಫ್ಲೈ ತನ್ನದೇ ಆದ ವಾಸಸ್ಥಳ ವನ್ನು ಗುರುತಿ[1]ಕೊಂಡಿರುತ್ತೆ. ಅಲ್ಲಿ ಶುದ್ದ ನೀರು ಆಹಾರ ಮೊಟ್ಟೆ ಇಡಲು ಜಾಗ ಎಲ್ಲಾ ಇರುವಂತೆ ನೋಡಿ ಗುರುತಿ[1]ರುತ್ತೆ ಮತ್ತು ಈ ಜಾಗ ಸಣ್ಣದು ದೊಡ್ಡದು ಆ ಡ್ರ್ಯಾಗನ್ ಫ್ಲೈ ಮೇಲೆ ಮತ್ತು ಅದರ ಸ್ಪರ್ದಿಗಳ ಮೇಲೆ ಅವಲಂಬಿತವಾಗಿರುತ್ತೆ. ಯಾವುದಾದರು ಗಂಡು ಪ್ರವೇಶ ಮಾಡಿದಲ್ಲಿ ಅದರ ಜೊತೆ ಜಗಳಕ್ಕೆ ನಿಲುತ್ತೆ ಆದರೆ ಹೆಣ್ಣು ಪ್ರವೇಶ ಮಾಡಿದಲ್ಲಿ ಅದನ್ನು ಒಲಿ[1]ಕೊಳ್ಳಲು ಪ್ರಯತ್ನಿಸುತ್ತೆ. ಕೆಲವೊಂದು ಬಾರಿ ಹೆಣ್ಣು ಡ್ರ್ಯಾಗನ್ ಫ್ಲೈ ಗಳಿಗೆ ಈ ಗಂಡು ಡ್ರ್ಯಾಗನ್ ಫ್ಲೈಗಳು ಆಹಾರವನ್ನು ಕೂಡ ಹುಡುಕಲು ಬಿಡದೆ ತೊಂದರೆ ಕೊಡುತ್ತವೆ. ಅದಕ್ಕೆ ಕೆಲವೊಂದು ಪ್ರಬೇದದ ಹೆಣ್ಣು ಡ್ರ್ಯಾಗನ್ ಫ್ಲೈ ಗಳು ಸತ್ತಂತೆ ನಟಿಸಿ ಇವುಗಳಿಂದ ಪಾರಗುತ್ತವೆ. ಹೆಣ್ಣು ಆ ಜಾಗದಲ್ಲಿ ಮೊಟ್ಟೆಗಳನ್ನು ಇಡಲು ಆ ಜಾಗದ ಗಂಡುನೊಡನೆ ಕೂಡುವುದು ಅವಶ್ಯ. ಗಂಡು ಹೆಣ್ಣು ಡ್ರ್ಯಾಗನ್ ಫ್ಲೈ ಗಳು ಹೃದಯ ಆಕಾರದಲ್ಲಿ ವಿಶೇಷ್ವವಾಗಿ ಸಂದಿಸಿದ ಮೇಲೆ. ಹೆಣ್ಣು ಮೊಟ್ಟೆಯನ್ನು ನೀರಿನಲ್ಲಿ, ನೀರಿನದಡದಮೇಲೆ ಮತ್ತು ಮರದಮೇಲೆ ಇಡುತ್ತವೆ (ಪ್ರತಿ ಪ್ರಭೇದದಲ್ಲೂ ಬೇರೆ ಸ್ಥಳದಲ್ಲಿ). ಈ ಮೊಟ್ಟೆಗಳು ನೀರಿನಲ್ಲಿ 2 ರಿಂದ 5 ವಾರಗಳಲ್ಲಿ ಒಡೆದು ಲಾರ್ವವು ಹೊರಗೆ ಬರುತ್ತದೆ. ಹೊರ ಬಂದ ಮೇಲೆ ಸಾಕಷ್ಟು ಸುರಕ್ಷಿತ ಪೊರೆಗಳನ್ನು ಕಳಚಿ ಹೊಸ ರೂಪ ಪಡೆಯುತ್ತಾ ಅದು ವರ್ಷಗಟ್ಟಲೆ ನೀರಿನಲ್ಲೇ ಕೆಲವು ಕೀಟಗಳನ್ನು ಬೇಟೆ ಮಾಡಿ ಜೀವನ ಮಾಡುತ್ತದೆ. ಅದರ ಜೀವನ ಚಕ್ರದ ಹೆಚ್ಚಿನ ಅವದಿ ನೀರಿನಲ್ಲೇ ಕಳೆಯುತ್ತದೆ



ಕೆಲವೊಂದು ಡ್ರ್ಯಾಗನ್ ಫ್ಲೈ ಲಾರ್ವಗಳು 3 ವರ್ಷದ ವರೆಗೂ ನೀರಿನಲ್ಲೇ ಇರುತ್ತವೆ. ಗಿಲ್ಸ್ ಎಂಬ ಭಾಗಗಳ ಸಹಾಯದಿಂದ ಇದು ನೀರಿನಲ್ಲೇ ಉಸಿರಾಡುವ ಸಾಮರ್ಥ್ಯ ಹೊಂದಿರುತ್ತದೆ. ಲಾರ್ವದಿಂದ ಇವು ಪ್ರೌಢವಸ್ಥೆಗೆ ರೂಪಾಂತರಗೊಳ್ಳಬೇಕಾದಾಗ ಲಾರ್ವಗಳು ನೀರಿನಿಂದ ತಲೆಯನ್ನು ಹೊರ ಹಾಕಿ ಉಸಿರಾಡಲು ಪ್ರಯತ್ನಿಸುತ್ತವೆ. ನಂತರ ನೀರಿನಿಂದ ಹೊರ ಬಂದು ಲಾರ್ವದ ಕವಚದಿಂದ ತಲೆಯ ಹಿಂಬಾಗದ ದುರ್ಬಲ ಚರ್ಮದ ಭಾಗದಿಂದ ಡ್ರಾಗನ್ ಫ್ಲೈ ಹೊರಗೆ ಬರುತ್ತದೆ. ನಂತರ ಅದು ತನ್ನ ದೇಹದ ಭಾಗಗಳನ್ನು ಸಡಿಲಿಸಿಕೊಂಡು ಹಾರಲು ಸಿದ್ದ ಆಗುತ್ತದೆ. ಪ್ರೌಡವಸ್ಥೆಯಲ್ಲಿ ಡ್ರ್ಯಾಗನ್ ಫ್ಲೈ ಜೀವಿತಾವದಿ ಕೇವಲ ವಾರದಿಂದ ತಿಂಗಳವರೆಗೆ ಮಾತ್ರ ಆದರೊಳಗೆ ಮತ್ತೆ ಸಂತಾನೋತ್ಪತ್ತಿ ಮಾಡಿ ಹೊಸ ಜೀವನಚಕ್ರಕ್ಕೆ ನಾಂದಿ ಹಾಡುತ್ತದೆ.  ಇವತ್ತು ನಾವು ಅವುಗಳ ಅವಾಸನ್ನು ಕಡಿಮೆ ಮಾಡಿ–ರೋದರಿಂದ ಅವುಗಳ ಸಂತತಿ ಕೂಡ ಕಡಿಮೆ ಆಗಿರೋದು ದುರಂತವೇ ಸರಿ. ಜೀವ ವೈವಿದ್ಯತೆ ಬಗ್ಗೆ ಅರಿವು ಮೂಡಿಸುವ ಮತ್ತು ಅವುಗಳ ಅವಾಸವನ್ನು ರಕ್ಷಿಸುವ ಕೆಲಸ ಆಗಬೇಕಿದೆ.

**(ಸಂಚಿಕೆ 60, ಆಗಸ್ಟ್ 2017)**

## ಪದೇ ಪದೇ ಕಾಡುವ ಪ್ರಸಂಗಗಳು

**– ಹಮೀದ್ ಮಂಜೇಶ್ವರ್, ಜಿಲ್ಲಾ ಸಂಸ್ಥೆ ಕೊಪ್ಪಳ**

ಬಹಳ ಹಿಂದಿನ ನೆನಪು. ನಾನು ಪ್ರಾಥಮಿಕ ತರಗತಿಯಲ್ಲಿ ಕಲಿತ ಹಾಡದು. ಬೀಸೊ ಕಲ್ಲು ಮುಂದೆ ಕುಳಿತ ಆ ಕೆಲಸದಾಕೆ ಹೆಣ್ಣುಮಗಳು ರಾಗಿ ಬೀಸುತ್ತಾ ಕಣ್ಣೀರು ಸುರಿಸುತ್ತಿದ್ದಳು. ಅದನ್ನು ಕಂಡ ಮನೆಯೊಡತಿ ಆಕೆಯನ್ನು ಯಾಕೆ ಅಳುತ್ತೀ ಎಂದು ವಿಚಾರಿಸುತ್ತಾಳೆ. ರೋಗ ಹಿಡಿದು ಮಲಗಿದ ಗಂಡನ ನೆನೆದು ಅಳುಬಂತೇ, ದಂಡಿಗೆ ಹೋದ ಮಗ ಬಾರದಿದ್ದುದರ ನೋಡಿ ಅಳುಬಂತೇ, ಮದುವೆಯಾಗದಿರುವ ಪ್ರಾಯದ ಮಗಳ ನೆನೆದು ಅಳುಬಂತೇ, ಸದಾ ಕಾಡುವ ಬಡತನವ ನೆನೆದು ಅಳುಬಂತೇ ಎಂದು ವಿಚಾರಿಸುತ್ತಾಳೆ. ಆಗ ಆಕೆ ಹೇಳುತ್ತಾಳೆ ಇದಾವುದು ಅಲ್ಲ. ನನಗಿರುವ ಕಷ್ಟವನ್ನೇ ನನಗೆ ನಿಭಾಯಿಸಲಿಕ್ಕಾಗುವುದಿಲ್ಲ. ಮತ್ತೆ ಇಷ್ಟೂ ಜನರ ಕಷ್ಟಗಳನ್ನು ನಿಭಾಯಿಸುವ ಆ ದೇವರ ಪಾಡೇನು ಎಂಬುದ ನೆನೆದು ಅಳುಬಂತು. ಜನಪದರು ಕಟ್ಟಿದ ಈ ಹಾಡು ನನಗೆ ಮೌಲ್ಯವನ್ನು ಕಲಿಸಿದ 'ಮಹಾನ್ ಕೃತಿ'. ತನ್ನನ್ನು ಮಾತ್ರ ನೋಡುವ ಸ್ಥಿತಿಯಿಂದ ತನ್ನಿಂದ ಆಚೆಗೆ ಕಾಳಜಿ ವಹಿಸುವ ಪರಿಯನ್ನು ಹೇಳಿಕೊಟ್ಟ ಪ್ರಸಂಗವದು.

ನನಗೆ ಇವತ್ತಿಗೂ ಪದೇ ಪದೇ ಕಾಡುವ ಚಿತ್ರಣವಿದು. ತನ್ನೆಲ್ಲಾ ಕಷ್ಟಗಳನ್ನು ನುಂಗಿ ಪರರ ಬಗೆಗೆ ಚಿಂತಿಸುವ ಪರಿ ಇದೆಯಲ್ಲಾ. ಬಹುಶ: ಹಳ್ಳಿಗಾಡಿನ ಮುಗ್ದ ಹೆಣ್ಣುಮಕ್ಕಳಿಗೇ ಇದು ಸಾಧ್ಯವೇನೋ? ಆದರೆ ಆಕೆಯ ಮೂಲಕ ಆ ಕವಿ ಬದುಕನ್ನು, ಸಮಾಜವನ್ನು ನೋಡುವ ರೀತಿಯನ್ನು ನನಗೆ ಬೋಧಿಸಿಬಿಟ್ಟ/ಳು. ಬದುಕು ಸಂಪೂರ್ಣ ವೈಯಕ್ತೀಕರಣಗೊಳ್ಳುವ, ವೈಯಕ್ತಿ ಹಿತಾಶಕ್ತಿಯಲ್ಲಿ ಮುಳುಗುವ ಸಂದರ್ಭದಲ್ಲಿ ಮೀರಿ ಅದರಿಂದಾಚೆಗೆ ಹೋಗುವ ಮೌಲ್ಯವನ್ನು ನೀಡಿತು.

ನಾನಾಗ ಪದವಿ ಮುಗಿಸಿ ರಜಾ ಕಾಲದಲ್ಲಿದ್ದ ಸಮಯ. ಸಾದಾರಣವಾಗಿ ನಾವು ಕೆಲವು ಗೆಳೆಯರು ನಮಗೆ ಸಮಯ ಸಿಕ್ಕಿದಾಗಲೆಲ್ಲಾ ಹತ್ತಿರದ ಗಾಂಧಿ ಪ್ರತಿಷ್ಠಾನ ನಡೆಸುವ ಗ್ರಂಥಾಲಯಕ್ಕೆ ಹೋಗಿ ಓದುವ ಅವ್ಯಾಸವಿತ್ತು. ಬಹಳ ಸರಳವಾಗಿ ವಿನ್ಯಾಸಗೊಳಿಸಿದ ಗ್ರಂಥಾಲಯವದು. ಕೆಲವು ಬೆಂಚುಗಳು ಟೇಬಲ್ಲುಗಳು. ಅದನ್ನು ನೋಡಿಕೊಳ್ಳುತ್ತಿದ್ದುದು ಗಾಂಧಿವಾದಿಗಳಾದ ಹಿರಿಯ ಜೀವಗಳು. ಹಾಗೆ ಒಂದು ದಿನ ಬೆಂಚಿನ ಒಂದು ತುದಿಯಲ್ಲಿ ಕುಳಿತು ಓದುತ್ತಿದ್ದೆ. ನನ್ನ ಕಾಲು ಬೆಂಚಿಯಿಂದಾಚೆಗೆ ಚಾಚಿತ್ತು. ಅಂದು ಆ ಗ್ರಂಥಾಲಯವನ್ನು ನೋಡಿಕೊಳ್ಳುತ್ತಿದ್ದ ಆ ಹಿರಿಯರು ನನ್ನ ಕಾಲಿಗೆ ಎಡವಿದರು. ಕಾಲು ಪಕ್ಕಕ್ಕೆ ಸರಿಸಿ ಕ್ಷಮಿಸಿ ಎಂದೆ. ತಕ್ಷಣ ಅವರು ಇಲ್ಲ ನನ್ನದೇ ತಪ್ಪು, ನಾನು ನೋಡಿ ನಡೆಯಬೇಕಿತ್ತು ಎಂದರು. ಅದು ಅವರ ಪ್ರಾಮಾಣಿಕ ಮಾತಾಗಿತ್ತು. ಆದರೆ ನಿಜವಾಗಿಯೂ ನನ್ನ ತಪ್ಪಾಗಿತ್ತು. ನಾನು ಉಢಾಪೆಯಿಂದ ಕಾಲು ಸರಿಸಿಟ್ಟಿದ್ದಕ್ಕೆ ಅವರು ಎಡವಿದ್ದರು. ಅವರು ತಪ್ಪನ್ನು ತನ್ನ ಮೇಲೆ ಎಳೆದುಕೊಳ್ಳುವ ಮೂಲಕ ನನಗೆ ತಾತ್ವಿಕವಾಗಿ ಹೊಡೆತ ನೀಡದ್ದರು. ಬಹುಶ ವಿನಯವನ್ನು ಕಲಿಸಿಕೊಟ್ಟ ಪ್ರಸಂಗವದು. ಮಾಡಿದ ತಪ್ಪನ್ನು ಬೇರೆಯವರ ಮೇಲೆ ಹೊರಿಸವ ಸಂಭವಗಳಿರುವ ಸಂದರ್ಭದಲ್ಲಿ ಅವರ ಆ ಮಾತು ನನ್ನನ್ನು ಬದುಕಿನುದ್ದಕ್ಕೂ ಸದಾ ಜಾಗೃತವಾಗಿಡಲು ಸಹಕರಿಸಿದೆ. ಇಂದಿಗೂ ನಾನು ಬಸ್ಸಲ್ಲಿ ಕುಳಿತಾಗ ನನ್ನ ಕಾಲು ಸಿಟಿನಿಂದ ಆಚೆಗೆ ಇದೆಯೇ ಎಂದು ಖಚಿತಪಡಿಸಿಕೊಳ್ಳುತ್ತೇನೆ.

ಬಹುಶ: ಮೌಲ್ಯಗಳನ್ನು ಹೇಳಿಕೊಡುವ ರೀತಿಯೇ ಇದೇನೋ. ಆಚರಣೆಯ ಸಣ್ಣ ಸಣ್ಣ ಪ್ರಸಂಗಗಳೇ ವ್ಯಕ್ತಿತ್ವದ ಮೇಲೆ ಅಗಾಧ ಪ್ರಭಾವ ಬೀರುವುದಿರಬೇಕು. ಈ ಘಟನೆಗಳು ನನಗೆ ಬದುಕನ್ನು, ಮೌಲ್ಯವನ್ನು ಕಲಿತುಕೊಳ್ಳಲು ಸಹಾಯಕವಾಗಿದೆ. ಹಾಗೆಯೇ ಸಹಾಯ ಮಾಡುತ್ತಲೇ ಇದೆ. ಸದಾ ಕಾಡುತ್ತಿರುತ್ತವೆ. ಪದೇ ಪದೇ ಒಳಗಿಂದ ಮಾತಾಡುತ್ತಿರುತ್ತವೆ. ನನ್ನ ತಪ್ಪನ್ನು, ಎಡವುದನ್ನು ಸೂಚಿಸುತ್ತಲೇ ಸಾದಾ ಜಾಗೃತಿಯನ್ನು ತರುತ್ತದೆ. ನನ್ನನ್ನು ಸಾಮಾಜಿಕನಾಗಿ ಮಾಡಿದ ಆ ನೆನಪುಗಳ ಸಣ್ಣ ನೋಟವಿದು.

**(ಸಂಚಿಕೆ 50, ಅಕ್ಟೋಬರ್ 2016)**

# ಬಿಂದು

**– ರಾಘವೇಂದ್ರ ಹೇರ್ಳೆ, ಜಿ. ಜಿಲ್ಲಾ ಸಂಸ್ಥೆ–ಬೆಂಗಳೂರು**

ಯಾರು ನೀನು? ನಿನ್ನ ಕಿಮ್ಮತ್ತೇನು?
ಪ್ರಶ್ನೆಯ ಬಾಣವೊಂದು ಎದೆಯಾಳಕ್ಕೆ ಹೊಕ್ಕು
ನೋವಿಂದ ಊಳಿಡುವಂತೆ ಮಾಡಿ
ಕಿಸಕ್ಕನೆ ನಕ್ಕು, ವ್ಯಂಗ್ಯದ ನೋಟ ಬೀರಿ ಬೆನ್ನಿಂದ ಹೊರಬಿದ್ದಿದೆ.
ರಕ್ತದ ಮಡುವಲ್ಲಿ ಬಿದ್ದ ನನಗೆ ಉತ್ತರಿಸುವ ಎದೆಗಾರಿಕೆಯಿಲ್ಲ..
ಉಸುರು ನಿಂತು ಹೋದಂತೆ ಸಾವರಿಸಕೊಳ್ಳಲಾಗದೆ ಚೀರುತ್ತಿದ್ದೇನೆ..
ಕಾಣದ ಅಸ್ತಿತ್ವಕ್ಕೆ ಹಲುಬುತ್ತಿದ್ದೇನೆ.
ಕೊರಡು ಜೀವದಲ್ಲಿ ಚಿಗುರ ಶೋಧದಲ್ಲಿದ್ದೇನೆ
ಸುತ್ತ ನೆರೆದ ಹಿಂಸ್ರ ಪಶುಗಳ ಓಡಿಸಲಾಗದೆ ಅಸಹಾಯಕನಾಗಿದ್ದೇನೆ
ಆದರೂ ಕಿಬ್ಬೊಟ್ಟೆಯಾಳದಲ್ಲೆಲ್ಲೋ ಸ್ವಾಭಿಮಾನದ ಹೆಡೆ ಬಿಚ್ಚಿದೆ
ಚಪ್ಪಾಳೆ ಬೇಡ, ಚಿಟಿಕೆಯಾದರೂ ಹೊಡೆಯಬಲ್ಲೆ ಎಂದು ಒಳಗನ್ನು ತೆರೆಯ ಹೊರಡುತ್ತೇನೆ..
ಹತ್ತು ಹೆಜ್ಜೆ ಮುಂದಿಡಲೇ? ನೂರು ಹೆಜ್ಜೆ ಹಿಂದೆ ಸರಿಯಲೇ?
ಪೂರ್ವಸೂರಿಗಳ ನೆನಪು ಮಾಡಿಕೊಳ್ಳಲೇ?
ಅಥವಾ ಅವರೂ ನನ್ನ ಹಾಗೆ, ನನ್ನಷ್ಟೆ ಪಾಪಪುಣ್ಯಗಳ ಲೆಕ್ಕಾಚಾರದವರೇ?
ಗತವೈಭವದ ಅಮಲಿಗಂಟಿಕೊಂಡೇ ನರಳುತ್ತಿದ್ದಾರೆಯೇ?
ಹೊರಳುದಾರಿಯಲಿ ಸಾಗಲೆತ್ನಿಸುತ್ತೇನೆ..
ಆದರೂ ಅಂತರಂಗದಾ ಮೃದಂಗಕೆ ಕಿವಿಯಾನಿಸುತ್ತೇನೆ
ಅಂಗೈ ತೋರಿಸಿ ಅವಲಕ್ಷಣ ಅನ್ನಿಸಿಕೊಳ್ಳಲೇ ?
ಅರೆಬರೆ ಜ್ಞಾನದ ವಕ್ರ ಪಂಡಿತನಂತೆ
ಬಾಯೆಂಬ ಬೊಂಬಾಯಿ ತೋರಿಸಿ ಸವಕಲು ನಾಣ್ಯವಾಗಲೇ?
ಕ್ಲೀಷೆಯ  ಚಿತ್ರವಾಗಿ ಭೂಗತನಾಗಿ ಹೋಗಲೇ?
ತುಟಿ ಬಿಚ್ಚಲಾಗುತ್ತಿಲ್ಲ
ಮೌನದ ಅಗುಳಿ ಹಾಕಿದೆ ಅಲ್ಲಿ
ಮಂಕು ಕವಿದ ಬುದ್ಧಿಗೆ ತುಕ್ಕೂ ಹಿಡಿದಿದೆ ಈಗ
ನಿರ್ವಿಣ್ಣವಾಗಿ ಬಣ್ಣಗೆಟ್ಟ ಲೇಖನಿಯಲ್ಲಿ ಮಸಿಯ ಪಸೆಯೂ ಇಲ್ಲ
ಅರ್ಧಕ್ಕೆ ಕತ್ತರಿಸಿಕೊಂಡ ಯೋಚನಾಲಹರಿಗಳನ್ನು
ಕೂಡಿಸಲಾಗದೆ ಚೌಕಟ್ಟು ಕಳೆದುಕೊಂಡು ಬೆತ್ತಲಾಗಿದ್ದೇನೆ
ತುದಿಮೊದಲು ಕಾಣದ ಗಾವಿಲನಂತೆ
ಶತಪಥ ತುಳಿದು ದಣಿದಿದ್ದೇನೆ

ಶೂನ್ಯ ಸಂಪಾದನೆಯ ಬರಿಗೈ ದಾಸಯ್ಯನಾಗಿ
ಪೆಕರು ಪೆಕರಾಗಿ ನಗುತ್ತಿದ್ದೇನೆ.
ಸುತ್ತಿಕೊಂಡ ಸಂಬಂಧದ ಸರಪಳಿಗಳು ಅರ್ಥಕಳಕೊಂಡು ಜಡ್ಡುಗಟ್ಟಿವೆ
ಕನಸಿನ ಬೀಜಗಳು ತಲಬಾಗಿಲ ಕೆಳಗೆ ಅವಶೇಷವಾಗಿವೆ
ಬಿಟ್ಟೂ ಬಿಡದ ಲೌಕಿಕದ ಬಡಿವಾರಗಳು
ಇಬ್ಬಂದಿತನವನ್ನು ಹೊದ್ದು ಮಲಗಿವೆ..
ಮುಖ ತಪ್ಪಿಸಿದ ಅದೃಷ್ಟಗಳು ಪ್ರಪಾತದ ನೀರವತೆಯ ವಿಕ್ಷಿಪ್ತ ಗಾನ ಕೇಳಿಸುತ್ತಿವೆ
ನಡುಗುವ ಕೈಗಳಿಂದ, ತ್ರಾಣ ಕಳೆದುಕೋಡ ಕಾಲುಗಳಿಂದ
ಉಸಿರು ಬಿಗಿ ಹಿಡಿದು ಒಂದೊಂದೇ ಹೆಜ್ಜೆ ಹಾಕಲೆತ್ನಿಸುತ್ತೇನೆ ಉಪಾಯಗಾಣದೆ
ಪಲಾಯನವಾದಿಯಂತೆ ನಿಶ್ಚೇಷ್ಟಿತನಾಗಿಯೂ...
ಆದರೂ ಕೆಟ್ಟ ಕುತೂಹಲದಿಂದ ಹಿಂತಿರುಗಿ ನೋಡುತ್ತೇನೆ ಹಾಗೆ ಸುಮ್ಮನೆ
ನನ್ನ ಹಿಂದೆ ಮುಂದೆ ಯಾರಿದ್ದಾರೆ?
ಅವರ ಮಡುವಿನ ಬಣ್ಣ ಯಾವುದು ಎಂಬ ವಿಚಿತ್ರ ತೃಪ್ತಿಗಾಗಿ..
ನೋಡಿದರೆ ಅವರೂ...
ಗಂಟು ಮೂಟೆ ಹೊತ್ತು ರಕ್ತದ ಕಲೆಗಳ ಗುರುತಿನೊಂದಿಗೆ
ಏದುಬ್ಬುಸದೊಂದಿಗೆ ನಡೆಯುತ್ತಿದ್ದಾರೆ..
ಅವರೂ ಥೇಟ್ ನನ್ನಂತೆ !!
ಅವರಿಗೂ ಬೆವರಿದೆ; ಅವಮಾನದ ಗೀರುಗಳಿವೆ; ಕಣ್ಣೀರ ಕಡಲೂ ಇದೆ
ಅಂತೂ ನಾನೊಬ್ಬನೇ ಅಲ್ಲ ಬಾಣ ಹಿಟ್ಟಿಸಿಕೊಂಡವನು !!!
ಅವರಿಗೂ ಬೇಕಿದೆ ನನ್ನಂತೆ ಗಮ್ಯದ ದಾರಿ ಓನಾಮದೊಂದಿಗೆ
ಈಗ ಕೊಂಚ ನಿರಮ್ಮಳನಾಗಿ ಸಾವಕಾಶದಿಂದ ಮತ್ತೆ ಚಿಗಿತುಕೊಳ್ಳಲೆತ್ನಿಸುತ್ತೇನೆ
ಫೀನಿಕ್ಸ್ ನಂತೆ ಮರುಹುಟ್ಟಿನ ಪದರಗಳನ್ನು ಅರಸುತ್ತೇನೆ
ಹೊಸ ಅಧ್ಯಾಯಕೆ ಮುನ್ನುಡಿಯೊಂದನು
ಹೊಸ ನಿರೀಕ್ಷೆಯ ಪಲ್ಲವಿಯೊಂದಿಗೆ ಹಾಡಿಕೊಳ್ಳುತ್ತೇನೆ
ಬಿಂದುವಿನಿಂದ ಸಿಂಧುವಾಗುವತ್ತ,
ಅಂತದಿಂದ ಅನಂತದತ್ತ,
ಶೂನ್ಯದಿಂದ ಶತಕದತ್ತ
ದೃಷ್ಟಿ ಹಾಯಿಸುತ್ತೇನೆ
ಕಾಡಿದ ಪ್ರಶ್ನೆಗಳಿಗೆ ಒಡಲಲೊಂದಿಷ್ಟು ಉತ್ತರದ ಮುಡಿಕೆಗಳನಿಟ್ಟುಕೊಂಡು
ಸ್ಥಿತಪ್ರಜ್ಞನಂತೆ ಕಾಯುತ್ತೇನೆ..
ಕಾತರತೆಯಿಲ್ಲ ಈಗ.. ಭರವಸೆ ಮಾತ್ರ... ರವದಷ್ಟು ಮಿಂಚಿನ ಹೊಳಹು.

**(ಸಂಚಿಕೆ 94, ಜೂನ್ 2020)**

# ಶಾಲೆಗಳಲ್ಲಿ ಪ್ರಾರ್ಥನೆಗಳು ಇರಬೇಕೇ?

**(ಕೃಷ್ಣ ಕುಮಾರ್, ಮಾಜಿ ನಿರ್ದೇಶಕರು ಎನ್‌ಸಿಇಆರ್‌ಟಿ ಮತ್ತು ಫೈಝುನ್ ಮುಸ್ತಾಫ್, ಉಪ ಕುಲಪತಿಗಳು, ನಲ್ಸಾರ್ ಕಾನೂನು ವಿಶ್ವವಿದ್ಯಾಲಯ, ಹೈದರಬಾದ್ ಅವರೊಂದಿಗೆ ನಡೆದ ಸಂದರ್ಶನದ ಕನ್ನಡಾನುವಾದ. ಮೊದಲು ಈ ಸಂದರ್ಶನ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿತ್ತು.)**

**ಸಂದರ್ಶಕರು: ಅನುರಾಧ ರಮಣ್**

ಸರ್ಕಾರಗಳಿಂದ ಅನುದಾನ ಪಡೆಯುತ್ತಿರುವ ಯಾವುದೇ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ನೀಡುವಂತಿಲ್ಲ ಎಂದು ನಮ್ಮ ಸಂವಿಧಾನ ಹೇಳುತ್ತದೆ. *ಇತ್ತೀಚೆಗೆ ಉತ್ತರ ಪ್ರದೇಶದ ಪಿಲಿಭಿಟ್ ಎಂಬಲ್ಲಿ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕರೊಬ್ಬರನ್ನು ಅಮಾನತ್ತು ಮಾಡಲಾಯಿತು. ಆತ ಶಾಲೆಯಲ್ಲಿ ನಡೆಯುವ ಬೆಳಗಿನ ಸಭೆಯಲ್ಲಿ ಧಾರ್ಮಿಕ ಪ್ರಾರ್ಥನೆಗಳನ್ನು ಮಾಡುವಂತೆ ಮಕ್ಕಳಿಗೆ ಒತ್ತಾಯಿಸುತ್ತಿದ್ದ ಎಂಬುದು ಆತನ ಮೇಲಿನ ದೂರು. ಕಳೆದ ವರ್ಷ, ಕೇಂದ್ರೀಯ ವಿದ್ಯಾಲಯ ಸಂಘಟನೆಯು ಬೃಹದಾರಣ್ಯಕ ಉಪನಿಷತ್‌ನ ಶ್ಲೋಕವೊಂದನ್ನು ಬೆಳಗ್ಗೆ ಹೇಳುವುದನ್ನು ಕಡ್ಡಾಯಗೊಳಿಸಿದೆ.*

*ಈ ಹಿನ್ನಲೆಯಲ್ಲಿ ಅನುರಾಧ ರಮಣ್‌ರವರು ಈ ಬೆಳಗಿನ ಪ್ರಾರ್ಥನೆಯ ಅನುಕೂಲಗಳು ಮತ್ತು ಅಪಾಯಗಳ ಕುರಿತಂತೆ ಕೃಷ್ಣ ಕುಮಾರ್ ಮತ್ತು ಫೈಝುನ್ ಮುಸ್ತಾಫರವರನ್ನು ಮಾತನಾಡಿಸಿದ್ದಾರೆ.*

- **ಬೆಳಗಿನ ಸಭೆಯಲ್ಲಿ ಪ್ರಾರ್ಥನೆಗಳನ್ನು ಹಾಡಿಸುವುದು ಧರ್ಮಬೋಧನೆ ಎನಿಸಿಕೊಳ್ಳುತ್ತದೆಯೇ?**

**ಕೃಷ್ಣ ಕುಮಾರ್ (ಕೆಕೆ):** ಸುಮಾರು 45 ವರ್ಷಗಳ ಹಿಂದೆ ದಿನಮಾನ್ ಎಂಬ ಹಿಂದಿ ವೃತ್ತಪತ್ರಿಕೆಗಾಗಿ ಉತ್ತರ ಭಾರತದ ಶಾಲೆಗಳಲ್ಲಿ ಸಮೀಕ್ಷೆಯನ್ನು ಮಾಡಿದ್ದೆ. ಸುಮಾರು 400 ಜನರು ಲಿಖಿತ ರೂಪದಲ್ಲಿ ಪ್ರಾರ್ಥನೆಗಳನ್ನು ಒದಗಿಸಿದ್ದರು. ಸಾಮಾನ್ಯವಾಗಿ ಬೆಳಗಿನ ಸಭೆಯಲ್ಲಿ ಒಂದೆರಡು ಪ್ರಾರ್ಥನೆಗಳನ್ನು ಹಾಡುವುದು ವಾಡಿಕೆ. ಅವೆಲ್ಲವೂ ವಿಭಿನ್ನವಾಗಿದ್ದವು. ಅದರಲ್ಲಿ ಕೆಲವು ಸಾಂಪ್ರಾದಾಯಿಕ ಪ್ರಾರ್ಥನೆಗಳಿದ್ದರೆ, ಇನ್ನು ಕೆಲವು ನಂಬಿಕೆ ಮತ್ತು ಧಾರ್ಮಿಕ ಆಧಾರದಲ್ಲಿದ್ದವು, ಉಳಿದಂತೆ ಕೆಲವು ಹಾಗೂ–ಹೀಗೂ ಇದ್ದವು. ಒಂದಿಷ್ಟು ವಿಶ್ಲೇಷಣೆಗಳನ್ನು ಮಾಡಿದ ನಂತರ, ಈ ಪ್ರಾರ್ಥನೆಗಳಿಂದ ಶಾಲೆಗಳು ಹಲವಾರು ಅಗತ್ಯಗಳನ್ನು ಇಡೇರಿಸುತ್ತಿವೆ ಎನಿಸಿತು. ಸಾಮಾನ್ಯವಾಗಿ ಶಾಲೆಯ ಮುಖ್ಯ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಲು, ಸೂಚನೆಗಳನ್ನು ನೀಡಲು ಅಥವಾ ಸಣ್ಣದಾದ ಭಾಷಣ ಮಾಡಲು ಬಳಸಿಕೊಳ್ಳುತ್ತಿದ್ದರು. ಸಂಗೀತ, ಹಾಡುಗಳಿಗೆ ಅಲ್ಲಿ ಜಾಗವಿತ್ತು. ಹಾಡು ಎಂದಾಗ ಅದರಲ್ಲಿ ಹೆಚ್ಚಾಗಿ ಪ್ರಾರ್ಥನೆಗಳೇ ಇದ್ದವು. ಹಾಗಾಗಿ, ಶಾಲೆಗಳಲ್ಲಿ ಈ ಪ್ರಾರ್ಥನೆಗಳಿರಬೇಕೋ, ಬೇಡವೋ ಎಂಬುದರ ಬಗ್ಗೆ ಇಲ್ಲಿ ಪ್ರಶ್ನೆಯಿಲ್ಲ. ದಕ್ಷಿಣ ಏಷಿಯಾದ ಎಲ್ಲಾ ಶಾಲೆಗಳಲ್ಲೂ ಸಹ ಬೆಳಗಿನ ಸಭೆಗಳಲ್ಲಿ ಪ್ರಾರ್ಥನೆಗಳಿಗೆ ಜಾಗವಿದ್ದು ಅವು ಅತ್ಯಗತ್ಯವೆನಿಸಿವೆ. ಕೇಳಿಕೊಳ್ಳಬೇಕಾದ ಪ್ರಶ್ನೆಯೇನೆಂದರೆ, ಬೆಳಗಿನ ಸಭೆಗಳ ಉದ್ದೇಶಗಳನ್ನು ಇಡೇರಿಸಿಕೊಳ್ಳಲು ಯಾವ ಸಾಹಿತ್ಯ ಸಾಮಗ್ರಿ ಮತ್ತು ಸಂಗೀತ ಪ್ರಕಾರಗಳನ್ನು ಬಳಸಬೇಕು ಎಂಬುದು.

ನಾನು ಹೇಳಬಯುಸುವುದೇನೆಂದರೆ, ಇಕ್ಬಾಲ್ ಬರೆದ ಗೀತೆಯೊಂದು (ಲಬ್ ಪೆ ಆತಿ ಹೈ ದುವಾ) ಸಧ್ಯಕ್ಕೆ ವಿವಾದಕ್ಕೆ ಕಾರಣವಾಗಿದ್ದು ವಾಸ್ತವದಲ್ಲಿ ಅದು ಜಾತ್ಯಾತೀತ ಸ್ವರೂಪದ್ದಾಗಿದೆ. ಭಾರತದ ಅನೇಕ ಕಡೆಗಳಲ್ಲಿ ಅದನ್ನು ಈಗಲೂ ಪ್ರಾರ್ಥನೆಯಾಗಿ ಹಾಡಲಾಗುತ್ತಿದೆ. ಸಮೀಕ್ಷೆಯಲ್ಲಿ ಯಾರೋ ಒಬ್ಬರು ನನಗೆ ಸಲ್ಲಿಸಿ ಇದರ ರಾಗ ಸಂಯೋಜನೆ ಹೇಗಿದೆಯೆಂದರೆ, ಅದನ್ನು ಕೇಳುವುದಕ್ಕಾಗಿಯೇ ಜನ ಸೇರುತ್ತಾರೆ ಎಂದು ಹೇಳಿದ್ದರು. ಇತ್ತೀಚೆಗೂ ಸಹ ನಾನು ಇದ್ದನ್ನು ಕೇಳಿದ್ದೇನೆ. ಇದೊಂದು ಶಿಶು–ಕೇಂದ್ರೀತ ಹಾಡು. ಇದು ವಿವಾದವಾಗಬಾರದಾಗಿತ್ತು, ಆದರೆ ನಾವು ಬದುಕುತ್ತಿರುವ ಸನ್ನಿವೇಶಗಳು ವಿವಾದ ಹುಟ್ಟುಹಾಕಿವೆ.

**ಫೈಝುನ್ ಮುಸ್ತಫಾ (ಎಫ್‌ಎಂ):** ಇಕ್ಬಾಲ್‌ರವರು ಆಗಿನ್ನೂ ಪಾಕಿಸ್ತಾನ ಕುರಿತಂತೆ ಪ್ರಸ್ತಾಪ ಇರದಿದ್ದ ಕಾಲದಲ್ಲಿ (20ನೇ ಶತಮಾನದ ಆರಂಭದಲ್ಲಿ) ಈ ಹಾಡು ಬರೆದಿದ್ದಾರೆ. ಕತ್ತಲನ್ನು ಹೊಡೆದೋಡಿಸುವ ಮತ್ತು ದೇಶಭಕ್ತಿಯ ಬಗ್ಗೆ ಈ ಹಾಡು ಹೇಳುತ್ತದೆ. ಆದರೆ ದ್ವಿಪದಿಯಲ್ಲಿರುವ 'ಅಲ್ಲಾ ದುಷ್ಟ ಶಕ್ತಿಗಳಿಂದ ನನ್ನನ್ನು ರಕ್ಷಿಸು' ಎಂಬ ಸಾಲು ಸಮಸ್ಯೆಗಳನ್ನು ಸೃಷ್ಟಿಸಿದೆ. ದೇವರನ್ನು ಉಲ್ಲೇಖಿಸುವುದು ಸಮಸ್ಯೆಗೆ ಕಾರಣ. ಕೇಂದ್ರೀಯ ವಿದ್ಯಾಲಯದ ನಿರ್ದೇಶನವು ಉಲ್ಲೇಖಿಸುವ ಆ ಶ್ಲೋಕವು ತುಂಬಾ ಜಾತ್ಯಾತೀತವೆನಿಸಬಹುದು, ಅದು ಯಾವ ದೇವರನ್ನೂ ಉಲ್ಲೇಖಿಸುತ್ತಿಲ್ಲ ಎಂಬುದು ವಾದವಾಗಿರಬಹುದು ಆದರೆ, ಸಾಂವಿಧಾನಿಕವಾಗಿ ಹೇಳುವುದಾದರೆ, ಸರ್ಕಾರಗಳಿಂದ ಭಾಗಷಃ ಅಥವಾ ಸಂಪೂರ್ಣ ಅನುದಾನಪಡೆಯುತ್ತಿದ್ದಲ್ಲಿ, ಧಾರ್ಮಿಕ ಅರ್ಥದ ಬೋಧನೆಗಳನ್ನು ಮಾಡುವಂತಿಲ್ಲ. ಆಧ್ಯಾತ್ಮಿಕ ಪರಂಪರೆಯನ್ನು ಹಾಗೂ ನೈತಿಕತೆಯನ್ನು ವೃದ್ಧಿಗೊಳಿಸುವ ನಿಟ್ಟಿನಲ್ಲಿ ಬಳಸಿಕೊಳ್ಳುವುದು ತಪ್ಪೇನಲ್ಲ, ಆದರೆ ಅದು ಅತಿಮಾನುಷ ಶಕ್ತಿಯನ್ನು ಬೇಡಿಕೊಳ್ಳುವಂತಿದ್ದರೆ ಅಥವಾ ಉಲ್ಲೇಖಿಸುವಂತಿದ್ದರೆ ಅದು ವಿವೇಚನೆಯ ಸ್ಫೂರ್ತಿಗೆ ಮತ್ತು ವೈಜ್ಞಾನಿಕ ಮನೋಭಾವಕ್ಕೆ ಧಕ್ಕೆ ತರುವಂತಾದರೆ ಅದನ್ನು ಒಪ್ಪಲಾಗದು ಎಂಬುದು ನನ್ನ ವಾದ.

- **ಸರ್ಕಾರದಿಂದ ಭಾಗಷಃ ಅಥವಾ ಸಂಪೂರ್ಣವಾಗಿ ಅನುದಾನ ಪಡೆಯುತ್ತಿರುವ ಶಾಲೆಗಳು ಬೆಳಗಿನ ಸಭೆಗಳಲ್ಲಿ ಪ್ರಾರ್ಥನೆಗಳನ್ನು ಕೈಬಿಡಬೇಕೆಂಬುದನ್ನು ನೀವು ಸಮ್ಮತಿಸುತ್ತಿರಾ?**

**ಕೆಕೆ:** ನಾನು ಅದನ್ನು ಒಪ್ಪಲಾರೆ. ಬೆಳಗಿನ ಸಭೆಗಳನ್ನು ಅನೇಕ ಉದ್ದೇಶಗಳಿಗಾಗಿ ನಡೆಸಲಾಗುತ್ತದೆ. ಸಂಗೀತ, ಹಾಡುಗಾರಿಕೆ ಅದರ ಒಂದು ಭಾಗ. ದಿನವನ್ನು ಆರಂಭಿಸುವ ಒಂದು ಕ್ರಮವಾಗಿ ಇದನ್ನು ಅರ್ಥಮಾಡಿಕೊಂಡಲ್ಲಿ ದೇಶದ ಕಾವ್ಯ ಮತ್ತು ಭಾಷೆಯನ್ನು ದೂರವಿಡಲಾಗದು. ಒಂದು ಸಲ ನೀವು ಆ ಪ್ರಭಾವ ವಲಯದಲ್ಲಿದ್ದಾಗ, ಹಾಡಿನ ಸೌಂದರ್ಯೋಪಾಸನೆ ಮತ್ತು ಅದರ ಆಧ್ಯಾತ್ಮಿಕ ಉದ್ದೇಶಗಳ ನಡುವೆ ಅಂತಹ ವ್ಯತ್ಯಾಸವೇನು ಕಂಡುಬರುವುದಿಲ್ಲ. ಹಿಂದಿ ಭಾಷಿಕರ ಪ್ರದೇಶದ ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಸೌಂದರ್ಯೋಪಸಾನೆಯ ಸಂಪ್ರದಾಯಗಳೊಂದಿಗೆ ಬೆಸೆದುಕೊಂಡಿರುವ ತುಳಸಿದಾಸರ ಅಥವಾ ಸುರ್‌ದಾಸರ ಭಜನೆಗಳನ್ನು ಸರ್ಕಾರಿ ಶಾಲೆಗಳಲ್ಲಿ ಹಾಡಬಾರದೆಂದು ಹೇಳುವುದು ಒಂದು ವಿಚಿತ್ರ ನಡೆ ಎನಿಸಿಕೊಳ್ಳುತ್ತದೆ. ಅದೇ ರೀತಿ ಚೆನ್ನೈನಲ್ಲಿ ಸಂಗೀತ ಕಾರ್ಯಕ್ರಮಗಳಲ್ಲಿ ಹಾಡುವ ಸಂಗೀತವನ್ನು, ಸರ್ಕಾರದ ಅನುದಾನಗಳಿಂದ ನಡೆಯುತ್ತವೆ ಎಂಬ ಕಾರಣಕ್ಕೆ ಶಾಲೆಗಳಲ್ಲಿ ಹಾಡುವಂತಿಲ್ಲ ಎಂಬುದು ಸಹ ತಪ್ಪಾಗುತ್ತದೆ. ಹಾಗಿಮಾಡಿದಲ್ಲಿ, ಶಾಲೆಗಳನ್ನು ನಾವು ಅವುಗಳ ಸಂಸ್ಕೃತಿಯಿಂದಲೇ ಸಂಪೂರ್ಣವಾಗಿ ದೂರವಿಟ್ಟಂತಾಗುತ್ತದೆ. ಈಗಾಗಲೇ, ನಮ್ಮ ಶಾಲೆಗಳನ್ನು ಅವು ಕಾರ್ಯನಿರ್ವಹಿಸುವ ಪರಿಸರದಲ್ಲೇ ಯಾರೂ ಕೇಳದಂತಾಗಿದೆ. ನಮ್ಮ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು (ಎನ್‌ಸಿಎಫ್) ಶಾಲೆಯನ್ನು ಸಮಾಜದ ಹಾಗೂ ಅದರ ಆಚಾರ-ವಿಚಾರಗಳ ಭಾಗವನ್ನಾಗಿ ಮಾಡಬೇಕು, ಅದಕ್ಕಾಗಿ ಸಮಾಜದ ಆಗುಹೋಗುಗಳ ಕುರಿತಂತೆ ಚರ್ಚಿಸಲು, ಭೌದ್ಧಿಕವಾಗಿ ವಿಶ್ಲೇಷಿಸಲು, ವಿಮರ್ಶಾತ್ಮಕವಾಗಿ ಪರಿಶೀಲಿಸಲು ಅವಕಾಶಗಳನ್ನು ಒದಗಿಸಬೇಕು. ಒಂದು ವೇಳೆ ಕಾನೂನು ಇದ್ದರೂ ಸಹ ಹಾಡುವುದು, ಪ್ರಾರ್ಥನೆಮಾಡುವುದು ಎಲ್ಲವೂ ನಡೆಯಬೇಕು. ವಾಸ್ತವದಲ್ಲಿ, ಸಂಗೀತ, ಹಾಡುಗಾರಿಕೆಗೆ ನಮ್ಮ ಶಾಲೆಗಳಲ್ಲಿ ಅವಕಾಶಗಳೇ ಕಡಿಮೆ ಇವೆ.

- **ಮುಸ್ತಫಾರವರು ಎತ್ತಿದ ನಾಗರೀಕರಲ್ಲಿ ವೈಜ್ಞಾನಿಕ ಮನೋಭಾವ ಮತ್ತು ವಿವೇಚನೆಯನ್ನು ಬೆಳೆಸುವುದು ಮೂಲಭೂತ ಕರ್ತವ್ಯವಾಗಿದೆ ಎಂಬ ಅಂಶದ ಬಗ್ಗೆ ನಿಮಗೇನು ಅನಿಸುತ್ತದೆ?**

**ಕೆಕೆ:** ಅದೇ ಸಂವಿಧಾನವು ವೈಯಕ್ತಿಕ ಘನತೆಯೂ ಸಹ ಒಂದು ಮಹತ್ವದ ಮೌಲ್ಯ ಎಂದು ಸಾರುತ್ತದೆ. ಬಹುಷಃ, 39ನೇ ಪರಿಚ್ಛೇದ ಹೇಳುವಂತೆ ಸಮಾಜದಲ್ಲಿ ಪರತಿಯೊಬ್ಬರು ಘನತೆಯ ಸಂವೇದನೆಯನ್ನು ಹೊಂದುವಂತೆ ಸಾಮಾಜಿಕ ಆಚಾರ-ವಿಚಾರಗಳನ್ನು ಸೃಷ್ಟಿಸಬೇಕು. ಆದರೆ ಆ ಘನತೆಯ ಸಂವೇದನೆಯನ್ನು ವಿಜ್ಞಾನಕ್ಕಾಗಿ ಬಲಿಕೊಡಲಾಗದು. ವಿಜ್ಞಾನ ಎಂದರೇನು? ಜ್ಞಾನದ ವ್ಯವಸ್ಥಿತ ಹುಡುಕಾಟವೇ? ಹಾಗಿದ್ದಲ್ಲಿ, ಧರ್ಮ(ದ ಅಧ್ಯಯನವೂ) ಅದರ ಒಂದು ಭಾಗ. ನೇರಾನೇರ ಧಾರ್ಮಿಕ ಬೋಧನೆಗಳನ್ನು ಮಾಡುವುದಕ್ಕೂ, ದೇಶದ ಸಾಂಸ್ಕೃತಿಕ ಸಂಸ್ಕಾರಗಳ ಭಾಗವಾಗಿರುವ ಧಾರ್ಮಿಕ ಸಂಪ್ರದಾಯಗಳಿಗೂ ವ್ಯತ್ಯಾಸವಿದೆ. ಕಾವ್ಯ ಎಂಬುದು ಭಾರತದ ಬಹುತೇಕ ಭಾಷೆಗಳಲ್ಲಿ ಕೇಂದ್ರೀಕೃತವಾಗಿದೆ. ಠಾಗೋರ್‌ರವರ ಅನೇಕ ಗೀತೆಗಳು ಆಧ್ಯಾತ್ಮಿಕ ಚಿಂತನೆಗಳನ್ನು ಹೊಂದಿವೆ. ಕೆಲವೊಬ್ಬರು ಆಧ್ಯಾತ್ಮಿಕ ಚಿಂ-ತನೆಯು ಧಾರ್ಮಿಕ ಚಿಂತನೆಯೂ ಆಗಿರುತ್ತದೆ ಎಂಬುದಾಗಿ ವಾದಿಸಬಹುದು. ಆದರೆ ಠಾಗೋರ್‌ರವರನ್ನು ಈ ಆಧಾರದಲ್ಲಿ ನಿರಾಕರಿಸುವುದು ಕ್ಷುಲ್ಲಕವೆನಿಸುತ್ತದೆ. ಮಧ್ಯಯುಗೀನ ತಮಿಳ್ ಕವಿಗಳು ಅಥವಾ ಮಹಾರಾಷ್ಟ್ರದ ಕವಿಗಳ ಬಗ್ಗೆಯೂ ಹೀಗೆಯೇ ವಾದಿಸಲಾಗುತ್ತದೆ ಎಂದು ನನ್ನ ಭಾವನೆ.

- **ಆಧ್ಯಾತ್ಮಿಕ ಮತ್ತು ಧಾರ್ಮಿಕ ಎಂಬ ವರ್ಗೀಕರಣ ಅತ್ಯಂತ ಕ್ಲಿಷ್ಟಕರವೆನಿಸುತ್ತದೆ. ಈ ವರ್ಗೀಕರಣವನ್ನು ಹೇಗೆ ನಿಭಾಯಿಸುವುದು?**

**ಎಫ್‌ಎಂ:** ಸಂಗೀತದ ಮಹತ್ವದ ವಿಷಯಕ್ಕೆ ಬಂದರೆ ಕೃಷ್ಣ ಕುಮಾರ್ ಹೇಳುತ್ತಿರುವುದನ್ನು ನಾನು ಸಹ ಒಪ್ಪುತ್ತೇನೆ. ಪರಿಚ್ಛೇದ 39(ಎಫ್) ಬಗ್ಗೆ ಅವರು ಹೇಳಿದ ಮಾತೂ ಸಹ ಅಷ್ಟೇ ಸತ್ಯ. ನನ್ನ ಸಮಸ್ಯೆಯೇನೆಂದರೆ, ನಾವು ಆಧ್ಯಾತ್ಮಿಕತೆ ಮತ್ತು ನೈತಿಕತೆಯನ್ನು ಧರ್ಮಗಳಿಂದ ಪಡೆಯುತ್ತೇವೆಂದು ನಂಬಿರುವುದು. ಇದರ ಅರ್ಥ, ಧರ್ಮವು ನೈತಿಕತೆ, ನಿಜಾಯಿತಿಗೆ, ಮತ್ತು ಮಾನವನ ನಾಗರೀಕತೆಗಳಿಗೆ ಏನೂ ಕೊಡುಗೆ ನೀಡಿಲ್ಲ ಎಂದಲ್ಲ. ಆದರೆ ನನ್ನ ಕಳವಳವೇನೆಂದರೆ, ಈ ಧರ್ಮಗಳು ರಕ್ತಪಾತ ಮತ್ತು ಹಿಂಸಾಕೃತ್ಯಗಳಿಗೆ ದಾರಿಮಾಡಿಕೊಟ್ಟಿವೆ. ಆದ್ದರಿಂದ, ಆಧುನಿಕ ಮತ್ತು ಅಭಿವೃದ್ಧಿಶೀಲ ದೇಶವಾಗಿರುವ ಭಾರತ ಸರಿಯಾದ ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಫ್ರಾನ್ಸ್ ಮತ್ತು ಅಮೇರಿಕಾದಂತಹ ದೇಶಗಳು ಧರ್ಮ ಮತ್ತು ರಾಷ್ಟ್ರಗಳ ನಡುವೆ ಬಲವಾದ ಗೋಡೆಯನ್ನು ಕಟ್ಟಿಕೊಂಡಿವೆ. ಜಾತ್ಯಾತೀತ ರಾಷ್ಟ್ರ ಎಂಬುದಾಗಿ ತಿರ್ಮಾನಿಸಿಕೊಂಡ ನಂತರ ಸರ್ಕಾರಿ ಅನುದಾನಿತ ಸಂಸ್ಥೆಗಳಲ್ಲಿ ಧಾರ್ಮಿಕ ಬೋಧನೆಗೆ ಅವಕಾಶವಿರಬಾರದು. ಖಾಸಗಿ ಸಂಸ್ಥೆಗಳಲ್ಲಿ, ಇದನ್ನು ಪಾಲಕರ ಸಮ್ಮತಿಯ ಮೇರೆಗೆ ಬೋಧಿಸಲಾಗುತ್ತದೆ. ಕದ್ದು-ಮುಚ್ಚಿ ಒಪ್ಪಿಗೆ ತೆಗೆದುಕೊಂಡು ನಡೆಸುವುದಲ್ಲ. ಪಾಲಕರು ಸಮ್ಮತಿಸದಿದ್ದಲ್ಲಿ, ಮಕ್ಕಳಿಗೆ ಧಾರ್ಮಿಕ ಪ್ರಾರ್ಥನೆಗಳನ್ನು ಹಾಡಿಸುವುದಿಲ್ಲ. ಆದರೆ ಶಿಕ್ಷಣ ಸಂಸ್ಥೆಗಳು ಧಾರ್ಮಿಕತೆಯನ್ನು ಅತೀಯಾಗಿ ಪಸರಿಸಿ ದ್ವೇಷವನ್ನು ಬಿತ್ತುತ್ತಿವೆ. ಈ ಬಗ್ಗೆ ನನಗೆ ಹೆಚ್ಚು ಆತಂಕವೆನಿಸುತ್ತಿದೆ. ಆಧ್ಯಾತ್ಮಿಕತೆ ಮತ್ತು ಧಾರ್ಮಿಕತೆಗಳ ನಡುವಿನ ಪರದೆ ತುಂಬಾ ತೆಳುವಾದಂತದ್ದು. ಆ ಬಗ್ಗೆ ನನಗೆ ಕಾಳಜಿ ಉಂಟಾಗಿದೆ.

- **ಯಾವುದೇ ಬೋಧನೆಯು, ಅದು ಆಧ್ಯಾತ್ಮಿಕ ಸ್ವರೂಪದ್ದೇ ಆಗಿರಲಿ ಸಮಾಜವನ್ನು ಹೊಡೆಯುವಂತಹ ಪರಿಣಾಮಗಳಿಗೆ ಕಾರಣವಾಗುತ್ತದೆ ಎಂದು ನಿಮಗೆ ಅನಿಸುತ್ತದೆಯೇ?**

**ಕೆಕೆ:** ನಾನೇನಾದರೂ ತೀರಾ ವಿಭಿನ್ನ ದೃಷ್ಟಿಕೋನ ಹೊಂದಿದ್ದೇನೆಯೇ ಎಂಬ ಭಯವುಂಟಾಗುತ್ತಿದೆ ನನಗೆ. ಸ್ವಲ್ಪಮಟ್ಟಿಗೆ ನಾವು ಶಾಲೆಗಳನ್ನು ಪ್ರತ್ಯೇಕಿಸಿ ನೋಡಬೇಕಾಗುತ್ತದೆ. ವಿಜ್ಞಾನ ಮತ್ತು ಧರ್ಮಗಳ ಸಂಬಂಧವನ್ನು ತೂಗಿಸಿನೋಡೋಣ. ನೋಡಿ ಅಣು ಬಾಂಬ್‌ಗಳ ತಯಾರಿಕೆ ವೈಜ್ಞಾನಿಕ ಅನ್ವೇಷಣೆ ಮತ್ತು ಶೋಧನೆಯ ಯೋಜನೆಯೇ ಆಗಿದೆ. ಹಾಗಂತ, ನಾನು ವಿಜ್ಞಾನದ ದ್ವೇಷಿಯಲ್ಲ. ನಮ್ಮ ಜ್ಞಾನವನ್ನು ನಾವು

ಯಾವ ಬಗೆಯ ಕೆಲಸಗಳಿಗೆ ಬಳಸಿಕೊಳ್ಳುತ್ತೇವೆ ಎಂಬುದು ಯಾವಾಗಲೂ ಮಾನವರು ತಮ್ಮ ರಾಜಕೀಯ ಮತ್ತು ಇತರೆ ಸಂಸ್ಥೆಗಳ ಮೂಲಕ ತೆಗೆದುಕೊಳ್ಳುವ ನಿರ್ಧಾರಗಳನ್ನು ಅವಲಂಬಿಸಿರುತ್ತದೆ. ಹಾಗಾಗಿ, ವಿಜ್ಞಾನದ ಇತಿಹಾಸವು, ಧಾರ್ಮಿಕ ಇತಿಹಾಸದಷ್ಟೇ ರಕ್ತಸಿಕ್ತವಾಗಿದೆ. ಆದ್ದರಿಂದ ನಾವು ಇಂತಹ ಅಂಶಗಳನ್ನು ಕೇವಲ ನೀರಸದಾಯಕ ವರ್ಗಗಳಲ್ಲಿ ಸೇರಿಸುವ ಬದಲಿಗೆ ವಿಶಾಲ ಬೋಧನಾ ಮತ್ತು ಶೈಕ್ಷಣಿಕ ಹಿನ್ನೆಲೆಯಲ್ಲಿ ನೋಡಬೇಕು. ಬೆಳಗಿನ ಸಭೆಯು ಖಾಸಗಿ ಶಾಲೆಗಳ ಅವಿಭಾಜ್ಯ ಅಂಗವಾಗಿದ್ದು, ಅನೇಕ ಶಾಲೆಗಳಲ್ಲಿ ಸುಂದರವಾದ ಬೆಳಗಿನ ಸಭೆಗಳನ್ನು ನಡೆಸಲಾಗುತ್ತಿದೆ. ಸನ್ನಿವೇಶಗಳನ್ನು ನಾವು ವ್ಯಾಪಕವಾಗಿ ಅಧ್ಯಯನ ನಡೆಸಿದಲ್ಲಿ, ಈ ಬೆಳಗಿನ ಸಭೆಗಳಲ್ಲಿ ನಮ್ಮ ದೇಶದ ಸುಂದರವಾದ ಸಂಪ್ರದಾಯಗಳನ್ನು ತಿಳಿಸುವ ಅದೆಷ್ಟೋ ಸನ್ನಿವೇಶಗಳು ನಮಗೆ ಕಂಡುಬರುತ್ತವೆ.

ಧಾರ್ಮಿಕ ಬೋಧನೆ ಎಂದರೇನು? ಸ್ವಲ್ಪಮಟ್ಟಿಗೆ ನಾವು ಇತಿಹಾಸ ವಿಷಯದ ಅಧ್ಯಯನದಲ್ಲಿ ಹಲವಾರು ಧರ್ಮಗಳ ಬಗ್ಗೆ ತಿಳಿದುಕೊಳ್ಳುತ್ತೇವೆ. ಗುರ್ಬಾನಿ ಅಥವಾ ಎಂ.ಎಸ್.ಸುಬ್ಬಲಕ್ಷ್ಮಿಯವರ ಮೀರಾ ಭಜನೆಗಳನ್ನು ಮಕ್ಕಳಿಗೆ ಕೇಳಿಸಿಕೊಳ್ಳುವ ಅವಕಾಶವೇ ಕೊಡದೇ ಸಿಖ್ ಧರ್ಮದ ಬಗ್ಗೆ ಬೋಧಿಸುವುದು ವಿಚಿತ್ರವೆನಿಸಿವುದಿಲ್ಲವೇ? ಇದು ಧಾರ್ಮಿಕ ಅನುಭವವೇ? ಇದು ಆಧ್ಯಾತ್ಮಿಕ ಅನುಭವವೇ? ಹೌದು. ಅದರೆ ಜೊತೆಜೊತೆಗೆ ಇದು ಸೌಂದರ್ಯೋಪಾಸನೆಯ ಅನುಭವವೂ ಹೌದು. ಇಂತವುಗಳನ್ನೇನಾದರೂ ನಿಷೇದಿಸಿದ ದಿನ ಅದು ನಿಜಕ್ಕೂ ದುಖಕರ ದಿನವಾಗಿರುತ್ತದೆ. ಇದರ ಹೊರತಾಗಿ ಭಾರತದ ಶ್ರೀಮಂತ ಸೌಂದರ್ಯೋಪಸಾನೆ ಮತ್ತು ಕಲಾ ಸಂಪ್ರದಾಯಗಳ ಆಳವಾದ ಸಂಗತಿಗಳನ್ನು ಮಕ್ಕಳಿಗೆ ಪರಿಚಯಿಸುವ ಬೇರೆ ದಾರಿ ನನಗೆ ಕಾಣದು. ನಾವು ಆಧ್ಯಾತ್ಮಿಕ ಲಕ್ಷಣಗಳನ್ನು ಹೊಂದಿರುವ ಪೇಂಟಿಗ್ (ಚಿತ್ರಕಲೆ)ಗಳನ್ನು ಅಥವಾ ದೇವಸ್ಥಾನಗಳ ವಾಸ್ತುಶಿಲ್ಪಕಲೆಯನ್ನು ಸಹ ನಿಷೇಧಿಸುತ್ತೇವೆಯೇ? ಯಾರು ಈ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುವವರು? *'ಏಕ್ಲ ಚಲೋ ರೆ'* ಹಾಡನ್ನೇ ತೆಗೆದುಕೊಳ್ಳಿ. ಖಂಡಿತವಾಗಿಯೂ ಅದು ನಿಮಗೆ ಮನಸ್ಸಿನ ಏಕಾಂತಕ್ಕೆ ಸಂಬಂಧಿಸಿದ ಹಾಡು ಎಂದೆನಿಸುತ್ತದೆ. ಆ ಹಾಡು ಬರೆದ ರವೀಂದ್ರನಾಥ್ ಠಾಗೋರ್‌ವರು ವಾಸ್ತವದಲ್ಲಿ ಹಿಂದು ಮನಸ್ಸನ್ನು ಸಂಭ್ರಮಿಸುತ್ತಿದ್ದಾರೆ ಎನಿಸಿಬಿಡಬಹುದು. ಆಗ ಅದು ನಿಜವಾಗಲೂ ಠಾಗೋರರವರನ್ನು ಮತ್ತು ಅವರ ಮಾನವ ಧರ್ಮವನ್ನು ನಾವು ಅಪಹಾಸ್ಯಮಾಡಿದಂತಾಗುತ್ತದೆ. ಬೋಧನಾಶಾಸ್ತ್ರದ ಕತೆಯನ್ನು ಮುಗಿಸಿಬಿಡುವ ಹಂತಕ್ಕೇ ನಾವು ಹೋಗುತ್ತಿದ್ದೇವೆ ಎಂದು ನನಗೆ ಆತಂಕವುಂಟಾಗಿದೆ.

**ಎಫ್‌ಎಂ:** ಪರಿಚ್ಛೇದ 28(3) ಸ್ಪಷ್ಟವಾಗಿ ಹೇಳುವುದೇನೆಂದರೆ ಶಾಲೆಯು ಸಣ್ಣ ಅನುದಾನ ಪಡೆದಿದ್ದರೂ ಸಹ ಅಲ್ಲಿ ಓದುವ ಮಗುವು ಪಾಲಕರ ಸಮ್ಮತಿಯಿರದ ಹೊರತು ಧಾರ್ಮಿಕ ಬೋಧನೆಯನ್ನು ಕೇಳಬೇಕಿಲ್ಲ. ಈ ಘಟನೆಗೆ ಸಂಬಂಧಿಸಿದಂತೆ ನನಗಿರುವ ದೊಡ್ಡ ಆತಂಕವೇನೆಂದರೆ ಶಾಲೆಯ ಪ್ರಾರ್ಥನೆಗಳ ಮೂಲಕ ಧರ್ಮವನ್ನು ಶಾಲೆಗೆ ತರುತ್ತಿದ್ದೇವೆ. ಆದ್ದರಿಂದ ಸಾಂವಿಧಾನಿಕ ಪೀಠವು ಕೇಂದ್ರೀಯ ವಿದ್ಯಾಲಯದ ಸೂಚನೆ ಕುರಿತಂತೆ ವಿಚಾರಣೆ ನಡೆಸುತ್ತಿದೆ. ನನಗನಿಸುವಂತೆ, ಬೆಳಗಿನ ಸಭೆಗಳಲ್ಲಿನ ಯಾವುದೇ ರೀತಿಯ ಪ್ರಕ್ರಿಯೆಗಳೂ ಸಹ ಧಾರ್ಮಿಕ ರಂಗುಗಳನ್ನು ಹೊಂದಿರದಂತೆ ನೋಡಿಕೊಳ್ಳಬೇಕು.

**ಕೆಕೆ:** ಗಾಂಧಿಯವರ ಇಷ್ಟದ ಭಜನೆಯಾದ *ವೈಷ್ಣವೋ ಜನ ತೋ, ತೇನೆ ಕಹಿಯೇ* ದ ಬಗ್ಗೆನೇ ಒಂದು ಪ್ರಶ್ನೆ ಕೇಳ್ತೇನೆ. ಒಂದು ವೇಳೆ ಶಾಲೆಯೊಂದು ಈ ಭಜನೆಯನ್ನು ಬೆಳಗಿನ ಸಭೆಯಲ್ಲಿ ಹಾಡಿಸಿದರೆ ಅದನ್ನು ನೀವು ಧಾರ್ಮಿಕ ಬೋಧನೆ ಅಂತ ತಿಳಿಯುತ್ತಿರೋ ಅಥವಾ ಬೇರೆಯವರ ನೋವನ್ನು ನಿಮ್ಮ ನೋವೆಂದು ತಿಳಿಯಬೇಕೆಂಬ ಭಾವನೆಯನ್ನು ದೇಶಕ್ಕೆ ಜ್ಞಾಪಿಸುವ, ರಾಷ್ಟ್ರೀಯ ಪರಂಪರೆಯನ್ನು ಮತ್ತೊಂದು ಮಟ್ಟಕ್ಕೆ ಕೊಂಡೊಯ್ಯುವ ಮಹತ್ಕಾರ್ಯವನ್ನು ಗಾಂಧೀಜಿ ಮಾಡಿದರು ಎಂದು ಹೇಳುತ್ತಿರೋ? ಅದೇ ರೀತಿ ಗಾಂಧಿಯವರೇ ರಚಿಸಿದ *ರಘುಪತಿ ರಾಘವ ರಾಜಾ ರಾಮ* ಗೀತೆಯನ್ನು ಶಾಲೆಯಲ್ಲಿ ಹಾಡಿದರೆ, ನಮಗೆ ಸಂತೋಷವಾಗುವುದಿಲ್ಲವೇ? ವಿಜ್ಞಾನದ ಮತ್ತು ವೈಜ್ಞಾನಿಕ ಕಟ್ಟರ್‌ವಾದವನ್ನು ಬೆಂಬಲಿಸುವಂತಹ ದಿನಗಳು ಬಂದಲ್ಲಿ ಅದು ನನಗೆ ಖೇದಕರ ಸಂಗತಿಯೆನಿಸುತ್ತದೆ. ನಮಗೆ ನಮ್ಮ ಪರಂಪರೆಯೊಂದಿಗೆ ತೊಡಗಿಸಿಕೊಳ್ಳುವ ವ್ಯಾಪಕ ಸ್ವಾತಂತ್ರ್ಯ ಮತ್ತು ಬೌದ್ಧಿಕ ಅವಕಾಶಗಳಿರಬೇಕು. ಒಂದು ವಿಷಯವನ್ನು ಅನುಭವಕ್ಕೆ ತರುವುದಕ್ಕಾಗಿ ಪ್ರಯೋಗಾತ್ಮಕ ಭಾಗವನ್ನು ಒಳಗೊಳ್ಳದಿದ್ದಲ್ಲಿ ಧರ್ಮದ ಶೈಕ್ಷಣಿಕ ಅಧ್ಯಯನದ ಅರ್ಥವೇನು?:

**ಎಫ್‌ಎಂ:** ಸಂವಿಧಾನದ 51ಎ ಪರಿಚ್ಛೇದ ಹೇಳುವುದೇನೆಂದರೆ, ಪ್ರಜೆಗಳು ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಮುಂದಾಳತ್ವವಹಿಸಿದ್ದವರ ಉದಾತ್ತವಾದ ಆದರ್ಶಗಳನ್ನು ನಾವು ಪಾಲಿಸಿ ಅನುಸರಿಸಬೇಕು. ಕೃಷ್ಣ ಕುಮಾರ್ ಹೇಳಿದ ಗಾಂಧಿ ಭಜನೆಯು ಈ ಪರಿಚ್ಛೇದದ ಅಡಿಯಲ್ಲೇ ಇದೆ ಎಂದು ನಾನು ಹೇಳಲು ಬಯಸುತ್ತೇನೆ. ನಮಗೆ ಈ ವ್ಯತ್ಯಾಸಗಳ ಮಧ್ಯೆ ಗೋಡೆ ಕಟ್ಟಿಕೊಳ್ಳಲು ಸಾಧ್ಯವಾಗದಿದ್ದಕ್ಕೆ ಇಂದು ನಮ್ಮ ಜಾತ್ಯಾತೀತ ದೇಶದಲ್ಲಿ ಧರ್ಮಗಳು ಕೇಂದ್ರಸ್ಥಾನವನ್ನು ಪಡೆದುಕೊಂಡುಬಿಡುತ್ತವೆ. ನಮಗೆ ಆಯ್ಕೆ ಎಂಬುದು ಇದ್ದಲ್ಲಿ ಧರ್ಮವನ್ನು ಶಾಲೆಯಿಂದ ಸಂಪೂರ್ಣವಾಗಿ ದೂರವಿಡುವುದು ಅತ್ಯಂತ ಕಡಿಮೆ ಅಪಾಯವನ್ನು ತರುತ್ತದೆ.

**ಅನುವಾದ: ರಾಘವೇಂದ್ರ ಬಿ.ಟಿ. ಬಳ್ಳಾರಿ ಜಿಲ್ಲಾ ಸಂಸ್ಥೆ**

**(ಸಂಚಿಕೆ 88, ಡಿಸೆಂಬರ್ 2019)**

# ರಾಷ್ಟ್ರೀಯ ಶಿಕ್ಷಣ ನೀತಿ–2019 ಕರಡು ಪ್ರತಿಯ ಮುಖ್ಯಾಂಶಗಳ ಮೇಲಿನ ಚರ್ಚೆ

–ಡಾ. ಶೌರೀಶ್ ಕುದ್ಕುಳಿ, ಜಿಲ್ಲಾ ಸಂಸ್ಥೆ, ಬೆಂಗಳೂರು

**1. ಭಾರತ ಸರಕಾರದ ಮಾನವ ಸಂಪನ್ಮೂಲ ಮಂತ್ರಾಲಯವು ಜೂನ್ 2017ರಂದು ಪ್ರಸ್ತುತ ಶಿಕ್ಷಣ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳನ್ನು ಅಧ್ಯಯನ ಮಾಡಲು ಮತ್ತು ಹೊಸ ಬಗೆಯ ಅಂಶಗಳನ್ನು ಪ್ರಸ್ತಾವಿಸಲು 'ರಾಷ್ಟ್ರೀಯ ಶಿಕ್ಷಣ ನೀತಿ'ಗಾಗಿ ಒಂದು ಸಮಿತಿಯನ್ನು ರಚಿಸಿತು. ಸಮಿತಿಯ ಮುಖ್ಯಸ್ಥರನ್ನಾಗಿ ಡಾ. ಕೆ. ಕಸ್ತೂರಿರಂಗನ್ ಅವರನ್ನು ನೇಮಿಸಲಾಗಿತ್ತು.**

2019ರ ಮೇ 31ರಂದು ಈ ಸಮಿತಿ ತನ್ನ ವರದಿಯನ್ನು ಮಾನವ ಸಂಪನ್ಮೂಲ ಮಂತ್ರಾಲಯಕ್ಕೆ ಸಲ್ಲಿಸಿದೆ ಮತ್ತು ಸಚಿವಾಲಯ ಸಾರ್ವಜನಿಕರ ಅಭಿಪ್ರಾಯಗಳಿಗೆ ಮನವಿ ಮಾಡಿದೆ.

ಈಗಿನ ಶಿಕ್ಷಣ ವ್ಯವಸ್ಥೆ ಹೊಂದಿರುವ ಪ್ರಮುಖ ಅಂಶಗಳನ್ನು ಈ ವರದಿಯಲ್ಲಿ ಪ್ರಸ್ತಾವಿಸಲಾಗಿದೆ

- **ಲಭ್ಯತೆ (access)**
- **ಸಮತೆ (equity)**
- **ಸಮಾನತೆ (equality)**
- **ಸಿಗುತ್ತಿರುವ ಸಾಮರ್ಥ್ಯ (affordability)**
- **ಉತ್ತರದಾಯಿತ್ವ (accountability)**

**2. ಶಾಲಾ ಶಿಕ್ಷಣದ ಬಗ್ಗೆ ಈ ಕೆಳಗಿನ ಆಯಾಮಗಳಲ್ಲಿ ಸಮಿತಿ ವಿವರಿಸಿದೆ**

- **ಪ್ರಾಥಮಿಕ ಶಾಲೆಯಿಂದ ಉನ್ನತ್ತ ಶಿಕ್ಷಣದವರೆಗೆಗಿನ ಅಂಶಗಳನ್ನು ವಿವರಿಸಲಾಗಿದೆ.**
- **ಈ ನೀತಿಯು ತನ್ನ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಿದೆ – 1.** ಆರಂಭಿಕ ಬಾಲ್ಯ ಪೋಷಣೆ ಮತ್ತು ಶಿಕ್ಷಣ 2. ಕಡ್ಡಾಯ ಶಿಕ್ಷಣ ಕಾಯ್ದೆ–2009, 3. ಪಠ್ಯಕ್ರಮ ಚೌಕಟ್ಟು, 4. ಶಾಲಾ ಪರೀಕ್ಷೆ ಸುಧಾರಣೆ 5. ಶಾಲಾ ಸೌಕರ್ಯಗಳು, 6. ಶಿಕ್ಷರ ನಿರ್ವಹಣೆ, 7. ಶಾಲಾ ನಿಯಂತ್ರಣಗಳು, 8. ರಾಷ್ಟ್ರೀಯ ಶಿಕ್ಷಣ ಆಯೋಗ/ ರಾಷ್ಟ್ರೀಯ ಶಿಕ್ಷಾ ಆಯೋಗ, 9. ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಇಲಾಖೆ – ಶಿಕ್ಷಣ ಮಂತ್ರಾಲಯ, 10. ಆರ್ಥಿಕ ಸಹಾಯ, 11. ತಂತ್ರಜ್ಞಾನದ ಬಳಕೆ, 13. ವೃತ್ತಿಪರ ಶಿಕ್ಷಣ, 14. ವಯಸ್ಕರ ಶಿಕ್ಷಣ, 15. ಶಿಕ್ಷಣ ಮತ್ತು ಭಾರತೀಯ ಭಾಷೆ

**ಶಾಲಾ ಶಿಕ್ಷಣ**

**3. ಆರಂಭಿಕ ಬಾಲ್ಯ ಪೋಷಣೆ ಮತ್ತು ಶಿಕ್ಷಣ:**

- ಪ್ರಸ್ತುತ ಇರುವ ಅಂಗನವಾಡಿಗಳ ಸ್ಥಿತಿಗಳನ್ನು ವಿಮರ್ಶಿಸಲಾಗಿದೆ 1) ಪಠ್ಯಕ್ರಮ ಮಗುವಿನ ಅಭಿವೃದ್ಧಿಗೆ ಶ್ರಮಿಸುತ್ತಿಲ್ಲ 2) ತರಬೇತಿ ಹೊಂದಿದ ಮತ್ತು ಒಳ್ಳೆಯ ಶಿಕ್ಷಕರ ಕೊರತೆ 3) ಪಾಠವಿಧಾನಗಳ ನ್ಯೂನತೆ.
- ಖಾಸಗಿ ಮತ್ತು ಅಂಗನವಾಡಿಗಳ ಮೂಲಕ ಈ ಶಿಕ್ಷಣವನ್ನು ನೀಡಲಾಗುತ್ತಿದೆ, ಶೈಕ್ಷಣಿಕ ಚಟುವಟಿಕೆಗಳಿಗೆ ಕಡಿಮೆ ಗಮನವನ್ನು ನೀಡಲಾಗಿದೆ
- ಹಾಗಾಗಿ 2 ಭಾಗಗಳಲ್ಲಿ ಪಠ್ಯಕ್ರಮವನ್ನು ರೂಪಿಸಲು ಸಲಹೆ ನೀಡಲಾಗಿದೆ
- 3 ವರ್ಷದವರೆಗಿನ ಮಕ್ಕಳ ಪೋಷಕರು ಮತ್ತು ಶಿಕ್ಷಕರಿಗೆ ಮಾರ್ಗಸೂಚಿಗಳು
- 3 ರಿಂದ 8 ವರ್ಷದವರೆಗಿನ ಮಕ್ಕಳಿಗೆ ಶೈಕ್ಷಣಿಕ ಪಠ್ಯಕ್ರಮ
- ಅಂಗನವಾಡಿಗಳನ್ನು ಪ್ರಾಥಮಿಕ ಶಾಲೆಗಳಿಗೆ ಸೇರಿಸುವ ಮೂಲಕ ಇದರ ಅನುಷ್ಠಾನ

**4. ಆರ್‌ಟಿಇ 2009**

- 6 ರಿಂದ 14 ವರ್ಷದವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು 2009ರ ಆರ್‌ಟಿಇ ಕಾಯ್ದೆ ಹೇಳುತ್ತದೆ
- ಈ ನೀತಿಯು 3 ರಿಂದ 18 ವರ್ಷದ ಮಕ್ಕಳನ್ನು ಈ ಕಾಯ್ದೆಯಡಿಯಲ್ಲಿ ತರಲು ಪ್ರಸ್ತಾವನೆ ಸಲ್ಲಿಸಿದೆ – ಆರಂಭಿಕ ಬಾಲ್ಯ ಮತ್ತು ಸೆಕೆಂಡರಿ ಶಿಕ್ಷಣವನ್ನು ಒಳಗೊಂಡಿದೆ

- ಸಿಸಿಇ ಮತ್ತು ಅನುತ್ತೀರ್ಣಗೊಳಿಸುವ ಪದ್ಧತಿಯನ್ನು ಪುನರ್ ಪರಿಶೀಲಿಸಿದೆ – 8 ನೇ ತರಗತಿ ತನಕ ಮಕ್ಕಳನ್ನು ಅನುತ್ತೀರ್ಣ ಮಾಡುವ ಹಾಗಿಲ್ಲ. ಆದರೆ ಮಕ್ಕಳು ನಿರ್ದಿಷ್ಟ ಕಲಿಕಾ ಪ್ರಗತಿಯನ್ನು ಸಾಧಿಸಿದ್ದಾರೆ ಎನ್ನುವುದನ್ನು ದೃಢೀಕರಿಸಬೇಕು

**5. ಪಠ್ಯಕ್ರಮ ಚೌಕಟ್ಟು**

- ಈಗಿನ ಪಠ್ಯಕ್ರಮ ಚೌಕಟ್ಟನ್ನು – ಮಕ್ಕಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು – ಪುನರ್ ಪರಿಶೀಲಿಸಬೇಕು
- ಇದು 5–3–3–4 ರ ವಿನ್ಯಾಸವನ್ನು ಹೊಂದಿದೆ –

  – 5 ವರ್ಷಗಳ ಮೂಲ ಅಡಿಪಾಯದ ಹಂತ– 3 ವರ್ಷ ಪೂರ್ವ ಪ್ರಾಥಮಿಕ ಹಾಗೂ ತರಗತಿ ಒಂದು ಮತ್ತು ಎರಡು

  – 3 ವರ್ಷದ ಪೂರ್ವಸಿದ್ಧತಾ ಹಂತ – ತರಗತಿ 3 ರಿಂದ 5

  – 3 ವರ್ಷದ ಮಧ್ಯಮ ಹಂತ – ತರಗತಿ 6 ರಿಂದ 8

  – 4 ವರ್ಷದ ದ್ವಿತೀಯ ಹಂತ – ತರಗತಿ 9 ರಿಂದ 12
- ಪ್ರಸ್ತುತ ಇರುವ ಶೈಕ್ಷಣಿಕ ಪದ್ಧತಿಯು ಕಂಠಪಾಠ ಕಲಿಕಾ ವಿಧಾನವನ್ನು ಹೊಂದಿದೆ ಎಂದು ಸಮಿತಿ ಹೇಳಿದೆ
- ಹಾಗಾಗಿ ಪ್ರತಿ ವಿಷಯವೂ ಪ್ರಮುಖ ವಿಷಯಗಳನ್ನು ಹೊಂದಬೇಕು – ಈ ಮೂಲಕ ಸಮಗ್ರ, ಚರ್ಚೆ ಹಾಗೂ ವಿಶ್ಲೇಷಣಾತ್ಮಕ ಕಲಿಕೆಗೆ ಅವಕಾಶ ಕಲ್ಪಿಸಬೇಕು ಎಂದು ಹೇಳುತ್ತದೆ

**6. ಶಾಲಾ ಪರೀಕ್ಷೆ ಸುಧಾರಣೆಗಳು**

- ಈಗಿನ ಬೋರ್ಡ್ ಪರೀಕ್ಷಾ ಪದ್ಧತಿಯು –

  – ಕೆಲವು ವಿಷಯಗಳಿಗೆ ಹೆಚ್ಚಿನ ಗಮನಹರಿಸುವಂತೆ ಮಕ್ಕಳನ್ನು ಒತ್ತಾಯಿಸುತ್ತದೆ

  – ಮಕ್ಕಳ ಕಲಿಕೆಯನ್ನು ರಚನಾತ್ಮಕವಾಗಿ ಪರೀಕ್ಷಿಸುತ್ತಿಲ್ಲ

  – ಮಕ್ಕಳಲ್ಲಿ ಒತ್ತಡವನ್ನು ಹೆಚ್ಚಿಸುತ್ತದೆ
- ಮಕ್ಕಳ ಶಾಲಾ ಅನುಭವಗಳನ್ನು ಅಭಿವೃದ್ಧಿಪಡಿಸಿದ ರೀತಿಯಲ್ಲಿ ಕಂಡುಹಿಡಿಯಲು ಈ ಕರಡು ಪ್ರತಿ–

  – ರಾಜ್ಯ ಗಣತಿ ಪರೀಕ್ಷೆಯನ್ನು ತರಗತಿ 3, 5 ಮತ್ತು 8 ರಲ್ಲಿ ಕೈಗೊಳ್ಳಲು ಪ್ರಸ್ತಾಪಿಸಿದೆ

  – ಪ್ರಮುಖ ಪರಿಕಲ್ಪನೆಗಳು, ಪರಿಣತಿ, ಉನ್ನತ್ತ ಸ್ತರದ ಸಾಮರ್ಥ್ಯಗಳನ್ನು ಪರೀಕ್ಷೆಗೊಳಪಡಿಸಲು ಸಲಹೆ ನೀಡಿದೆ
- ಈ ರೀತಿಯ ಬೋರ್ಡ್ ಪರೀಕ್ಷೆಗಳು ವಿಷಯವಾರು ಭಿನ್ನವಾಗಿರುತ್ತವೆ, ಮಕ್ಕಳು ತಮ್ಮ ವಿಷಯ, ಸೆಮಿಸ್ಟರ್‌ಗಳಿಗನುಗುಣವಾಗಿ ಬೇಕೆಂದೆನಿಸಿದಾಗ ಈ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು
- ಶಾಲಾ ಅಂತಿಮ ಪರೀಕ್ಷೆಗಳು ಈ ರೀತಿಯ ಬೋರ್ಡ್ ಪರೀಕ್ಷೆಗಳಾಗಿ ಮಾರ್ಪಡಬಹುದು

**7. ಶಾಲಾ ಸೌಲಭ್ಯಗಳು**

- ಪ್ರತಿ ಗ್ರಾಮ/ಜನವಸತಿ ಪ್ರದೇಶದಲ್ಲಿ ಪ್ರಾಥಮಿಕ ಶಾಲೆಗಳನ್ನು ಆರಂಭಿಸಿದ್ದು ಶಿಕ್ಷಣ ಪಡೆಯುವಲ್ಲಿ ಗಣನೀಯ ಏರಿಕೆಯಾಗಿದೆ.
- ಆದರೆ ಕಡಿಮೆ ಮಕ್ಕಳನ್ನು ಹೊಂದಿರುವ ಸಣ್ಣ ಶಾಲೆಯನ್ನು ಅಭಿವೃದ್ಧಿಪಡಿಸುವಲ್ಲಿ ಇದು ತೊಡಕಾಗಿದೆ.
- ಕಡಿಮೆ ಮಕ್ಕಳನ್ನು ಹೊಂದಿರುವ ಸಣ್ಣ ಶಾಲೆಗಳನ್ನು ಕಾರ್ಯಗೊಳಿಸುವಂತೆ ಮಾಡುವುದು ಸಂಕೀರ್ಣವಾಗಿದ್ದು, ಅಲ್ಲಿಗೆ ಶಿಕ್ಷಕರು, ಮತ್ತು ಭೌತಿಕ ಸವಲತ್ತುಗಳನ್ನು ಒದಗಿಸುವುದೂ ಕಷ್ಟಕರ
- ***ಹಾಗಾಗಿ ಈ ಕರಡು ಪ್ರಸ್ತಾವನೆಯಲ್ಲಿ ಒಂದು ಶಾಲಾ ಸಂಕೀರ್ಣದಲ್ಲಿ (School complex) ಬಹುವಿಧದ ಪಬ್ಲಿಕ್ ಶಾಲೆಗಳನ್ನು ಹೊಂದುವಂತೆ ಶಿಫಾರಸ್ಸು ಮಾಡಿದೆ***
- ***ಈ ಶಾಲಾ ಸಂಕೀರ್ಣವು ಒಂದು ಸೆಕೆಂಡರಿ ಶಾಲೆ – 9ರಿಂದ 12 – ಮತ್ತು ಪೂರ್ವ ಪ್ರಾಥಮಿಕದಿಂದ 8ನೇ ತರಗತಿಯವರೆಗೆ ಇರುವ ಸುತ್ತಮುತ್ತಲಿನ ಪಬ್ಲಿಕ್ ಶಾಲೆಗಳನ್ನು ಹೊಂದಿರುತ್ತದೆ***
- ***ಶಾಲಾ ಸಂಕೀರ್ಣವು ಅಂಗನವಾಡಿ, ವೃತ್ತಿಪರ ಶಿಕ್ಷಣ ಸೌಲಭ್ಯಗಳು ಹಾಗೂ ವಯಸ್ಕ ಶಿಕ್ಷಣ ಕೇಂದ್ರಗಳನ್ನು ಹೊಂದಿರುತ್ತದೆ***
- ***ಪ್ರತಿ ಶಾಲಾ ಸಂಕೀರ್ಣವು ಅರೆ–ಸ್ವಾಯತ್ತ ಘಟಕಗಳಾಗಿ ಸಮಗ್ರ ಶಿಕ್ಷಣವನ್ನು ಆರಂಭಿಕ ಬಾಲ್ಯದಿಂದ ಸೆಕೆಂಡರಿ ಶಿಕ್ಷಣದ ತನಕ ನೀಡಬೇಕು***
- ***ಸಂಪನ್ಮೂಲಗಳಾದ ಮೂಲಸೌಕರ್ಯ ಮತ್ತು ನುರಿತ ಶಿಕ್ಷಕರನ್ನು ಶಾಲಾ ಸಂಕೀರ್ಣದ ಎಲ್ಲೆಡೆಯೂ ಪರಿಣಾಮಕಾರಿಯಾಗಿ ಬಳಸುವಂತೆ ಸಲಹೆ ನೀಡಿದೆ.***

**8. ಶಿಕ್ಷಕರ ನಿರ್ವಹಣೆ**

- ಮಿತಿಮೀರಿದ ಶಿಕ್ಷಕರ ಕೊರತೆ, ವೃತ್ತಿಪರ ಅರ್ಹ ಶಿಕ್ಷಕರ ಕೊರತೆ ಮತ್ತು ಶಿಕ್ಷಣೇತರ ಕಾರ್ಯಗಳಿಗೆ ಶಿಕ್ಷಕರನ್ನು ನಿಯೋಜನೆಗೊಳಿಸುತ್ತಿರುವುದನ್ನು ಸಮಿತಿ ಪ್ರಸ್ತಾಪಿಸಿದೆ
- ಕರಡು ಪ್ರತಿಯು ಶಿಕ್ಷಕರನ್ನು ಕನಿಷ್ಠ 5ರಿಂದ 7 ವರ್ಷಗಳವರೆಗೆ ಶಾಲಾ ಸಂಕೀರ್ಣದಲ್ಲಿ ನಿಯೋಜಿಸಬೇಕು ಎಂದು ಹೇಳಿದೆ
- ಶಾಲಾ ವೇಳೆಯಲ್ಲಿ ಶಿಕ್ಷಣೇತರ ಕಾರ್ಯಗಳಿಗೆ ಶಿಕ್ಷಕರನ್ನು ನಿಯೋಜನೆಗೊಳಿಸಬಾರದು, ಅದು ಅವರ ಬೋಧನೆಯ ಸಾಮಾರ್ಥ್ಯಕ್ಕೆ ತೊಂದರೆಯುಂಟುಮಾಡುತ್ತಿದೆ
- ಶಿಕ್ಷಕರ ತರಬೇತಿಗೆ ಸಂಬಂಧಿಸಿದಂತೆ – ಈಗ ಇರುವ ಬಿ.ಎಡ್ ಕಾರ್ಯಕ್ರಮವನ್ನು 4 ವರ್ಷದ ಸಮಗ್ರ ಬಿ.ಎಡ್ ಗೆ ವರ್ಗಾಯಿಸುವುದು. ಅಲ್ಲಿ ಉನ್ನತ್ತಮಟ್ಟದ ಪರಿಕಲ್ಪನೆಗಳು, ವಿಧಾನ ಹಾಗೂ ಕ್ಷೇತ್ರ ಕಾರ್ಯದ ಅನುಭವವಿರಬೇಕು
- ಪ್ರತಿ ವಿಷಯಕ್ಕೆ ನಿರಂತರ ಸಮಗ್ರ ವೃತ್ತಿಪರ ಬೆಳವಣಿಗೆಯನ್ನು ಅಭಿವೃದ್ಧಿಪಡಿಸುವುದು
- ಪ್ರತಿ ವರ್ಷ ಕನಿಷ್ಠ 50 ಗಂಟೆಗಳ ನಿರಂತರ ಸಮಗ್ರ ವೃತ್ತಿಪರ ಬೆಳವಣಿಗೆಯನ್ನು ಶಿಕ್ಷಕರು ಹೊಂದುವುದು

**9. ಶಾಲಾ ನಿಯಂತ್ರಣ**

- ಶಾಲಾ ನಿಯಂತ್ರಣವು, ನೀತಿ ರೂಪಿಸುವುದು, ಶಾಲಾ ಪ್ರಕ್ರಿಯೆಗಳು ಹಾಗೂ ಶೈಕ್ಷಣಿಕ ಅಭಿವೃದ್ಧಿಗಳಿಂದ ಪ್ರತ್ಯೇಕವಾಗಿರುವಂತೆ ಕರಡು ಪ್ರತಿ ಹೇಳುತ್ತದೆ
- ಸ್ವತಂತ್ರವಾಗಿರುವ ***ರಾಜ್ಯ ಶಾಲಾ ನಿಯಂತ್ರಣ ಪ್ರಾಧಿಕಾರವನ್ನು*** ಪ್ರತಿ ರಾಜ್ಯವೂ ಹೊಂದುವುದು ಮತ್ತು ಅದು ಪಬ್ಲಿಕ್ ಹಾಗೂ ಖಾಸಗಿ ಶಾಲೆಗಳು ಅನುಸರಿಸಬೇಕಾದ ನಿಯಮಗಳನ್ನು ರೂಪಿಸುವುದು ಎಂದು ಹೇಳಿದೆ.
- ಪ್ರಸ್ತುತ ರಾಜ್ಯದಲ್ಲಿ ಇರುವ ಶಿಕ್ಷಣ ಇಲಾಖೆಯು ನೀತಿಗಳನ್ನು ರೂಪಿಸುವುದು ಹಾಗೂ ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಮಾಡುವುದು

**10. ಶೈಕ್ಷಣಿಕ ಆಡಳಿತ**

- ಸಮಿತಿಯು ಈಗ ಇರುವ ಶಿಕ್ಷಣದ ಆಡಳಿತ ವ್ಯವಸ್ಥೆಯನ್ನು ಪುನರ್ ಪರಿಶೀಲಿಸಿದೆ ಮತ್ತು ವಿವಿಧ ಸಚಿವಾಲಯ, ಇಲಾಖೆ ಹಾಗೂ ಏಜೆನ್ಸಿಗಳ ನಡುವೆ ಸಹಕಾರವನ್ನು ಬಯಸುತ್ತದೆ. ಈ ನಿಟ್ಟಿನಲ್ಲಿ ಕೆಲವು ಸಲಹೆಗಳನ್ನು ನೀಡಿದೆ
  - ***ರಾಷ್ಟ್ರೀಯ ಶಿಕ್ಷಣ ಆಯೋಗ*** ಅಥವಾ ರಾಷ್ಟ್ರೀಯ ಶಿಕ್ಷಾ ಆಯೋಗವನ್ನು ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ಉನ್ನತ್ತಮಟ್ಟದಲ್ಲಿ ರಚಿಸುವುದು
  - ಈ ಆಯೋಗವು ಅಭಿವೃದ್ಧಿ, ಅನುಷ್ಠಾನ, ಮೌಲ್ಯಮಾಪನ ಮತ್ತು ರಾಷ್ಟ್ರದ ಶಿಕ್ಷಣದ ಆಶಯಗಳ ಪರಿಷ್ಕರಣೆಯಂತಹ ಜವಾಬ್ದಾರಿಯನ್ನು ಸತತ ಮತ್ತು ಸುಸ್ಥಿರವಾಗಿ ಮಾಡುವುದು
  - ಈ ಆಯೋಗವು ಎನ್‌ಸಿಇಆರ್‌ಟಿ, ಪ್ರಸ್ತಾಪಿತ ರಾಷ್ಟ್ರೀಯ ಪ್ರೌಢ ಶಿಕ್ಷಣ ನಿಯಂತ್ರಣಾ ಪ್ರಾಧಿಕಾರ ಮತ್ತು ರಾಷ್ಟ್ರೀಯ ಸಂಶೋಧನಾ ಫೌಂಡೇಷನ್ ನ ಕಾರ್ಯಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುತ್ತದೆ
- ***ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಮಂತ್ರಾಲಯವನ್ನು ಶಿಕ್ಷಣ ಸಚಿವಾಲಯವಾಗಿ ಮಾರ್ಪಡಿಸಿ, ಶಿಕ್ಷಣವನ್ನು ಕೇಂದ್ರೀಕರಿಸುವಂತೆ ಮಾಡುವುದು***

**11. ಶಿಕ್ಷಣಕ್ಕೆ ಹಣಕಾಸಿನ ಹೊಂದಿಕೆ**

- ಜಿಡಿಪಿಯ ಶೇ. 6 ರಷ್ಟು ಹಣವನ್ನು ಶಿಕ್ಷಣಕ್ಕೆ ವಿನಿಯೋಗಿಸುವುದು (1968 ಮತ್ತು 1986ರಲ್ಲಿ ಶೇ. 6). ಆದರೆ 2017–18ರಲ್ಲಿ ಜಿಡಿಪಿಯ ಶೇ. 2.7ನ್ನು ವಿನಿಯೋಗಿಸಲಾಗಿದೆ
- ಶಿಕ್ಷಣಕ್ಕೆ ಉಪಯೋಗಿಸುವ ಸಾರ್ವಜನಿಕ ವೆಚ್ಚ ಶೇ. 10 ರಿಂದ ಶೇ. 20ಕ್ಕೆ ಏರಿಸಿದೆ. ಹೆಚ್ಚುವರಿಯಾದ ಶೇ 10 ನ್ನು – ಶೇ 5ನ್ನು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳು, ಶೇ. 2ನ್ನು ಹೆಚ್ಚುವರಿ ಶಿಕ್ಷಕರಿಗೆ ಅಥವಾ ಶಾಲಾ ಸಂಪನ್ಮೂಲಗಳಿಗೆ, ಶೇ. 1.4ನ್ನು ಆರಂಭಿಕ ಬಾಲ್ಯ ಮತ್ತು ಶಿಕ್ಷಣಕ್ಕೆ ವಿನಿಯೋಗಿಸಲಾಗುವುದು
- ಡಯಟ್‌ಗಳು ಸುಮಾರು ಶೇ. 45ರಷ್ಟು ಹಣವನ್ನು ಉಪಯೋಗಿಸದೇ ಅಥವಾ ಪರಿಣಾಮಕಾರಿಯಾಗಿ ಉಪಯೋಗಿಸದೇ ಹಿಂದಿ ರುಗಿಸಿವೆ. ಸಮಿತಿಯು ಸಮಯಕ್ಕೆ ಸರಿಯಾಗಿ ಅನುದಾನವನ್ನು ಉಪಯೋಗಿಸಲು ಸಲಹೆ ನೀಡಿದೆ

**12. ಶಿಕ್ಷಣದಲ್ಲಿ ತಂತ್ರಜ್ಞಾನ**

- ತಂತ್ರಜ್ಞಾನವನ್ನು –
  - – ತರಗತಿಕೋಣೆಯ ಬೋಧನಾ ಪ್ರಕ್ರಿಯೆ, ಕಲಿಕೆ ಮತ್ತು ಮೌಲ್ಯಮಾಪನ ಪ್ರಗತಿಗೆ ಬಳಸುವುದು
  - – ಶಿಕ್ಷಕರ ವೃತ್ತಿಪರ ಅಭಿವೃದ್ಧಿಗೆ ಬೇಕಾದ ತಯಾರಿಗಾಗಿ
  - – ಅವಕಾಶವಂಚಿತ ಪ್ರದೇಶಗಳ ಶಿಕ್ಷಣಕ್ಕಾಗಿ
  - – ಶಿಕ್ಷಣದ ಸಮಗ್ರ ಯೋಜನೆ, ಆಡಳಿತ ಮತ್ತು ನಿರ್ವಹಣೆಗಾಗಿ
- ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆಯನ್ನು ಆರಂಭಿಸುವುದು
- ಶೈಕ್ಷಣಿಕ ಅಂಕಿ–ಅಂಶಗಳ ರಾಷ್ಟ್ರೀಯ ಭಂಡಾರವನ್ನು ಆರಂಭಿಸಿ – ಶಾಲಾ ದಾಖಲಾತಿಗಳನ್ನು ನಿರ್ವಹಿಸುವುದು

**13. ವೃತ್ತಿಪರ ಶಿಕ್ಷಣ**

- ಎಲ್ಲಾ ಮಕ್ಕಳು, ಕನಿಷ್ಠ 9 ಮತ್ತು 12 ನೇ ತರಗತಿಯ ಎಲ್ಲಾ ಮಕ್ಕಳು ವೃತ್ತಿಪರ ಶಿಕ್ಷಣವನ್ನು ಪಡೆಯುವುದು
- ವೃತ್ತಿಪರ ಶಿಕ್ಷಣದ ಸಮಗ್ರ ನಿರ್ವಹಣೆಗೆ ರಾಷ್ಟ್ರೀಯ ಸಮಿತಿಯನ್ನು ಆರಂಭಿಸಿವುದು

**14 ವಯಸ್ಕರ ಶಿಕ್ಷಣ**

- 2011ರ ಗಣತಿಯ ಪ್ರಕಾರ 3.26 ಕೋಟಿ ಯುವಕರು (15–24 ವರ್ಷದ) ಅನಕ್ಷರಸ್ಥರಾಗಿದ್ದಾರೆ. ಈ ನಿಟ್ಟಿನಲ್ಲಿ ವಯಸ್ಕ ಶಿಕ್ಷಣದ ಕೇಂದ್ರೀಯ ಸಂಸ್ಥೆಯನ್ನು ಎನ್‌ಸಿಇಆರ್‌ಟಿ ಭಾಗವಾಗಿ ಆರಂಭಿಸುವುದು, ಅದು ರಾಷ್ಟ್ರಿಯ ಪಠ್ಯಕ್ರಮವನ್ನು ವಯಸ್ಕರ ಶಿಕ್ಷಣಕ್ಕೆ ರೂಪಿಸುವುದು – ಮೂಲ ಭಾಷೆ ಮತ್ತು ಗಣಿತ ಕ್ರಿಯೆಗಳು, ಜೀವನ ಕೌಶಲ ಇತ್ಯಾದಿ

**15. ಶಿಕ್ಷಣ ಮತ್ತು ಭಾರತೀಯ ಭಾಷೆ**

- ಹೆಚ್ಚಿನ ಮಕ್ಕಳು ತಮಗೆ ಗೊತ್ತಿಲ್ಲದ ಭಾಷೆಯಲ್ಲಿ ಕಲಿಯುತ್ತಿರುವುದನ್ನು ಸಮಿತಿ ಪ್ರಸ್ತಾಪಿಸಿದೆ.
- ಹಾಗಾಗಿ ಶಾಲೆಯಲ್ಲಿ ಭಾಷಾ ಮಾಧ್ಯಮವು ಮನೆ/ಮಾತೃ/ಸ್ಥಳೀಯ ಭಾಷೆಯನ್ನು ತರಗತಿ 5 (ಸಾಧ್ಯವಾದಲ್ಲಿ ತರಗತಿ 8ರವರೆಗೆ) ತನಕ ಹೊಂದಬೇಕೆಂದು ಹೇಳಿದೆ.
- ತ್ರಿಭಾಷಾ ಸೂತ್ರವನ್ನು ಮುಂದುವರೆಸುವುದು – ಹಿಂದಿ ಮಾತನಾಡುವ ರಾಜ್ಯಗಳಲ್ಲಿ ಇದರ ಅನುಷ್ಠಾನಕ್ಕೆ ಹೆಚ್ಚು ಒತ್ತು ನೀಡುವುದು – ಇಲ್ಲಿ ಭಾರತದ ಇತರೆ ಭಾಷೆಗಳನ್ನು ದೇಶದ ಸಮಗ್ರತೆಗಾಗಿ ಬೋಧಿಸಬೇಕು
- ಭಾರತೀಯ ಭಾಷೆಯನ್ನು ಉತ್ತೇಜಿಸುವಲ್ಲಿ ಪಾಲಿ, ಪರ್ಶಿಯನ್ ಮತ್ತು ಪ್ರಾಕೃತ ಭಾಷೆಗಳ **ರಾಷ್ಟ್ರೀಯ ಸಂಸ್ಥೆಯನ್ನು** ಆರಂಭಿಸುವುದು

**MyGov Innovation | National Education Policy 2019**

**Innovate.mygov.in**

**Comments to be put here –** https://innovate.mygov.in/new-education-policy-2019

**How to use:** ⍰ This is the site where you can submit your views on National Education Policy -2019. You have to open through your mail, sign in through your e-mail password, enter your mobile number. You will get OTP, enter OTP. After entering OTP, you will be able to view various sections, select any one or more and put your comments and submit it.

**July 31st is the last date for submission.**

**(ಸಂಚಿಕೆ 85, ಸೆಪ್ಟಂಬರ್ 2019)**

## ಇದರೊಂದಿಗೆ ಇನ್ನಷ್ಟು ಓದಿಗಾಗಿ

ಬಯಲು 100ನೇ ಸಂಚಿಕೆಯ ಮೊದಲ ಭಾಗ




100 ಪುಸ್ತಕಗಳ ವಿಮರ್ಶೆಯ ಮೊದಲ ಭಾಗ

